www.prajavani.net

prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**
ಖೋಟಾ ರೇಟಿಂಗು ಗಳನ್ನು ಕಂಡುಹಿಡಿಯಲು ಮಶೀನ್ ಲರ್ನಿಂಗಿನ ತಂತ್ರಗಳು ಬಳಕೆಯಾಗಲಿವೆಯಂತೆ!

ಅಂತರರಾಷ್ಟ್ರೀಯ ಯೋಗ ದಿನ ಇಂದು 7 ('ವಿಶ್ವ ಯೋಗ ದಿನ')

ಸುಳ್ಳು ಸುದ್ದಿಗೆ ಕಡಿವಾಣ: ಸಿ.ಎಂ ಸೂಚನೆ 5

ಮಣಿಪುರ: ಹೈಕೋರ್ಟ್‌ಗೆ ಮರುಪರಿಶೀಲನೆ ಅರ್ಜಿ 9

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 63,327 ▲ | 18,816 ▲ | ₹61,050 (ಬೆಂಗಳೂರು) ▼ | ₹74,500 (ಬೆಂಗಳೂರು) ▼ | 82.09 ▼ |

ಬಿಲ್ ಬಂದೆಡೆ ಗಾಬರಿ ಮೂಡಿಸಿದ ದುಪ್ಪಟ್ಟು ಮೊತ್ತ ● ಆನ್‌ಲೈನ್ ಪಾವತಿಯೂ 'ಫೇಲ್'

# ಬಾರದ ಬಿಲ್; ತೀರದ ಗೊಂದಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಎಲ್ಲ ಎಸ್ಕಾಂಗಳ ವ್ಯಾಪ್ತಿಯಲ್ಲಿ ವಿದ್ಯುತ್ ಬಿಲ್ ಅನ್ನು ತಡವಾಗಿ ನೀಡಲಾಗುತ್ತಿದ್ದು, ಬಿಲ್ ಮೊತ್ತವನ್ನು ನೋಡಿ ಗ್ರಾಹಕರು ಗಾಬರಿಯಾಗಿದ್ದಾರೆ. ಮತ್ತೆ ಕೆಲವು ಕಡೆ ಇನ್ನೂ ಬಿಲ್ ನೀಡಲಾಗಿಲ್ಲ. ಹೀಗಾಗಿ, ಎಷ್ಟು ಹಣ ಪಾವತಿಸಬೇಕಾಗುವುದೋ ಎಂಬ ಆತಂಕ ಜನರನ್ನು ಕಾಡುತ್ತಿದೆ.

ಈ ಸಲ ಬಿಲ್ ದುಪ್ಪಟ್ಟು ಬಂದಿದೆ. ಆನ್‌ಲೈನ್‌ನಲ್ಲಿ ಪರಿಶೀಲಿಸಿದರೆ ಬೇರೆಯದೇ ಮೊತ್ತವನ್ನು ತೋರಿಸುತ್ತಿದೆ ಎನ್ನುವ ದೂರು ಹಲವು ಗ್ರಾಹಕರದ್ದು. ಗ್ರಾಮೀಣ ಪ್ರದೇಶದಲ್ಲಿ ಮನೆಯ ಬಾಡಿಗೆಗಿಂತ ವಿದ್ಯುತ್ ಬಿಲ್ ಹೆಚ್ಚು ಬಂದ ಪ್ರಕರಣಗಳೂ ವರದಿಯಾಗಿವೆ. ಹೆಚ್ಚುಕಡಿಮೆ ಒಂದೂವರೆ ತಿಂಗಳ ಬಿಲ್ ಜತೆಗೆ ಬಾಕಿ ಮೊತ್ತ ಸಹ ಸೇರಿಕೊಂಡು ಬಿಲ್ ಮೊತ್ತ ದುಪ್ಪಟ್ಟಾಗುವಂತೆ ಮಾಡಿದೆ.

ವಿದ್ಯುತ್ ದರ ಆಕರಿಸುವಲ್ಲಿ ಈ ಮೊದಲು ಅನುಸರಿಸುತ್ತಿದ್ದ ವ್ಯವಸ್ಥೆಯಲ್ಲಿ ಬದಲಾವಣೆ ತರಲಾಗಿದೆ. ಮೊದಲಿದ್ದ 4 ಸ್ಲ್ಯಾಬ್‌ಗಳ ಬದಲು ಈಗ ಎರಡೇ ಸ್ಲ್ಯಾಬ್ ಪರಿಚಯಿಸಲಾಗಿದೆ. ಬಿಲ್ ಹೆಚ್ಚಳದಲ್ಲಿ ಸ್ಲ್ಯಾಬ್‌ನಲ್ಲಿ ಆಗಿರುವ ಬದಲಾವಣೆಯ ಪಾತ್ರವೂ ಇದೆ ಎಂದು ಎಸ್ಕಾಂ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

| | ಗ್ರಾಹಕರ ದೂರೇನು? | ಎಸ್ಕಾಂ ಅಧಿಕಾರಿಗಳು ಹೇಳುವುದೇನು? |
|---|---|---|
| 1 | ಸಾಮಾನ್ಯವಾಗಿ ಪ್ರತಿ ತಿಂಗಳು 8ರಿಂದ 10ನೇ ತಾರೀಖಿನ ಒಳಗೆ ಬಿಲ್ ಬರುತ್ತಿತ್ತು. ನಮಗೆ ಇನ್ನೂ ವಿದ್ಯುತ್ ಬಿಲ್ ಬಂದೇ ಇಲ್ಲ. ಪ್ರತೀ ದಿನ ಮೀಟರ್ ರೀಡರ್‌ನ ಬರುವನ್ನು ಎದುರು ನೋಡುವುದೇ ಕಾಯಕವಾಗಿದೆ | ಯೂನಿಟ್ ದರ ಪರಿಷ್ಕರಣೆಗಾಗಿ ಸಾಫ್ಟ್‌ವೇರ್ ಅಪ್‌ಡೇಟ್ ಮಾಡುತ್ತಿದ್ದ ಕಾರಣಕ್ಕೆ ವಿದ್ಯುತ್ ಬಿಲ್ ನೀಡಲು ವಿಳಂಬವಾಗಿದೆ. ಗ್ರಾಹಕರಿಗೆ ಬಿಲ್ ಒದಗಿಸುವ ಕಾರ್ಯ ಶೀಘ್ರ ಪೂರ್ಣಗೊಳ್ಳಲಿದೆ |
| 2 | ಪ್ರತಿ ತಿಂಗಳು ಬಿಲ್ ನೀಡಿದ ನಂತರ ಪಾವತಿಗೆ ಕನಿಷ್ಠ 13 ದಿನ ಅವಕಾಶ ಇರುತ್ತಿತ್ತು. ಈ ಬಾರಿ ಕೊನೆಯ ದಿನಾಂಕಕ್ಕೆ ಎರಡು ದಿನ ಮುಂಚಿತವಾಗಿ ಬಿಲ್ ಕೈ ತಲುಪಿದೆ.ಕೊನೆಯ ದಿನಾಂಕ ಮೀರಿದರೆ ವಿದ್ಯುತ್ ಕಡಿತಗೊಳಿಸಬಹುದು ಎಂಬ ಭಯ | ಬಿಲ್ ಪಾವತಿ ಅವಧಿಗೆ ಹೆಚ್ಚುವರಿ ಒಂದು ವಾರ ಕಾಲಾವಕಾಶ ನೀಡಲು ಸೂಚಿಸಲಾಗಿದೆ. ಗ್ರಾಹಕರಿಗೆ ಯಾವುದೇ ಭಯ ಬೇಡ |
| 3 | ಪ್ರತಿ ತಿಂಗಳು ನಮ್ಮ ಬಿಲ್ ₹ 500ರ ಆಸುಪಾಸಿನಲ್ಲಿ ಇರುತ್ತಿತ್ತು. ಈ ಬಾರಿ ಮೂರು ಪಟ್ಟು ಹೆಚ್ಚಿಗೆ, ಅಂದರೆ ₹ 1,400 ಬಿಲ್ ಬಂದಿದೆ | ಏಪ್ರಿಲ್‌ನಲ್ಲಿ ವಿದ್ಯುತ್ ದರ ಪರಿಷ್ಕರಣೆ ಆಗಿದ್ದು, ಪ್ರತಿ ಯೂನಿಟ್ ಮೇಲೆ 70 ಪೈಸೆ ಹೆಚ್ಚಳವಾಗಿದೆ. ಈ ಹೆಚ್ಚುವರಿ ಮೊತ್ತ ಮೇ ತಿಂಗಳಿನ ಬಿಲ್‌ನಲ್ಲಿ ಸೇರಬೇಕಿತ್ತು. ಆದರೆ, ಕೆಇಆರ್‌ಸಿಯಿಂದ ಮೇ 12ಕ್ಕೆ ಪರಿಷ್ಕೃತ ದರದ ಆದೇಶ ಬಂದಿದ್ದರಿಂದ, ಪೂರ್ವಾನ್ವಯ ಪರಿಷ್ಕೃತ ದರವನ್ನು ಜೂನ್ ಬಿಲ್‌ನಲ್ಲಿ ಸೇರ್ಪಡೆ ಮಾಡಲಾಗಿದೆ |
| 4 | ಆನ್‌ಲೈನ್ ಮೂಲಕ ಪಾವತಿ ಸಾಧ್ಯವಾಗುತ್ತಿಲ್ಲ. ಮೊದಲಾದರೆ ಪ್ರತಿ ತಿಂಗಳು 10ನೇ ತಾರೀಖಿನ ಒಳಗೆ ವಿದ್ಯುತ್ ಬಿಲ್ ಗ್ರಾಹಕರ ಮನೆಗೆ ತಲುಪುತ್ತಿತ್ತು. ಬಿಲ್ ಕೊಟ್ಟ ಎರಡು ದಿನಗಳಲ್ಲಿ ಫೋನ್ ಪೇ, ಗೂಗಲ್ ಪೇ ಹೀಗೆ ವಿವಿಧ ಆ್ಯಪ್‌ಗಳಲ್ಲಿ ಅಪ್‌ಡೇಟ್ ಆಗುತ್ತಿತ್ತು | ಸಾಫ್ಟ್‌ವೇರ್ ಅಪ್‌ಡೇಟ್ ಆಗುತ್ತಿರುವ ಕಾರಣ ಆನ್‌ಲೈನ್ ಪಾವತಿ ಸಮಸ್ಯೆ ಎದುರಾಗಿರುವುದು ನಿಜ. ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಿಗಾಗಲಿ, ಎಸ್ಕಾಂ ಕಚೇರಿಗಳಿಗಾಗಲಿ ತೆರಳಿ ಬಿಲ್ ಪಾವತಿ ಮಾಡಬಹುದು |
| 5 | ಈ ತಿಂಗಳ ಬಿಲ್ ಸಂಪೂರ್ಣ ಗೊಂದಲದಿಂದ ಕೂಡಿದೆ. ಕೊಟ್ಟ ಬಿಲ್‌ಗೂ ಆನ್‌ಲೈನ್‌ನಲ್ಲಿ ತೋರಿಸುತ್ತಿರುವ ಮೊತ್ತಕ್ಕೂ ತಾಳೆ ಆಗುತ್ತಿಲ್ಲ | ನಾವು ನೀಡಿರುವ ಬಿಲ್ ಮತ್ತು ಆನ್‌ಲೈನ್‌ನಲ್ಲಿರುವ ಮೊತ್ತಕ್ಕೂ ವ್ಯತ್ಯಾಸವಿದೆ. ಆನ್‌ಲೈನ್‌ನಲ್ಲಿ ಅಪ್‌ಡೇಟ್ ಆಗಲು ಸಮಯ ಅಗತ್ಯ. ರಾಜ್ಯಕ್ಕೆ ಇರುವುದು ಒಂದೇ ಸರ್ವರ್. ಹಂತ ಹಂತವಾಗಿ ಅಪ್‌ಡೇಟ್ ಆಗುತ್ತದೆ. ಮುಂದಿನ ತಿಂಗಳಿನಿಂದ ಎಲ್ಲ ಸರಿ ಹೋಗುತ್ತದೆ |
| 6 | ಸೌರಶಕ್ತಿ ಸಂಪರ್ಕ ಇರುವ ಪ್ರತಿ ಮನೆಗೆ ಮೊದಲು ನೀಡಲಾಗುತ್ತಿದ್ದ ₹50 ಸಹಾಯಧನವನ್ನೂ ರದ್ದುಪಡಿಸಲಾಗಿದೆ | ಸೌರಶಕ್ತಿ ಸಂಪರ್ಕ ಇರುವ ಗ್ರಾಹಕರಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಕೆಇಆರ್‌ಸಿ ಏಪ್ರಿಲ್‌ನಿಂದಲೇ ಸ್ಥಗಿತಗೊಳಿಸಿದೆ |

**ನನಗೆ ಪ್ರತಿ ತಿಂಗಳು 6ನೇ ತಾರೀಕಿಗೆ ವಿದ್ಯುತ್ ಬಿಲ್ ನೀಡಲಾಗುತ್ತಿತ್ತು. ಈ ತಿಂಗಳು 15ನೇ ತಾರೀಕಿಗೆ ನೀಡಲಾಗಿದೆ. ಆದರೆ, ಜೂನ್ 6 ಎಂದೇ ನಮೂದಿಸಲಾಗಿದೆ. ಜತೆಗೆ, ನಾವು 200 ಯೂನಿಟ್ ವಿದ್ಯುತ್ ಎಂದಿಗೂ ಬಳಸಿರಲಿಲ್ಲ. ಆದರೆ, ಈ ಬಾರಿ 213 ಯೂನಿಟ್ ಬಳಸಲಾಗಿದೆ ಎಂದು ತೋರಿಸಲಾಗಿದೆ. ಈ ಮೂಲಕ ಗೃಹಜ್ಯೋತಿ ಯೋಜನೆಗೆ ಅನರ್ಹಗೊಳಿಸುವ ಪ್ರಯತ್ನವೇ?**

**ಶ್ರೀಕಾಂತ್,** ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು

**ವಿದ್ಯುತ್ ಬಿಲ್‌ಗಳ ಗೊಂದಲಗಳು ಬುಧವಾರ ಸಂಜೆಯೊಳಗೆ ಬಹುತೇಕ ಬಗೆಹರಿಯಲಿವೆ. ಜೂನ್ ತಿಂಗಳ ಬಿಲ್‌ಗಳನ್ನು ಸಹ ಎಲ್ಲರಿಗೂ ನೀಡಲಾಗಿದೆ. ಆನ್‌ಲೈನ್‌ನಲ್ಲಿ ಬಿಲ್ ಪಾವತಿಸಲು ಸ್ವಲ್ಪ ಸಮಸ್ಯೆಯಾಗಿತ್ತು. ಸುಮಾರು 7ಲಕ್ಷ ಗ್ರಾಹಕರ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸಲಾಗುತ್ತಿದ್ದು, ಯಾವುದೇ ರೀತಿ ಆತಂಕ ಪಡಬೇಕಾಗಿಲ್ಲ**

**ಮಹಾಂತೇಶ ಬೀಳಗಿ,** ಬೆಸ್ಕಾಂ, ವ್ಯವಸ್ಥಾಪಕ ನಿರ್ದೇಶಕ

## ವಿಟಿಯು ಬಿಲ್ ₹ 10 ಲಕ್ಷ ಹೆಚ್ಚಳ!

**ಬೆಳಗಾವಿ:** ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯಕ್ಕೆ ಮೇ ತಿಂಗಳಲ್ಲಿ ವಿದ್ಯುತ್ ಬಿಲ್ ₹ 10 ಲಕ್ಷ ಹೆಚ್ಚಾಗಿದೆ! ಒಂದೇ ತಿಂಗಳ ಬಿಲ್ ₹ 35.06 ಲಕ್ಷ ದಾಟಿದೆ.

ಜೂನ್ 19ರಂದು ಕೈ ಸೇರಿದ ವಿದ್ಯುತ್ ಬಿಲ್ ಕಂಡು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯೇ ಬೆಚ್ಚಿಬಿದ್ದಿದೆ. ಬೆಳಗಾವಿಯಲ್ಲಿರುವ ವಿಶ್ವವಿದ್ಯಾಲಯದ ಮುಖ್ಯ ಕ್ಯಾಂಪಸ್‌ನ ಬಿಲ್ ₹18.47 ಲಕ್ಷ ಹಾಗೂ ಉಳಿದ ಐದು ವಿಭಾಗೀಯ ಕೇಂದ್ರಗಳ ಒಟ್ಟು ಬಿಲ್ ₹ 16.59 ಲಕ್ಷ ಬಂದಿದೆ. ಎಲ್ಲವೂ ಸೇರಿ ₹35.06 ಲಕ್ಷಕ್ಕೂ ಹೆಚ್ಚು ಹಣ ವಿಶ್ವವಿದ್ಯಾಲಯ ಭರಿಸಬೇಕಿದೆ.

ಮಾರ್ಚ್ ತಿಂಗಳಲ್ಲಿ ಒಟ್ಟು ₹25.56 ಲಕ್ಷ, ಏಪ್ರಿಲ್‌ನಲ್ಲಿ ₹25.29 ಲಕ್ಷ ಬಿಲ್ ಪಾವತಿಸಲಾಗಿತ್ತು.




## ಶಾಲಾ ಮಕ್ಕಳಿಗೆ ವಾರಕ್ಕೊಂದೇ ಮೊಟ್ಟೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಒಂದರಿಂದ ಎಂಟನೇ ತರಗತಿಯ ಮಕ್ಕಳಿಗೆ ವಾರಕ್ಕೆ ಒಂದು ಬೇಯಿಸಿದ ಮೊಟ್ಟೆ, ಮೊಟ್ಟೆ ತಿನ್ನದವರಿಗೆ ಚಿಕ್ಕಿ ಅಥವಾ ಬಾಳೆಹಣ್ಣು ನೀಡುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಅಪೌಷ್ಟಿಕತೆ ಮತ್ತು ರಕ್ತ ಹೀನತೆ ನಿವಾರಣೆಗಾಗಿ ಕಳೆದ ಸಾಲಿನಲ್ಲಿ ಕಲ್ಯಾಣ ಕರ್ನಾಟಕದ ಎಂಟು ಜಿಲ್ಲೆಯ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜತೆ ಮೊಟ್ಟೆ ವಿತರಿಸಲು ಸರ್ಕಾರ ಅನುಮತಿ ನೀಡಿತ್ತು. ನಂತರ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಿತ್ತು. 2023–24ನೇ ಶೈಕ್ಷಣಿಕ ಸಾಲಿಗೆ ಮೊದಲ ಹಂತದಲ್ಲಿ ಜುಲೈ 15ರವರೆಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಮೊಟ್ಟೆ ವಿತರಣೆಗೆ ಅನುಮತಿ ನೀಡಲಾಗಿದೆ. ಪ್ರತಿ ಮೊಟ್ಟೆಗೆ ₹ 6 ನಿಗದಿ ಮಾಡಲಾಗಿದೆ.

# ನ್ಯೂಯಾರ್ಕ್ ತಲುಪಿದ ಮೋದಿ

**ನ್ಯೂಯಾರ್ಕ್ (ಪಿಟಿಐ):** ಮೂರು ದಿನಗಳ ಅಮೆರಿಕ ಪ್ರವಾಸಕ್ಕಾಗಿ ಮಂಗಳವಾರ ಇಲ್ಲಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಇಲ್ಲಿನ ಜಾನ್ ಎಫ್ ಕೆನಡಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮೋದಿ ಅವರನ್ನು ಅಮೆರಿಕದಲ್ಲಿರುವ ಭಾರತೀಯ ರಾಯಭಾರಿ ತರಂಜಿತ್ ಸಿಂಗ್ ಸಂಧು ಮತ್ತು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ರುಚಿರಾ ಕಾಂಬೋಜ್ ಬರಮಾಡಿಕೊಂಡರು.

ವಿಮಾನ ನಿಲ್ದಾಣದಿಂದ ಹೊರ ಬಂದ ಮೋದಿ ಹೊರಭಾಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ಭಾರತೀಯ ಸಮುದಾಯದವರಿಗೆ ಕೈಮುಗಿದು ಹಸ್ತಲಾಘವ ನೀಡಿದರು. ಈ ವೇಳೆ ನೆರೆದಿದ್ದವರು ಮೋದಿ... ಮೋದಿ... ಎಂದು ಘೋಷಣೆ ಮೊಳಗಿಸಿದರು. ಬಳಿಕ ಲೊಟ್ಟೆ ನ್ಯೂಯಾರ್ಕ್ ಪ್ಯಾಲೇಸ್ ಹೋಟೆಲ್‌ನತ್ತ ತೆರಳಿದರು. ಅಲ್ಲಿ ಬೆಳಿಗ್ಗೆಯಿಂದಲೇ ಕಾದುಕುಳಿತಿದ್ದ ತಮ್ಮ ಬೆಂಬಲಿಗರತ್ತ ಕೈಬೀಸಿದರು.

ಕೆಲವರು ಮೋದಿ ಭಾವಚಿತ್ರವಿದ್ದ ಜಾಕೆಟ್ ಧರಿಸಿದ್ದರು. ಭಾರತದ ತ್ರಿವರ್ಣ ಧ್ವಜ ಹಿಡಿದಿದ್ದ ಭಾರತೀಯ ಸಮುದಾಯದವರು ಮೋದಿ... ಮೋದಿ..., ಭಾರತ್ ಮಾತಾಕೀ ಜೈ ಎಂದು ಘೋಷಣೆ ಕೂಗಿದರು. ಕೆಲಕಾಲ ಅವರೊಂದಿಗೆ ಚರ್ಚಿಸಿದ ಮೋದಿ ಕೆಲವರಿಗೆ ಹಸ್ತಾಕ್ಷರ ನೀಡಿದರು.

'ಕೇಂದ್ರ ಸರ್ಕಾರ ಭ್ರಷ್ಟ ರಾಜಕಾರಣಿಗಳ ವಿರುದ್ಧ ಕ್ರಮಕೈಗೊಂಡಿದೆ. ಮೋದಿ ರಾಜಕಾರಣಿಗಳನ್ನೂ ಶಿಕ್ಷಿಸುವ ಏಕೈಕ ಪ್ರಧಾನಿಯಾಗಿದ್ದಾರೆ. ಅವರು ಭಾರತದ ಉನ್ನತಿಗೆ ಶ್ರಮಿಸುತ್ತಿರುವ ಉತ್ತಮ ನಾಯಕ' ಎಂದು ಓಹಿಯೊದಿಂದ ಪ್ರಧಾನಿ ಸ್ವಾಗತಿಸಲು ಆಗಮಿಸಿದ್ದ ಹೃದ್ರೋಗ ತಜ್ಞ ಡಾ. ಭೋಲಾನಾಥ ರಾಮ ಬಣ್ಣಿಸಿದರು.



ಅಮೆರಿಕದ ನ್ಯೂಯಾರ್ಕ್‌ಗೆ ಮಂಗಳವಾರ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಲ್ಲಿ ನೆಲೆಸಿರುವ ಭಾರತೀಯ ಸಮುದಾಯದವರು ಭವ್ಯವಾಗಿ ಸ್ವಾಗತಿಸಿದರು

ಇನ್ನಷ್ಟು ಸುದ್ದಿಗಳು 8,9

## 'ಇನ್ನು 3–4 ದಿನದಲ್ಲಿ ಮುಂಗಾರು ಚುರುಕು'

ಮುಂಬೈ/ನವದೆಹಲಿ (ರಾಯಿಟರ್ಸ್): ಮುಂಗಾರು ಮಾರುತವು ಮುಂದಿನ ಮೂರು–ನಾಲ್ಕು ದಿನಗಳಲ್ಲಿ ಚುರುಕುಗೊಳ್ಳಲಿದೆ. 9

# ಕೆಎಂಎಫ್ ಅಧ್ಯಕ್ಷರ ಆಯ್ಕೆ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಹಾಲು ಮಾರಾಟ ಮಹಾಮಂಡಳ (ಕೆಎಂಎಫ್) ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಲಿದೆ.

ರಾಜ್ಯದಲ್ಲಿ ಸರ್ಕಾರ ಬದಲಾವಣೆಯ ಜತೆಗೆ ಬಾಲಚಂದ್ರ ಜಾರಕಿಹೊಳಿ ಅವರ ಅಧ್ಯಕ್ಷ ಸ್ಥಾನ ತೆರವಾಗಿದೆ. ಹೀಗಾಗಿ ಚುನಾವಣೆ ನಡೆಯಲಿದೆ.

ಅಧ್ಯಕ್ಷ ಸ್ಥಾನಕ್ಕೆ ಮಾಜಿ ಶಾಸಕ ಭೀಮಾ ನಾಯ್ಕ್ ಅವರು ಆಕಾಂಕ್ಷಿಯಾಗಿದ್ದು, ಬಹುತೇಕ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

'ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ' ಎಂದು ಇದುವರೆಗೆ ಕೆಎಂಎಫ್ ಅಧ್ಯಕ್ಷರಾಗಿದ್ದ ಬಾಲಚಂದ್ರ ಜಾರಕಿಹೊಳಿ ತಿಳಿಸಿದ್ದಾರೆ.

'ಅಧಿಕಾರದ ಅವಧಿ ಇನ್ನೂ ಒಂದು ವರ್ಷವಿತ್ತು. ಕೆಎಂಎಫ್ ಎಲ್ಲ ನಿರ್ದೇಶಕರ ಬೆಂಬಲವಿದ್ದರೂ ಸಂಸ್ಥೆಯ ಪ್ರಗತಿಗಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸದೇ ಮುಂಬರುವ ಹೊಸ ಅಧ್ಯಕ್ಷರಿಗೆ ಸಹಕಾರ ನೀಡಲಾಗುವುದು' ಎಂದಿದ್ದಾರೆ

ರಾಜ್ಯದೆಲ್ಲೆಡೆ ಕಾಂಗ್ರೆಸ್ ಪ್ರತಿಭಟನೆ; ಕೆಪಿಸಿಸಿ ಅಧ್ಯಕ್ಷರ ಸಾರಥ್ಯ

# 'ಅಕ್ಕಿ'ಗಾಗಿ ಬೀದಿಗಿಳಿದ ಸಚಿವರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅನ್ನಭಾಗ್ಯ' ಯೋಜನೆ ಅಡಿ ತಲಾ 10 ಕೆ.ಜಿ ಅಕ್ಕಿ ವಿತರಿಸುವ ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗೆ ಕೇಂದ್ರ ಸರ್ಕಾರವು ಅಕ್ಕಿ ಪೂರೈಸುತ್ತಿಲ್ಲ ಎಂದು ಆರೋಪಿಸಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ)ಯಿಂದ ರಾಜ್ಯದಾದ್ಯಂತ ಸೋಮವಾರ ಪ್ರತಿಭಟನೆ ನಡೆಯಿತು.

ಬಹುತೇಕ ಜಿಲ್ಲೆಗಳಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಚಿವರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. 'ಕೈ' ಕಾರ್ಯಕರ್ತರು ಅಲ್ಲಲ್ಲಿ ಖಾಲಿ ತಟ್ಟೆ ಬಡಿದು ಹಾಗೂ ಅಕ್ಕಿ ಬೇಯಿಸಿ ಆಕ್ರೋಶ ವ್ಯಕ್ತಪಡಿಸಿದರು.

ಉಪ ಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಳೆಯ ನಡುವೆಯೂ ಪ್ರತಿಭಟನೆ ನಡೆಯಿತು.

ಡಿ.ಕೆ.ಶಿವಕುಮಾರ್ ಮಾತನಾಡಿ, 'ಕೇಂದ್ರವು ಅಕ್ಕಿ ಪೂರೈಸದೇ ದ್ವೇಷದ ರಾಜಕಾರಣ ನಡೆಸುತ್ತಿದೆ. ಬಡವರಿಗೆ ಅನ್ಯಾಯ ಎಸಗುತ್ತಿದೆ. ಅದು ನಿಮಗೇ ತಿರುಗುಬಾಣವಾಗಲಿದೆ' ಎಂದು ಕಿಡಿಕಾರಿದರು.

'ತಲಾ 10 ಕೆ.ಜಿ. ಆಹಾರ ಧಾನ್ಯ ವಿತರಿಸುವ ಸಂಕಲ್ಪ ಮಾಡಿದ್ದೇವೆ. ಎಷ್ಟೇ ಕಷ್ಟವಾದರೂ ಆ ಸಂಕಲ್ಪ ಈಡೇರಿಸುತ್ತೇವೆ. ಕೇಂದ್ರವು ಅಕ್ಕಿ ಪೂರೈಸದಿದ್ದರೂ ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸುವ ಆಲೋಚನೆಯಿದೆ. ಸದ್ಯಕ್ಕೆ ರಾಜ್ಯದಲ್ಲಿ ತಲಾ 5 ಕೆ.ಜಿ ಅಕ್ಕಿ ನೀಡುವಷ್ಟು ಮಾತ್ರ ದಾಸ್ತಾನಿದೆ' ಎಂದರು.

5ನೇ ಪುಟ ನೋಡಿ

## 'ರಾಜ್ಯದಲ್ಲಿ ಸುಳ್ಳ–ಮಳ್ಳ ಸರ್ಕಾರ'

**ಬೆಂಗಳೂರು:** 'ರಾಜ್ಯದಲ್ಲಿ ಸುಳ್ಳ–ಮಳ್ಳ ಸರ್ಕಾರ ಅಧಿಕಾರಕ್ಕೆ ಬಂದಿದೆ. ಮುಖ್ಯಮಂತ್ರಿಗೆ ದಮ್ಮಿದ್ರೆ, ತಾಕತ್ತಿದ್ರೆ ಎಲ್ಲ ಕಡೆಯಿಂದ ಅಕ್ಕಿ ಸಂಗ್ರಹಿಸಿ ಪ್ರತಿಯೊಬ್ಬರಿಗೂ 15 ಕೆ.ಜಿ ಅಕ್ಕಿ ಕೊಡಬೇಕು' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

ಗ್ಯಾರಂಟಿ ಈಡೇರಿಸುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಎಂದು ರಾಜ್ಯದ 10 ಕಡೆ ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡಿತ್ತು. ಬೆಂಗಳೂರಿನ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಬಳಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಎಲ್ಲರನ್ನೂ ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ರಾಜ್ಯದ ಜನರಿಗೆ 5 ಕೆ.ಜಿ ಅಕ್ಕಿ ನೀಡುತ್ತಿರುವುದು ಕೇಂದ್ರ ಸರ್ಕಾರ. ಹಾಗಾಗಿ, ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ ಪ್ರತಿಯೊಬ್ಬರಿಗೂ 10 ಕೆ.ಜಿ ಅಕ್ಕಿ ಪ್ರತ್ಯೇಕವಾಗಿ ಕೊಡಬೇಕು. ಕೊಟ್ಟ ಭರವಸೆ ಉಳಿಸಿಕೊಳ್ಳಲು ಸಾಧ್ಯವಾಗದೇ ಕಾಂಗ್ರೆಸ್ ನಾಯಕರು ಪ್ರತಿಭಟನೆಗೆ ಇಳಿದಿದ್ದಾರೆ. ಜನರು ಅಧಿಕಾರ ಕೊಟ್ಟದ್ದು ಪ್ರತಿಭಟನೆ ಮಾಡಲಿಕ್ಕಾಗಿಯೇ? ಹೀಗೆ ಮಾಡಲು ನಾಚಿಕೆ, ಜವಾಬ್ದಾರಿ ಇಲ್ಲವೇ ಎಂದು ಪ್ರಶ್ನಿಸಿದರು.

5ನೇ ಪುಟ ನೋಡಿ

## ಒಳ ಪುಟಗಳು






## ಚಿನಕುರಳಿ

ಪ್ರಕಾಶ್ ಶೆಟ್ಟಿ



## ಹೆಚ್ಚುವರಿ ಶಿಕ್ಷಕರ ಕೌನ್ಸೆಲಿಂಗ್ ಪೂರ್ಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಚ್ಚುವರಿ ಶಿಕ್ಷಕರ ವರ್ಗಾವಣೆಗೆ ಆರಂಭಿಸಲಾಗಿದ್ದ ಕೌನ್ಸೆಲಿಂಗ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಪ್ರಾಥಮಿಕ ಶಾಲೆಯ 7,200 ಶಿಕ್ಷಕರು ಸೇರಿದಂತೆ 10,500 ಶಿಕ್ಷಕರು ಸ್ಥಳ ಆಯ್ಕೆ ಮಾಡಿಕೊಂಡಿದ್ದಾರೆ.

ಮಕ್ಕಳು ಕಡಿಮೆ ಇರುವ ರಾಜ್ಯದ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿನ 10,500 ಶಿಕ್ಷಕರನ್ನು 'ಹೆಚ್ಚುವರಿ' ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿತ್ತು. ಸರ್ಕಾರ ಒಂದರಿಂದ ಐದನೇ ತರಗತಿಯವರೆಗೆ 40 ವಿದ್ಯಾರ್ಥಿಗಳಿಗೆ, ಆರರಿಂದ ಎಂಟನೇ ತರಗತಿಯವರೆಗೆ 35 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಂತೆ ಅನುಪಾತ ನಿಗದಿ ಮಾಡಿದೆ. ಈ ಅನುಪಾತಕ್ಕೆ ಅನುಗುಣವಾಗಿ ರಾಜ್ಯದ ವಿವಿಧ ಶಾಲೆಗಳಲ್ಲಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಹೆಚ್ಚುವರಿ ಶಿಕ್ಷಕರ ಕೌನ್ಸೆಲಿಂಗ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶಿಕ್ಷಕರ ಸಾರ್ವತ್ರಿಕ ವರ್ಗಾವಣಾ ಪ್ರಕ್ರಿಯೆಗಳು ಆರಂಭವಾಗಿವೆ.





30 ಸ್ಥಳಗಳಲ್ಲಿ ಸ್ಥಾಪನೆ • ಬಟನ್ ಒತ್ತಿದ ತಕ್ಷಣವೇ ಸ್ಥಳಕ್ಕೆ ಪೊಲೀಸರು

# ಮಹಿಳೆಯರಿಗೆ 'ಸೇಫ್ಟಿ ಐಲ್ಯಾಂಡ್'

• ಆದಿತ್ಯ ಕೆ.ಎ.

**ಬೆಂಗಳೂರು:** 'ಸೇಫ್ ಸಿಟಿ' ಯೋಜನೆ ಅಡಿ ನಗರದಲ್ಲಿ ಮಹಿಳೆಯರು, ಮಕ್ಕಳು ಹಾಗೂ ವೃದ್ಧರ ಸುರಕ್ಷತೆಗೆ ಹಲವು ಯೋಜನೆಗಳು ಜಾರಿಗೊಳ್ಳುತ್ತಿದ್ದು ಈಗ 30 ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಗೆ 'ಸುರಕ್ಷತಾ ದ್ವೀಪ' (ಸೇಫ್ಟಿ ಐಲ್ಯಾಂಡ್) ಸ್ಥಾಪಿಸಲಾಗಿದೆ. ಇದು ಮಹಿಳೆಯರ ನೆರವಿಗೆ ಬರುವ ಪೊಲೀಸರ ವಿನೂತನ ವ್ಯವಸ್ಥೆಯಾಗಿದೆ.

ನಗರದ ಕಮಿಷನರೇಟ್ ವ್ಯಾಪ್ತಿಯಲ್ಲಿ 50 'ಸುರಕ್ಷತಾ ದ್ವೀಪ' ಸ್ಥಾಪಿಸಲು ನಿರ್ಧರಿಸಲಾಗಿತ್ತು. ಮೊದಲ ಹಂತದಲ್ಲಿ ಮಹಿಳೆಯರು ಹೆಚ್ಚಾಗಿ ಸಂಚರಿಸುವ, ಸಾಫ್ಟ್‌ವೇರ್ ಕಂಪನಿಗಳಿರುವ ಹಾಗೂ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲ್ಪಟ್ಟ 30 ಸ್ಥಳಗಳಲ್ಲಿ ಈ ದ್ವೀಪಗಳನ್ನು ಸ್ಥಾಪಿಸಲಾಗಿದೆ. ಮಹಿಳೆಯರ ಸುರಕ್ಷತೆಗೆ ನಗರ ಪೊಲೀಸರು ಇನ್ನೊಂದು ಹೆಜ್ಜೆ ಮುಂದಡಿ ಇಟ್ಟಿದ್ದಾರೆ. 8 ವಿಭಾಗದಲ್ಲೂ ಈ ದ್ವೀಪಗಳು ತಲೆಯೆತ್ತಿವೆ.

ನಿರ್ಭಯಾ ಪ್ರಕರಣದ ನಂತರ ದೇಶದ ಮಹಾನಗರಗಳಲ್ಲಿ ಮಹಿಳೆಯರ ಸುರಕ್ಷತೆಗೆ ತಂತ್ರಜ್ಞಾನ ಬಳಸಿಕೊಂಡು ಆರೋಪಿಗಳ ಪತ್ತೆ,




ಬೆಂಗಳೂರಿನಲ್ಲಿ ಸ್ಥಾಪಿಸಿರುವ 'ಸುರಕ್ಷತಾ ದ್ವೀಪ'

ಕಾನೂನು ನೆರವು, ವೈದ್ಯಕೀಯ ಸೇವೆ ಕಲ್ಪಿಸಲು ಹಲವು ಯೋಜನೆ ರೂಪಿಸಲಾಗುತ್ತಿದೆ. ನಿರ್ಭಯಾ ನಿಧಿಯಿಂದಲೇ ಈ ಸುರಕ್ಷತಾ ದ್ವೀಪ ಸ್ಥಾಪಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

**ಯಂತ್ರದ ವಿಶೇಷ ಏನು?:** ರಸ್ತೆ ಬದಿ, ಮೆಟ್ರೊ ನಿಲ್ದಾಣದ ಆಸುಪಾಸಿನಲ್ಲಿ ನೀಲಿ ಬಣ್ಣದ 10ರಿಂದ 12 ಅಡಿ ಎತ್ತರದ ಯಂತ್ರವನ್ನು ಅಳವಡಿಸಲಾಗಿದೆ. ಅದರ ಮಧ್ಯ ಭಾಗದಲ್ಲಿ ಕೆಂಪು ಬಣ್ಣದ ಬಟನ್ ನೀಡಲಾಗಿದೆ. ಮಹಿಳೆಯರು ಅಪಾಯಕ್ಕೆ ಸಿಲುಕಿದ್ದರೆ ತಕ್ಷಣವೇ ಆ ಯಂತ್ರದ ಬಳಿಗೆ ತೆರಳಿ ಬಟನ್ ಒತ್ತಿದರೆ ಸಾಕು. ಅಲರಾಂನೊಂದಿಗೆ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸ್ಥಾಪಿಸಿರುವ 'ಕಮಾಂಡೊ ಸೆಂಟರ್'ಗೆ ದೃಶ್ಯ ಸಹಿತ ಮಾಹಿತಿ ರವಾನೆ ಆಗಲಿದೆ. ಅಲ್ಲಿ 24 ಗಂಟೆಯೂ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕರೆ ಸ್ವೀಕರಿಸಿದ ಸಿಬ್ಬಂದಿ ಆಕೆಯನ್ನು ವಿಚಾರಿಸುತ್ತಾರೆ. ಆಕೆ ದೌರ್ಜನ್ಯಕ್ಕೆ ಒಳಗಾಗಿದ್ದರೆ ಸಮೀಪದಲ್ಲಿರುವ ಹೊಯ್ಸಳ ವಾಹನವನ್ನು ಸ್ಥಳಕ್ಕೆ ಕಳುಹಿಸುತ್ತಾರೆ. ಅಲ್ಲಿಗೆ ಬಂದ ಪೊಲೀಸ್ ಸಿಬ್ಬಂದಿಗೆ ಮಹಿಳೆಗೆ ನೆರವಾಗುತ್ತಾರೆ.

> **ರಾಜಧಾನಿಯ ಮಹಿಳೆಯರು, ಮಕ್ಕಳ ಸುರಕ್ಷತೆಗೆ ನಾವಿದ್ದೇವೆ. ಎಂತಹ ತುರ್ತು ಸಂದರ್ಭದಲ್ಲೂ ಧೃತಿಗೆಡದೇ ಯಂತ್ರದ ಬಳಿಗೆ ತೆರಳಿ ಬಟನ್ ಒತ್ತಿದರೆ ಸಾಕು.**
> **ಬಿ.ದಯಾನಂದ್**
> ಬೆಂಗಳೂರು ಪೊಲೀಸ್ ಕಮಿಷನರ್

ಎಲ್ಲ ಸುರಕ್ಷತಾ ದ್ವೀಪದ ಪಕ್ಕದಲ್ಲೇ ಸಿಸಿ ಟಿ.ವಿ ಕ್ಯಾಮೆರಾ ಸಹ ಅಳವಡಿಸಲಾಗಿದೆ. ಸಂತ್ರಸ್ತರ ಸ್ಥಿತಿಯನ್ನು ಕಮಾಂಡೊ ಕೇಂದ್ರದಲ್ಲೇ ವೀಕ್ಷಣೆ ಮಾಡಲಾಗುತ್ತದೆ.

'ನಗರವು ವಿಶಾಲವಾಗಿ ಬೆಳೆದಿದೆ. ಎಲ್ಲವನ್ನೂ ಸಿಬ್ಬಂದಿಯಿಂದಲೇ ನಿರ್ವಹಣೆ ಮಾಡುವುದು ಕಷ್ಟ. ತಂತ್ರಜ್ಞಾನವನ್ನು ಹೆಚ್ಚು ಬಳಸಿಕೊಂಡು ಆರೋಪಿಗಳ ಪತ್ತೆ ಚುರುಕುಗೊಳಿಸಲಾಗಿದೆ. ಒಂದು ವೇಳೆ ಮಹಿಳೆಯ ಮೊಬೈಲ್ ಅನ್ನು ಆರೋಪಿ ಕಸಿದುಕೊಂಡಿದ್ದರೆ ಆಕೆಗೆ ಪೊಲೀಸರಿಗೆ ಮಾಹಿತಿ ನೀಡಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಈ ದ್ವೀಪದ ಬಳಿಗೆ ತೆರಳಿ ಬಟನ್ ಒತ್ತಬೇಕು. ನಾವು ಸ್ಥಳಕ್ಕೆ ತೆರಳಿ ಸಂತ್ರಸ್ತೆಯನ್ನು ಸಲಹಾ ಕೇಂದ್ರಕ್ಕೆ ಕರೆದೊಯ್ದು ಆಪ್ತ ಸಮಾಲೋಚನೆ ಮಾಡುತ್ತೇವೆ' ಎಂದು ಪೊಲೀಸರು ಹೇಳುತ್ತಾರೆ.

'ಸದ್ಯ ಜಾರಿಯಲ್ಲಿರುವ 112ಕ್ಕೂ ಕರೆ ಮಾಡಬಹುದು. ಸೈಬರ್ ಅಪರಾಧಕ್ಕೆ ಒಳಪಟ್ಟಲ್ಲಿ 1930ಕ್ಕೆ ಕರೆ ಮಾಡಬಹುದು. ಆಗಲೂ ಸಿಬ್ಬಂದಿಯನ್ನು ಸ್ಥಳಕ್ಕೆ ರವಾನಿಸುತ್ತೇವೆ' ಎಂದು ಕಮಾಂಡೊ ಕೇಂದ್ರದ ಸಿಬ್ಬಂದಿ ಹೇಳುತ್ತಾರೆ.

ಅಧಿಕಾರಿಗಳ ಕಾಯಿಸಿದವರ ವಿರುದ್ಧ ಕ್ರಮ

# ಐಟಿ ಶೋಧಕ್ಕೆ ಅಡ್ಡಿ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಠ್ಠಲ ಮಲ್ಯ ರಸ್ತೆಯಲ್ಲಿರುವ ಫಾಲ್ಕಾನ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಸರ್ವೀಸ್ ಕಂಪನಿ ಮೇಲೆ ಆದಾಯ ತೆರಿಗೆ (ಐಟಿ) ಅಧಿಕಾರಿಗಳು ದಾಳಿ ನಡೆಸಿದ್ದ ವೇಳೆ ಶೋಧಕ್ಕೆ ಅಡ್ಡಿಪಡಿಸಿ ಒಂದು ತಾಸು ಕಾಯಿಸಿದ್ದ ಆರೋಪದಡಿ 9 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಐಟಿ ಇಲಾಖೆಯ ಉಪ ನಿರ್ದೇಶಕ ಮೇರುವಾ ಸುನೀಲ್‌ಕುಮಾರ್ ರೆಡ್ಡಿ ಅವರು ದೂರು ನೀಡಿದ್ದಾರೆ. ಫಾಲ್ಕಾನ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಕಚೇರಿ ವ್ಯವಸ್ಥಾಪಕರಾದ ಇಂದುಮತಿ, ಉದ್ಯೋಗಿಗಳಾದ ನವೀದ್ ಸಯಿತ್, ಸಿ. ಭರತ್, ಮೊಹಮ್ಮದ್ ಜೈದ್ ಸಾದಿಕ್, ಅಲ್ಮಾಸ್ ರಿಜ್ವಾನ್, ಧನ್ಯಾ ನೋಮನ್, ಜೋಕಬ್ ಮಾಮ್ಮೆನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರೆಸ್ಟೀಜ್ ಎಸ್ಟೇಟ್ ಕಂಪನಿ ಹಾಗೂ ಫಾಲ್ಕಾನ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಕಂಪನಿಯನ್ನೂ ಆರೋಪಿಯನ್ನಾಗಿ ಮಾಡಲಾಗಿದೆ' ಎಂದು ಕಬ್ಬನ್ ಪಾರ್ಕ್ ಠಾಣೆ ಪೊಲೀಸ್ ಮೂಲಗಳು ಹೇಳಿವೆ. 'ಆದಾಯ ತೆರಿಗೆ ವಂಚನೆ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ಬಂದಿತ್ತು. ಸುನೀಲ್‌ಕುಮಾರ್ ರೆಡ್ಡಿ ನೇತೃತ್ವದ ತಂಡ, ಫಾಲ್ಕಾನ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಕಂಪನಿ ಕಚೇರಿ ಮೇಲೆ ದಾಳಿ ನಡೆಸಲು ಸಜ್ಜಾಗಿತ್ತು. ಜನವರಿ 12ರಂದು ಬೆಳಿಗ್ಗೆ 6.55 ಗಂಟೆಗೆ ವಿಠ್ಠಲ್ ಮಲ್ಯ ರಸ್ತೆಯ ಪ್ರೆಸ್ಟಿಜ್ ಕಿಂಗ್ ಫಿಶರ್ ಟವರ್ ಕಟ್ಟಡಕ್ಕೆ ಬಂದಿತ್ತು. ಅವರನ್ನು ತಡೆದಿದ್ದ ಆರೋಪಿಗಳು, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಕಚೇರಿಯೊಳಗೆ ಹೋಗದಂತೆ ಹಾಗೂ ಲಿಫ್ಟ್ ಬಳಸದಂತೆ ತಡೆದಿದ್ದರು.'

'ಶೋಧಕ್ಕೆ ಅವಕಾಶ ನೀಡುವಂತೆ ಅಧಿಕಾರಿಗಳು ಕೋರಿದರೂ ಆರೋಪಿಗಳು ಸಹಕರಿಸಿರಲಿಲ್ಲ. ಒಂದು ಗಂಟೆ ಅಧಿಕಾರಿಗಳು ಕಾದು ನಿಂತಿದ್ದರು. ಅಧಿಕಾರಿಗಳು ಕಠಿಣ ಎಚ್ಚರಿಕೆ ನೀಡಿದ ಬಳಿಕವೇ ಆರೋಪಿಗಳು, ಕಚೇರಿ ಪ್ರವೇಶಿಸಲು ಅವಕಾಶ ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ದಾಳಿ ಉದ್ದೇಶ ತಿಳಿಸಿದರೂ ಅಧಿಕಾರಿಗಳ ಕರ್ತವ್ಯಕ್ಕೆ ಆರೋಪಿಗಳು ಅಡ್ಡಿಪಡಿಸಿದ್ದರು. ಒಂದು ತಾಸು ಕಾಯಿಸಿದ್ದರಿಂದ ಅಧಿಕಾರಿಗಳ ತನಿಖೆಗೆ ನಷ್ಟವಾಗಿದೆ. ಉಪ ನಿರ್ದೇಶಕರು ದೂರು ನೀಡುತ್ತಿದ್ದಂತೆ, ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## 30 ವರ್ಷದ ವ್ಯಕ್ತಿಗೆ ಮಗುವಿನ ಮೂತ್ರಪಿಂಡ ಕಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದ ಇಲ್ಲಿನ 30 ವರ್ಷದ ವ್ಯಕ್ತಿಗೆ ಮಿದುಳು ನಿಷ್ಕ್ರಿಯಗೊಂಡಿದ್ದ 13 ತಿಂಗಳ ಮಗುವಿನ ಮೂತ್ರಪಿಂಡಗಳನ್ನು ಫೋರ್ಟಿಸ್ ಆಸ್ಪತ್ರೆ ವೈದ್ಯರು ಕಸಿ ಮಾಡಿದ್ದಾರೆ.

'ರೋಬೋಟಿಕ್ ಎನ್-ಬ್ಲಾಕ್' ವಿಧಾನದ ಮೂಲಕ ಕಸಿ ಮಾಡಲಾಗಿದೆ. ಉಸಿರುಗಟ್ಟಿ ಮೃತಪಟ್ಟ ಮಗುವಿನ ಅಂಗಾಂಗ ದಾನಕ್ಕೆ ಪೋಷಕರು ಸಮ್ಮತಿ ಸೂಚಿಸಿದ್ದರು. ಮಗು 7.3 ಕೆ.ಜಿ. ತೂಕ ಹೊಂದಿತ್ತು. ಎರಡು ಮೂತ್ರಪಿಂಡಗಳನ್ನು 50 ಕೆ.ಜಿ. ತೂಕವುಳ್ಳ ವ್ಯಕ್ತಿಗೆ ಕಸಿ ಮಾಡಲಾಗಿದೆ. ಅವರು ದೀರ್ಘಕಾಲದಿಂದ ಮೂತ್ರಪಿಂಡದ ವೈಫಲ್ಯಕ್ಕೆ ಒಳಗಾಗಿ, ಹಿಮೋಡಯಾಲಿಸಿಸ್ ಮಾಡಿಕೊಳ್ಳುತ್ತಿದ್ದರು. ಇದರಿಂದಾಗಿ ಮೂತ್ರಪಿಂಡದ ಕಸಿ ಅನಿವಾರ್ಯವಾಗಿತ್ತು.

'ರೋಬೋಟಿಕ್ ಎನ್-ಬ್ಲಾಕ್ ವಿಧಾನದ ಕಸಿಯಿಂದ ವ್ಯಕ್ತಿಯ ತೂಕಕ್ಕೆ ಅನುಗುಣವಾಗಿ ಮೂತ್ರಪಿಂಡಗಳ ಗಾತ್ರ ಹೆಚ್ಚಿಸಲು ಸಾಧ್ಯವಾಗುತ್ತದೆ. ನಾಲ್ಕು ಗಂಟೆಯ ಅವಧಿಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಈ ಸಂಕೀರ್ಣ ಶಸ್ತ್ರಚಿಕಿತ್ಸೆಯ ನಂತರ, ರೋಗಿಯನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಿ, ಆರೈಕೆ ಮಾಡಲಾಯಿತು. 12 ದಿನಗಳ ಬಳಿಕ ಅವರನ್ನು ಮನೆಗೆ ಕಳುಹಿಸಲಾಗಿದೆ' ಎಂದು ಡಾ. ಕೇಶವಮೂರ್ತಿ ತಿಳಿಸಿದರು.

## ಸುದ್ದಿ 2 ನಿಮಿಷ

### ಗೃಹ ಜ್ಯೋತಿ ಯೋಜನೆ: 8.16 ಲಕ್ಷ ಗ್ರಾಹಕರ ನೋಂದಣಿ

**ಬೆಂಗಳೂರು:** 'ಗೃಹ ಜ್ಯೋತಿ' ಯೋಜನೆ ನೋಂದಣಿ ಪ್ರಕ್ರಿಯೆ ಮುಂದುವರಿದಿದ್ದು ಕರ್ನಾಟಕ ಒನ್, ಗ್ರಾಮ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಕಳೆದ ಮೂರು ದಿನಗಳಲ್ಲಿ ಒಟ್ಟು 8,16,631 ಗ್ರಾಹಕರು ನೋಂದಣಿ ಮಾಡಿದ್ದಾರೆ.

ಕಳೆದ ಎರಡು ದಿನಗಳಿಗೆ ಹೋಲಿಸಿದರೆ, ಮಂಗಳವಾರ ನೋಂದಣಿ ಮಾಡಿಕೊಂಡವರ ಸಂಖ್ಯೆ ಮೂರು ಪಟ್ಟು ಹೆಚ್ಚು. 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಪಡೆಯುವ ರಾಜ್ಯ ಸರ್ಕಾರದ ಯೋಜನೆಯ ಲಾಭ ಪಡೆಯಲು ಸಾರ್ವಜನಿಕರು ಭಾರೀ ಉತ್ಸುಕತೆ ತೋರುತ್ತಿದ್ದಾರೆ ಎಂದು ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

ಮೊದಲ ದಿನ 96,305 ಮಂದಿ, ಎರಡನೇ ದಿನ 3,34,845, ಮೂರನೇ ದಿನ 3,85,481 ಮಂದಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ.

ಯೋಜನೆ ನೋಂದಣಿ ಪ್ರಕ್ರಿಯೆ ಸರಳ ಇರುವುದರಿಂದ ಭೌತಿಕವಾಗಿ ಯಾವುದೇ ದಾಖಲೆಗಳನ್ನು ನೀಡದೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಗಳನ್ನು ನಮೂದಿಸುವ ಮೂಲಕ ನೋಂದಣಿ ಮಾಡಬಹುದಾಗಿದೆ.

ನೋಂದಣಿಗೆ ಯಾವುದೇ ಗಡುವು ನಿಗದಿಪಡಿಸಿಲ್ಲ. ಆದ್ದರಿಂದ, ಗ್ರಾಹಕರು ಆತಂಕ ಪಡುವ ಅಗತ್ಯವಿಲ್ಲಎಂದು ಸರ್ಕಾರ ಸ್ಪಷ್ಟಪಡಿಸಿದೆ.

### ಕೆಎಸ್‌ಆರ್‌ಟಿಸಿ ಸಿಬ್ಬಂದಿ ಶೌರ್ಯಕ್ಕೆ ಮೆಚ್ಚುಗೆ



**ಬೆಂಗಳೂರು:** ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಇತ್ತೀಚೆಗೆ ಸಹ ಪ್ರಯಾಣಿಕರೊಬ್ಬರ ₹ 5 ಲಕ್ಷ ಕದ್ದು, ಓಡುತ್ತಿದ್ದ ಕಳ್ಳನನ್ನು ಹಿಡಿದ ಚಾಲಕ ಮಂಜುನಾಥ್ ಮತ್ತು ನಿರ್ವಾಹಕ ಸೋಮಪ್ಪ ಟಿ.ಎನ್. ಅವರನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮಂಗಳವಾರ ಸನ್ಮಾನಿಸಿದರು.

ಭಾರತೀಯ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿ ಕಾರ್ಯನಿರ್ವಹಿಸುತ್ತಿರುವ ನಿಗಮದ ಸಿಬ್ಬಂದಿ ವೆಂಕಟೇಶ್ ಅವರ ಮಗ ಸಂಜಯ್ ಅವರನ್ನು ಸಹ ಇದೇ ಸಂದರ್ಭದಲ್ಲಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ನಂತರ ಮಾತನಾಡಿದ ವಿ. ಅನ್ಬುಕುಮಾರ್ 'ನಮ್ಮ ಸಿಬ್ಬಂದಿಗಳ ಸಮಯ ಪ್ರಜ್ಞೆ, ಧೈರ್ಯ, ಸಾಹಸ ಮತ್ತು ಪ್ರಯಾಣಿಕರ ಬಗೆಗಿನ ಕಾಳಜಿ ಶ್ಲಾಘನೀಯ. ಸಂಸ್ಥೆಯ ಸಿಬ್ಬಂದಿಗಳ ಮಕ್ಕಳು ಈ ರೀತಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ದೇಶ ಸೇವೆ ಮಾಡುತ್ತಿರುವುದು ನಮ್ಮ ಸಂಸ್ಥೆಯ ಹೆಮ್ಮೆ' ಎಂದು ತಿಳಿಸಿದರು. ಸಿಬ್ಬಂದಿ ಮತ್ತು ಜಾಗೃತ ವಿಭಾಗದ ನಿರ್ದೇಶಕ ಪ್ರಶಾಂತ್ ಕುಮಾರ್ ಮಿಶ್ರಾ ಇದ್ದರು.

## ಬೆಂಗಳೂರು ವಿವಿಯ ಸಿಂಡಿಕೇಟ್ ಸದಸ್ಯೆಯಾಗಿ ಮಾಲಿನಿ



**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆಯಾಗಿ ಮಂಡ್ಯ ಜಿಲ್ಲೆಯ ಡಾ. ಮಾಲಿನಿ ಕೆ. ರಾಯರತೋಟ ಅವರನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ನಾಮನಿರ್ದೇಶನ ಮಾಡಿದ್ದಾರೆ. ಮಾಲಿನಿ ಅವರ ಅಧಿಕಾರ ಅವಧಿ ಮೂರು ವರ್ಷಗಳವರೆಗೆ ಇರಲಿದೆ ಎಂದು ವಿಶ್ವವಿಶ್ವವಿದ್ಯಾಲಯದ ಅಧಿಸೂಚನೆ ಹೊರಡಿಸಿದೆ ಎಂದು ಪ್ರಕಟಣೆ ತಿಳಿಸಿದೆ.

# ನಮ್ಮ ಮನೆಯವರೂ ಅರ್ಜಿ ಹಾಕಲಿ: ಡಿಕೆಶಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಗ್ಯಾರಂಟಿ' ಸೌಲಭ್ಯಕ್ಕೆ ನಮ್ಮ ಮನೆಯವರು ಬೇಕಿದ್ದರೂ ಅರ್ಜಿ ಹಾಕಿಕೊಳ್ಳಲಿ. ಕುಟುಂಬ ನಿರ್ವಹಣೆ ಮಾಡುವವರು ಅವರು. ನನ್ನದು ಯಾವುದೇ ತಕರಾರು ಇಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಮಂಗಳವಾರ ಪ್ರತಿಭಟನೆ ವೇಳೆ ಮಾತನಾಡಿದ ಅವರು, 'ಕಾಂಗ್ರೆಸ್ ಯಾರ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳುವುದಿಲ್ಲ. ಅರ್ಜಿ ಹಾಕುವುದು ಅವರಿಗೆ ಬಿಟ್ಟ ವಿಚಾರ' ಎಂದರು.

'ಸಲೀಂ ಅಹಮದ್, ರಾಮಲಿಂಗಾರೆಡ್ಡಿ ಅವರು ತಮ್ಮ ಮನೆಯವರಿಗೆ 'ಶಕ್ತಿ' ಯೋಜನೆ ಸೌಲಭ್ಯ ಬೇಡ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನ ಪತ್ನಿಗೂ ಬಸ್‌ನಲ್ಲಿ ಫ್ರೀ ಎಂದಿದ್ದಾರೆ. ಬೇಕಿದ್ದರೆ ರಾಣಿ ಸತೀಶ್ ಅವರು ಬಸ್‌ನಲ್ಲಿ ಉಚಿತವಾಗಿ ಓಡಾಟ ನಡೆಸಬಹುದು' ಎಂದರು. 'ಗೃಹ ಲಕ್ಷ್ಮಿ ಯೋಜನೆಗೆ ಆ್ಯಪ್‌ನಲ್ಲಿ ದಾಖಲೆ ಅಪ್‌ಲೋಡ್ ಮಾಡಲು ಪಕ್ಷದ ಕಾರ್ಯಕರ್ತರೇ ಮನೆ ಬಾಗಿಲಿಗೆ ಬಂದು ನೆರವು ನೀಡಲಿದ್ದಾರೆ. ಗ್ಯಾರಂಟಿ ಸೌಲಭ್ಯ ನೀಡಲು ಅಧಿಕಾರಿಗಳು ಲಂಚ ಪಡೆದರೆ ಅಂತಹವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು' ಎಂದು ಎಚ್ಚರಿಸಿದರು.

ರಾಜ್ಯಕ್ಕೆ ಅಕ್ಕಿ ಕೊಡಬೇಡಿ ಎಂದು ಬಿಜೆಪಿಯ ರಾಜ್ಯ ನಾಯಕರೇ ಕೇಂದ್ರ ಸರ್ಕಾರಕ್ಕೆ ಹೇಳಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗರೆಡ್ಡಿ ಆರೋಪಿಸಿದರು. ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ತಲಾ 10 ಕೆ.ಜಿ. ಕೊಡುವುದಾಗಿ ವಾಗ್ದಾನ ಮಾಡಿದ್ದೇವೆ. ಬಡವರ ವಿರೋಧಿಗಳಾದ ಬಿಜೆಪಿಯವರು ಅದಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ. ಅಕ್ಕಿ ಬದಲು ಹಣ ನೀಡಿ ಅನ್ನುತ್ತಿದ್ದಾರೆ. ಅಕ್ಕಿ ಬದಲು ಹಣ ತಿನ್ನಲು ಆಗುತ್ತದೆಯೇ ಪ್ರಶ್ನಿಸಿದರು.

## ನಗರದಲ್ಲಿ ಇಂದು

**ಅಂತರರಾಷ್ಟ್ರೀಯ ಯೋಗ ದಿನಾಚರಣೆ ವಿಶೇಷ:**

**ಯೋಗ ದಿನಾಚರಣೆ:** ಉಪಸ್ಥಿತಿ: ಎನ್. ದಿನೇಶ್ ಹೆಗ್ಡೆ, ರಾಜೇಶ್ ಪದ್ಮಾರ್, ಆಯೋಜನೆ: ರಾಷ್ಟ್ರೋತ್ಥಾನ ಪರಿಷತ್, ಸ್ಥಳ: ಚಂದ್ರಗುಪ್ತ ಮೌರ್ಯ ಕ್ರೀಡಾಂಗಣ, ಜಯನಗರ, ಬೆಳಿಗ್ಗೆ 6.15

**ಯೋಗ ದಿನಾಚರಣೆ:** ಉದ್ಘಾಟನೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಆಯುಷ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 6.30ರಿಂದ

**ಯೋಗ ದಿನಾಚರಣೆ:** ಆಯೋಜನೆ: ಯುಥ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ, ಚೋಳರಪಾಳ್ಯ, ಮಾಗಡಿ ರಸ್ತೆ, ಬೆಳಿಗ್ಗೆ 7.30

**ಯೋಗ ದಿನಾಚರಣೆಯ ಉದ್ಘಾಟನೆ:** ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು: ತೇಜಸ್ವಿಸೂರ್ಯ, ಹರಿಶೇಖರನ್, ಬಿ. ಜಿ. ಜ್ಯೋತಿಪ್ರಕಾಶ್ ಮಿರ್ಜಿ, ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಬಿಜಿಎಸ್ ಹೆಲ್ತ್ ಸಿಟಿ, ಕೆಂಗೇರಿ, ಬೆಳಿಗ್ಗೆ 8

**ಯೋಗ ದಿನಾಚರಣೆಯ ಉದ್ಘಾಟನೆ:** ಜಯಕರ ಎಸ್.ಎಂ., ಅತಿಥಿ: ಶ್ರೀನಿವಾಸ್ ಸಿ., ಉಪಸ್ಥಿತಿ: ಎಂ.ಕೆ. ಶ್ರೀಧರ್, ಅಧ್ಯಕ್ಷತೆ: ಎಸ್.ಎನ್. ಸುಶೀಲ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಯೋಗ ಕೇಂದ್ರ, ಕಲಾಭವನ, ಪ್ರದರ್ಶನ ಕಲಾ ವಿಭಾಗ, ಜ್ಞಾನಭಾರತಿ ಆವರಣ, ಬೆಳಿಗ್ಗೆ 8

**ಯೋಗ ದಿನಾಚರಣೆಯ ಉದ್ಘಾಟನೆ:** ಲಿಂಗರಾಜ ಗಾಂಧಿ, ಅತಿಥಿ: ಎನ್. ಆರಾಧ್ಯ, ಸ್ಥಳ: ಜ್ಞಾನಜ್ಯೋತಿ ನೆಲಮಾಳಿಗಿ ಸಭಾಂಗಣ, ಬೆಳಿಗ್ಗೆ 9

**'ಒಂದು ವಾರ, ಒಂದು ಲ್ಯಾಬ್' ಉದ್ಘಾಟನೆ:** ಅತಿಥಿಗಳು: ಎನ್. ಕಲೈ ಸೆಲ್ವಿ, ಮನೋಜ್ ರಂಜನ್, ಆಯೋಜನೆ ಮತ್ತು ಸ್ಥಳ: ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರೀಸರ್ಚ್, ವಿಂಡ್ ಟನ್ನಲ್ ರಸ್ತೆ, ಬೆಳಿಗ್ಗೆ 10.30

**'ಮೀಟ್ ಆ್ಯಂಡ್ ಗ್ರೀಟ್ ವಿತ್ ಸೆಲಿಬ್ರೆಟಿ':** ಅತಿಥಿ: ನಾ. ಸೋಮೇಶ್ವರ, ಆಯೋಜನೆ ಮತ್ತು ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಸಂಜೆ 4.30

***

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

## ಬಿಎಸ್‌ಡಬ್ಲ್ಯುಎಂಎಲ್: ಸಮಗ್ರ ತನಿಖೆಗೆ ಸಿ.ಎಂ ಸಿದ್ದರಾಮಯ್ಯ ಆದೇಶ

# ಕಾರ್ಯಾದೇಶ, ಟೆಂಡರ್ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ನೀಡಿರುವ ಕಾರ್ಯಾದೇಶಗಳು, ಚಾಲ್ತಿಯಲ್ಲಿರುವ ಟೆಂಡರ್ ಪ್ರಕ್ರಿಯೆಗಳನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಬಿಎಸ್‌ಡಬ್ಲ್ಯುಎಂಎಲ್ ಸ್ಥಾಪನೆಯಾದಂದಿನಿಂದ ಅನುಷ್ಠಾನಗೊಳಿಸಿದ ಕಾಮಗಾರಿಗಳು, ಹಣ ದುರುಪಯೋಗ, ಸಂಸ್ಥೆಯ ಸಂಪೂರ್ಣ ಕಾರ್ಯವೈಖರಿ ಬಗ್ಗೆ ಸಮಗ್ರ ತನಿಖೆ ನಡೆಸಿ ವಿವರವಾದ ವರದಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದಾರೆ.

ಬಿಎಸ್‌ಡಬ್ಲ್ಯುಎಂಎಲ್‌ನಿಂದ ಸರ್ಕಾರದ ಹಣ ದುರುಪಯೋಗವಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಅವರು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದರು. 'ಪ್ರಜಾವಾಣಿ'ಯಲ್ಲಿ 'ಗುತ್ತಿಗೆ ದೋಷಯುಕ್ತ: ₹13 ಕೋಟಿ ಬಿಡುಗಡೆ' ಶೀರ್ಷಿಕೆಯಡಿ ಜೂನ್ 20ರಂದು ವರದಿ ಪ್ರಕಟವಾಗಿತ್ತು. ಮುಖ್ಯಮಂತ್ರಿಯವರು ಮಂಗಳವಾರ ಮಧ್ಯಾಹ್ನ ತನಿಖೆ ಟಿಪ್ಪಣಿಯನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿದ್ದಾರೆ.

**ಟಿಪ್ಪಣಿ ಸಾರಾಂಶ:** ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹ, ಸಾಗಣೆ, ನಿರ್ವಹಣೆ ಮತ್ತು ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು 2015ರಲ್ಲಿ ಸರ್ಕಾರ ₹468 ಕೋಟಿಗಳ ಅನುದಾನದಲ್ಲಿ ಆರು ಘನ ತ್ಯಾಜ್ಯ ನಿರ್ವಹಣ ಘಟಕಗಳನ್ನು ಸ್ಥಾಪಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಅಸಮರ್ಪಕ ನಿರ್ವಹಣೆಯಿಂದ ಇವುಗಳು ನಿಷ್ಕ್ರಿಯಗೊಂಡು, ಪಾಲಿಕೆ ಖಾಸಗಿ ಘಟಕಗಳಿಗೆ ಅವೈಜ್ಞಾನಿಕವಾಗಿ ಘನತ್ಯಾಜ್ಯವನ್ನು ಆಯ್ದ ಸ್ಥಳಗಳಲ್ಲಿ ಭೂ ಭರ್ತಿ ಮಾಡುತ್ತಿದೆ. ರಸ್ತೆ ಬದಿ ಮತ್ತು ಮೇಲ್ಸೇತುವೆ ಕೆಳಗೆ ತ್ಯಾಜ್ಯ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿರುವ ಕ್ರಮಗಳಿಂದ ಘನತ್ಯಾಜ್ಯ ನಿರ್ವಹಣೆ ಹದಗೆಡಲು ಕಾರಣವಾಗಿದೆ.

ರಾಷ್ಟ್ರೀಯ ಹಸಿರುಪೀಠ ಮತ್ತು ಘನತ್ಯಾಜ್ಯ ನಿರ್ವಹಣೆ ನಿಯಮ 2016 ಪಾಲಿಸದೆ ಪಾಲಿಕೆ ಅನುತ್ಪಾದಕ ಕ್ರಮಗಳಿಗೆ ₹1,100 ಕೋಟಿ ವೆಚ್ಚ ಮಾಡಿದೆ. ಪಾಲಿಕೆಯ ಇಂತಹ ಅವೈಜ್ಞಾನಿಕ ಕ್ರಮಗಳು ನಗರ ಸಂಚಾರ ಹಾಗೂ ಸಾರ್ವಜನಿಕರ ಆರೋಗ್ಯ ಮತ್ತು ಪರಿಸರಕ್ಕೆ ಹಾನಿಯುಂಟು ಮಾಡುವ ಯೋಜನೆಗಳಾಗಿವೆ.

ಈ ಮಧ್ಯೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸುಗಮ ಸಂಗ್ರಹ, ಸಾಗಣೆ ಮತ್ತು ನಿರ್ವಹಣೆಗೆ 2021ರಲ್ಲಿ ಸ್ಥಾಪಿತವಾದ ಸರ್ಕಾರಿ ಸ್ವಾಮ್ಯದ ಬಿಎಸ್‌ಡಬ್ಲ್ಯುಎಂಎಲ್ ಸಂಸ್ಥೆಯಿಂದ ಮತ್ತು ಪಾಲಿಕೆಯಿಂದ 'ಶುಭ್ರ ಬೆಂಗಳೂರು' ಕ್ರಿಯಾ ಯೋಜನೆಯಡಿ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಮಾನದಂಡಗಳಿಗೆ ವಿರುದ್ಧವಾಗಿ ಬ್ಯಾಂಕ್ ಗ್ಯಾರಂಟಿ ದಾಖಲೆ ಸಲ್ಲಿಸಿದ್ದ ಪರಿಶುದ್ಧ ವೆಂಚುರ್ಸ್‌ಗೆ ಸರ್ಕಾರದ ಸೂಚನೆ ಮೀರಿ ₹13.45 ಕೋಟಿ ಮುಂಗಡವಾಗಿ ಪಾವತಿಸಲಾಗಿದೆ. ಈ ಮೂಲಕ ಸಂಸ್ಥೆಯು ಸರ್ಕಾರದ ಆದೇಶಗಳು, ಸೂಚನೆಗಳು, ನಿಯಮಗಳನ್ನು ಪಾಲಿಸದೆ ಸರ್ಕಾರದ ಹಣ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಪಿ.ಆರ್. ರಮೇಶ್ ಗಮನಕ್ಕೆ ತಂದಿದ್ದಾರೆ. ಪ್ರಸ್ತಾಪಿಸಿದ ಅಂಶಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.




ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆಯ ಕಚೇರಿಯಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದರು

### ರಾಜಕಾರಣಿಗಳ ಕೈವಾಡ!

'ಬಿಎಸ್‌ಡಬ್ಲ್ಯುಎಂಎಲ್ ಸ್ಥಾಪಿಸಲು ಹೊರಟಿದ್ದ ಮೂರು ದೊಡ್ಡ ವರ್ಗಾವಣೆ ಕೇಂದ್ರಗಳ ಟೆಂಡರ್, ಗುತ್ತಿಗೆಯಲ್ಲಿ ರಾಜಕಾರಣಿಗಳ ಕೈವಾಡವಿದೆ. ನೂರಾರು ಕೋಟಿಯನ್ನು ದುರುಪಯೋಗ ಮಾಡಿಕೊಳ್ಳುವ ಹುನ್ನಾರ ಇದೆ.

ಈಗಾಗಲೇ ಹಲವು ಕೋಟಿ ದುರುಪಯೋಗವಾಗಿದೆ. ಇದರಲ್ಲಿ ಭಾಗಿಯಾಗಿರುವ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಮೇಲೆ ಕ್ರಮವಾಗಬೇಕು. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕು' ಎಂದು ವಿಧಾನಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಆಗ್ರಹಿಸಿದರು.



ಪಿ.ಆರ್. ರಮೇಶ್

## 'ಸ್ವಾವಲಂಬಿಯಾಗಿ ಬದುಕಲು ಆತ್ಮಸ್ಥೈರ್ಯ ತುಂಬಿ'

**ಪೀಣ್ಯ ದಾಸರಹಳ್ಳಿ:** 'ಅಂಗವಿಕಲ ಮಕ್ಕಳನ್ನು ಪೋಷಕರು ಕಾಳಜಿ ವಹಿಸಿ ಬೆಳೆಸಬೇಕು ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಬಾಗಲಗುಂಟೆ ಬಿಬಿಎಂಪಿ ಹತ್ತಿರ ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ 2019- 20ನೇ ಸಾಲಿನಲ್ಲಿ ಆಯ್ಕೆಯಾಗಿರುವ ಅರ್ಹ 18 ವಿಶೇಷ ಚೇತನರಿಗೆ ತ್ರಿಚಕ್ರ ಸ್ಕೂಟಿಯನ್ನು ವಿತರಿಸಿ ಅವರು ಮಾತನಾಡಿದರು.

'ಅಂಗವಿಕಲರು ಸ್ವಾವಲಂಬಿಯಾಗಿ ಬದುಕಲು ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕು. ವಿದ್ಯೆ, ಉದ್ಯೋಗ, ಪ್ರೋತ್ಸಾಹಧನ ನೀಡುವ ಕೆಲಸ ಸರ್ಕಾರಗಳು ಮಾಡುತ್ತಿವೆ. ಪೋಷಕರು ಸಹ ಅವರಿಗೆ ಬೆನ್ನೆಲುಬಾಗಿ ಬೆಳೆಸಿ ಸಮಾಜ ಗುರುತಿಸುವಂತಹ ಕೆಲಸ ಮಾಡಬೇಕು' ಎಂದು ತಿಳಿಸಿದರು. ಬಿಬಿಎಂಪಿ ಉಪ ಆಯುಕ್ತೆ ಡಾ.ಮಮತಾ, ಕಲ್ಯಾಣಾಧಿಕಾರಿ ನಂದನ ಇದ್ದರು.



## ಮನೀಶ್ ಖರ್ಬೀಕರ್ ಸಿಐಡಿ ಎಡಿಜಿಪಿ

**ಬೆಂಗಳೂರು:** 15 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದ್ದು, 1998ರ ಬ್ಯಾಚ್‌ನ ಅಧಿಕಾರಿ ಮನೀಶ್ ಖರ್ಬೀಕರ್ ಅವರನ್ನು ಸಿಐಡಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ (ಎಡಿಜಿಪಿ) ಹುದ್ದೆಗೆ ನೇಮಿಸಲಾಗಿದೆ.

**ವರ್ಗಾವಣೆಯಾದವರು:** ಡಾ.ಕೆ. ರಾಮಚಂದ್ರ ರಾವ್– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ; ಮಾಲಿನಿ ಕೃಷ್ಣಮೂರ್ತಿ– ಎಡಿಜಿಪಿ, ಬಂದಿಖಾನೆ ಮತ್ತು ಸುಧಾರಣಾ ಸೇವೆಗಳು; ಅರುಣ್ ಚಕ್ರವರ್ತಿ ಜೆ.– ಎಡಿಜಿಪಿ, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ; ಎಂ. ಚಂದ್ರಶೇಖರ್– ಎಡಿಜಿಪಿ ಆಂತರಿಕ ಭದ್ರತಾ ವಿಭಾಗ. ಪ್ರವೀಣ್ ಮಧುಕರ್ ಪವಾರ್– ಐಜಿಪಿ, ಸಿಐಡಿ; ರಮಣ್ ಗುಪ್ತ – ಹೆಚ್ಚುವರಿ ಪೊಲೀಸ್ ಕಮಿಷನರ್, ಬೆಂಗಳೂರು ಪಶ್ಚಿಮ; ಸಂದೀಪ್ ಪಾಟೀಲ– ಐಜಿಪಿ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್; ವಿಕಾಸ್ ಕುಮಾರ್ ವಿಕಾಶ್– ಐಜಿಪಿ, ಆಂತರಿಕ ಭದ್ರತಾ ವಿಭಾಗ; ಬಿ.ಎಸ್. ಲೋಕೇಶ್ ಕುಮಾರ್ – ಐಜಿಪಿ, ಉತ್ತರ ವಲಯ, ಬೆಳಗಾವಿ; ಎಸ್.ಎನ್. ಸಿದ್ದರಾಮಪ್ಪ– ಐಜಿಪಿ, ಕೇಂದ್ರ ಕಚೇರಿ, ಬೆಂಗಳೂರು; ಎಂ.ಬಿ. ಬೋರಲಿಂಗಯ್ಯ– ಡಿಐಜಿ, ದಕ್ಷಿಣ ವಲಯ, ಮೈಸೂರು; ಸಿ. ವಂಶಿ ಕೃಷ್ಣ– ಡಿಐಜಿ, ಆರ್ಥಿಕ ಅಪರಾಧಗಳ ವಿಭಾಗ, ಸಿಐಡಿ; ಸಿ.ಬಿ. ರಿಷ್ಯಂತ್– ಎಸ್.ಪಿ, ದಕ್ಷಿಣ ಕನ್ನಡ.

### ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.



## ಸಂಕ್ಷಿಪ್ತ ಸುದ್ದಿ

### ಬಸವರಾಜ ಸಾದರಗೆ 'ಹನಿಗವನ ಸಾಹಿತ್ಯ ಪ್ರಶಸ್ತಿ'

**ಬೆಂಗಳೂರು:** ಕರ್ನಾಟಕ ವಿಕಾಸ ರಂಗ ನೀಡುವ 'ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ'ಗೆ ಕವಿ, ಕಥೆಗಾರ ಬಸವರಾಜ ಸಾದರ ಆಯ್ಕೆಯಾಗಿದ್ದಾರೆ.



ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ. ಚುಟುಕು ಕವಿ ಜರಗನ ಹಳ್ಳಿ ಶಿವಶಂಕರ್ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಗೆ ಬಂದಿದ್ದ 2022ನೇ ಸಾಲಿನ ಹನಿಗವನ ಕೃತಿಗಳನ್ನು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಅವರು ಪರಾಮರ್ಶೆ ಮಾಡಿದ್ದರು. ಅಂತಿಮವಾಗಿ ಬಸವರಾಜ ಸಾದರ ಅವರ 'ತೊಟ್ಟು' ಕೃತಿಯನ್ನು ಆಯ್ಕೆ ಮಾಡಲಾಗಿದೆ.

ಜುಲೈ ತಿಂಗಳಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಕುರುಹಿನಶೆಟ್ಟಿ ಕೇಂದ್ರ ಸಂಘವು 2022–23ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 85 ಹಾಗೂ ಪಿಯುಸಿಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಕುರುಹಿನಶೆಟ್ಟಿ ಜನಾಂಗದ ವಿದ್ಯಾರ್ಥಿ ಗಳು ಜುಲೈ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ www.kuruhinasettysanga.orgಗೆ ಭೇಟಿ ನೀಡಿ ಅಥವಾ 80503 05105ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

### ಜೋಯಾಲುಕ್ಕಾಸ್ ಷೋ ರೂಂ ಉದ್ಘಾಟನೆ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಕನಕಪುರ ರಸ್ತೆಯಲ್ಲಿರುವ ಫೋರಂ ಮಾಲ್‌ನಲ್ಲಿ ಜೂನ್ 22ರಂದು ಜೋಯಾಲುಕ್ಕಾಸ್‌ನ ನೂತನ ಷೋ ರೂಂ ಉದ್ಘಾಟನೆಯಾಗಲಿದೆ.

ಜೋಯಾಲುಕ್ಕಾಸ್ ಅಧ್ಯಕ್ಷ ಜೋಯ್ ಆಲುಕ್ಕಾ, 'ಕನಕಪುರ ರಸ್ತೆಯ ಸುತ್ತಮುತ್ತಲಿನ ನಿವಾಸಿಗಳಿಗೆ ವಿಶ್ವದರ್ಜೆಯ ವಾತಾವರಣದಲ್ಲಿ ಅವರ ಅಗತ್ಯತೆಗಳಿಗೆ ತಕ್ಕಂತೆ ಅತ್ಯುತ್ತಮವಾದ ಆಭರಣಗಳನ್ನು ಪೂರೈಸುವ ಕೆಲಸವನ್ನು ನಮ್ಮ ತಂಡ ಮಾಡಲಿದ್ದು, ಈ ಶೋ ರೂಮ್ ಉದ್ಘಾಟನೆಗೆ ನಾವು ತುಂಬಾ ಉತ್ಸುಕರಾಗಿದ್ದೇವೆ' ಎಂದು ಹೇಳಿದರು.

'ಇಲ್ಲಿನ ಜೋಯಾಲುಕ್ಕಾಸ್ ಶೋ ರೂಮ್ ಅತ್ಯಾಧುನಿಕ ಶೈಲಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಇದು ಆಭರಣ ಪ್ರಿಯರಿಗೆ ಶಾಪಿಂಗ್ ಅನುಭವ ನೀಡಲಿದೆ. ದೇಶ–ವಿದೇಶಗಳಲ್ಲಿ ದೊರೆಯುವ ಚಿನ್ನ, ವಜ್ರ, ಪ್ಲಾಟಿನಿಯಂ ಮತ್ತು ಬೆಳ್ಳಿ ಆಭರಣಗಳ ಬೃಹತ್ ಮತ್ತು ಆಧುನಿಕ ಸಂಗ್ರಹಗಳಿವೆ. ಎಲ್ಲ ರೀತಿಯ ಅಮೂಲ್ಯ ಆಭರಣಗಳನ್ನು ಒಂದೇ ಸೂರಿನಡಿಯಲ್ಲಿ ಪಡೆದುಕೊಳ್ಳಬಹುದು. ಜತೆಗೆ ಇಲ್ಲಿ ಬರುವ ಗ್ರಾಹಕರಿಗೆ ಪಾರ್ಕಿಂಗ್ ವ್ಯವಸ್ಥೆಯು' ಇದೆ ಎಂದು ತಿಳಿಸಿದ್ದಾರೆ.

## ಪರಿಶಿಷ್ಟರ ವಿಶೇಷ ನೇಮಕಾತಿಗೆ ಒತ್ತಾಯ

**ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ರೂಪಿಸಿದ್ದ ವಿಶೇಷ ನೇಮಕಾತಿ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಬೇಕು ಎಂದು ಅಭ್ಯರ್ಥಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಈ ವಿಶೇಷ ನೇಮಕಾತಿ ಸುಮಾರು 2008ರಿಂದ ಸ್ಥಗಿತಗೊಂಡಿದೆ. ಇದರಿಂದಾಗಿ ಸರ್ಕಾರ ನೀಡಿರುವ ಸೌಲಭ್ಯವನ್ನು ಅರ್ಹ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು ಪಡೆಯದೆ ವಂಚಿತರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಕರ್ನಾಟಕ ನಾಗರಿಕ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ) ಅಭ್ಯರ್ಥಿಗಳಿಗೆ ಕೆಲವು 'ಗ್ರೂಪ್ ಎ' ಮತ್ತು 'ಗ್ರೂಪ್ ಬಿ' ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮಾವಳಿಗಳು–1985ರ ಅನ್ವಯ ಈ ನೇಮಕಾತಿಯನ್ನು ಕೈಗೊಳ್ಳಲಾಗುತ್ತಿತ್ತು.

ಈ ಸೌಲಭ್ಯದಿಂದ ವಿಶ್ವವಿದ್ಯಾಲಯಗಳಲ್ಲಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳನ್ನು ಸಂದರ್ಶನ ಮೂಲಕವೇ ಈ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು. 2008ರ ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಈ ಬಗ್ಗೆ ಗಮನಹರಿಸಿಲ್ಲ ಎಂದು ದೂರಿದ್ದಾರೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ರಾಜ್ಯ ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ ಕುಲಪತಿ ಮತ್ತು ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿಯು ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಬೇಕು ಎಂದು ನಿಯಮಾವಳಿಗಳನ್ನು ಸೂಚಿಸಲಾಗಿತ್ತು. ಈ ಸಮಿತಿಯು ವಿಶ್ವವಿದ್ಯಾಲಯದಿಂದ ರ‍್ಯಾಂಕ್ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ಆಯ್ಕೆ ಪ್ರಕ್ರಿಯೆಗಳನ್ನು ಆರಂಭಿಸುವಂತೆ ನಿರ್ದೇಶನ ನೀಡಲಾಗಿತ್ತು. 1982–83ರಿಂದ ಈ ಪ್ರಕ್ರಿಯೆ ಕೈಗೊಳ್ಳಲಾಗುತ್ತಿತ್ತು. ಹೀಗಾಗಿ, ಈ ಪ್ರಕ್ರಿಯೆಯನ್ನು ಮತ್ತೊಮ್ಮೆ ಆರಂಭಿಸುವ ಮೂಲಕ ಪರಿಶಿಷ್ಟರಿಗೆ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.



**ಸಮವಸ್ತ್ರ ವಿತರಣೆ** ಬಿಎಂಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಹಾಗೂ ಕಾಲೇಜಿನ ಅನಿಕೇತನ ಕನ್ನಡ ಸಂಘದಿಂದ ಬಿಡದಿಯ ಕಂಬಿಪುರ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸಮವಸ್ತ್ರ ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಪಂಕಜ್ ಚೌಧರಿ ಇದ್ದಾರೆ

## ಬಿಲ್ ಪಾವತಿಸದಿದ್ದರೆ ಕಾಮಗಾರಿ ಸ್ಥಗಿತ: ಗುತ್ತಿಗೆದಾರರ ಸಂಘ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವತಿಯಿಂದ ಬಿಲ್ ಪಾವತಿಗೆ ಜೂನ್ 29ರ ಗಡುವು ನೀಡಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ, ಆ ವೇಳೆಗೆ ಪಾವತಿಯಾಗದಿದ್ದರೆ ಎಲ್ಲ ರೀತಿಯ ಕಾಮಗಾರಿಗಳನ್ನು ಸ್ಥಗಿತಗೊಳಿಸುವುದಾಗಿ ಎಚ್ಚರಿಸಿದೆ.

ಸರ್ಕಾರ ಮತ್ತು ಬಿಬಿಎಂಪಿ ಅನುದಾನಗಳಡಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಿಲ್ಲ. ಅಮೃತ ನಗರೋತ್ಥಾನ ಅನುದಾನದಲ್ಲಿ ₹650 ಕೋಟಿ ಪಾವತಿಯಾಗಿಲ್ಲ. ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಿರುವ ಕಾಮಗಾರಿಗಳಿಗೆ ಏಪ್ರಿಲ್ 201ರಿಂದ ಬಿಲ್ ಬಾಕಿ ಇದೆ. ಆರು ತಿಂಗಳ ಎಲ್‌ಒಸಿ ನೀಡುವಂತೆ ಕೋರಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಸಂಘದ ಅಧ್ಯಕ್ಷ ಅಂಬಿಕಾಪತಿ ದೂರಿದ್ದಾರೆ.

ಗುತ್ತಿಗೆದಾರರು ಆರ್ಥಿಕ ಸಂಕಷ್ಟದಲ್ಲಿದ್ದು, ಅಧಿಕಾರಿಗಳೊಂದಿಗೆ ಚರ್ಚಿಸಿ ತಡೆಹಿಡಿದಿರುವ ಪಾವತಿಗಳನ್ನು ಜೂನ್ 21ರೊಳಗೆ ಬಿಡುಗಡೆ ಮಾಡಬೇಕು ಎಂದು ಎಲ್ಲ ಮುಖ್ಯ ಎಂಜಿನಿಯರ್‌ಗಳಿಗೆ ಸಂಘದ ವತಿಯಿಂದ ಪತ್ರ ಬರೆಯಲಾಗಿದೆ ಎಂದು ಕಾರ್ಯಾಧ್ಯಕ್ಷ ಜಿ.ಎಂ. ರವೀಂದ್ರ ಹೇಳಿದರು,.

ಬಿಬಿಎಂಪಿ ವತಿಯಿಂದ ಹಣ ಪಾವತಿಯಾಗದಿದ್ದರೆ, ಜೂನ್ 29ರಿಂದ ಎಲ್ಲ ರೀತಿಯ ಕಾಮಗಾರಿಗಳನ್ನೂ ಸ್ಥಗಿತಗೊಳಿಸಲು ಸಂಘದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

## ಕಲುಷಿತ ನೀರು ಸೇವನೆ: 20 ಜನ ಅಸ್ವಸ್ಥ

**ಬೀದರ್:** ಔರಾದ್ ತಾಲ್ಲೂಕಿನ ಕರಕ್ಯಾಳದಲ್ಲಿ ಕಲುಷಿತ ನೀರು ಕುಡಿದು 20 ಜನ ಅಸ್ವಸ್ಥರಾಗಿದ್ದಾರೆ.

ಆರು ಮಕ್ಕಳು ಸೇರಿದಂತೆ ಒಟ್ಟು 20 ಜನ ಅಸ್ವಸ್ಥರಾಗಿದ್ದು, ಔರಾದ್ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬಾವಿಯ ನೀರು ನೇರವಾಗಿ ಕುಡಿಯಲು ಪೂರೈಸಿದ್ದೇ ಸಮಸ್ಯೆಗೆ ಕಾರಣ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದಲ್ಲಿ ವೈದ್ಯರ ತಂಡ ಬೀಡು ಬಿಟ್ಟಿದೆ. ವಿಷಯ ತಿಳಿದು ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಅವರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ 'ಶುದ್ಧ ಕುಡಿಯುವ ನೀರು ಪೂರೈಸಲಾಗುವುದು' ಎಂದು ಭರವಸೆ ನೀಡಿದರು.

## ಪಿಯು: 50,478 ವಿದ್ಯಾರ್ಥಿಗಳು ಉತ್ತೀರ್ಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದ್ವಿತೀಯ ಪಿಯು ಪೂರಕ ಪರೀಕ್ಷೆಯ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, 1,07,278 ವಿದ್ಯಾರ್ಥಿಗಳು ಎರಡನೇ ಬಾರಿಯೂ ಅನುತ್ತೀರ್ಣರಾಗಿದ್ದಾರೆ. ಪರೀಕ್ಷೆ ಬರೆದವರ ಪೈಕಿ 50,478 (ಶೇ 32) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕಳೆದ ಮೇ 23ರಿಂದ ಜೂನ್ 3ರವರೆಗೆ ರಾಜ್ಯದ 304 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. 1,57,756 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಪರೀಕ್ಷೆಗೆ ಹಾಜರಾಗಿದ್ದ 95,645 ಬಾಲಕರಲ್ಲಿ 28,901 ಹಾಗೂ 62,111 ಬಾಲಕಿಯರಲ್ಲಿ 21,577 ಮಂದಿ ತೇರ್ಗಡೆಯಾಗಿದ್ದಾರೆ. ಗ್ರಾಮೀಣರಿಗಿಂತ (ಶೇ29.37) ನಗರ ಪ್ರದೇಶದ ವಿದ್ಯಾರ್ಥಿಗಳೇ (ಶೇ 32.69) ಮೇಲುಗೈ ಸಾಧಿಸಿದ್ದಾರೆ.

ಕಲಾ ವಿಭಾಗದಲ್ಲಿ ಶೇ 28.64, ವಾಣಿಜ್ಯ ವಿಭಾಗದಲ್ಲಿ 32.23 ಹಾಗೂ ವಿಜ್ಞಾನ ವಿಭಾಗದಲ್ಲಿ ಶೇ 38.60 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕನ್ನಡ ಮಾಧ್ಯಮದವರಿಗಿಂತ (29.54) ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳು (35.10) ಪೂರಕ ಪರೀಕ್ಷೆಯಲ್ಲೂ ಮುಂದಿದ್ದಾರೆ.

ಹಾಜರಾತಿ ಕೊರತೆಯಿಂದ ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆ ಬರೆದಿದ್ದ 313 ವಿದ್ಯಾರ್ಥಿಗಳಲ್ಲಿ 10 ಬಾಲಕಿಯರು ಸೇರಿ 49 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

## ಭದ್ರತಾ ಸಿಬ್ಬಂದಿಗೆ ಚಾಕು ಇರಿದು ಪರಾರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆರ್.ಟಿ. ನಗರ ಬಳಿಯ ಎಂಎಲ್‌ಎ ಬಡಾವಣೆಯ ಮನೆಯೊಂದರ ಭದ್ರತಾ ಸಿಬ್ಬಂದಿಗೆ ದುಷ್ಕರ್ಮಿಯೊಬ್ಬ ಚಾಕುವಿನಿಂದ ಇರಿದು ಪರಾರಿಯಾಗಿದ್ದು, ಕೃತ್ಯದ ಬಗ್ಗೆ ಪ್ರಕರಣ ದಾಖಲಾಗಿದೆ.

'ಜೂನ್ 18ರಂದು ತಡರಾತ್ರಿ ನಡೆದಿರುವ ಘಟನೆಯಲ್ಲಿ ಭದ್ರತಾ ಸಿಬ್ಬಂದಿ ಆಲ್ಬರ್ಟ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಎಂಎಲ್‌ಎ ಬಡಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನೆ ಇದೆ. ಅದರ ಸಮೀಪದಲ್ಲಿಯೇ ಒಂದನೇ ಮುಖ್ಯರಸ್ತೆಯಲ್ಲಿರುವ ಮನೆಯಲ್ಲಿ ಆಲ್ಬರ್ಟ್ ಅವರು ಭದ್ರತೆ ಕೆಲಸ ಮಾಡುತ್ತಿದ್ದಾರೆ. ತಡರಾತ್ರಿ ಆಲ್ಬರ್ಟ್ ಕುರ್ಚಿಯಲ್ಲಿ ಕುಳಿತುಕೊಂಡಿದ್ದರು. ಅವರ ಬಳಿ ಬಂದಿದ್ದ ದುಷ್ಕರ್ಮಿ, ವಿಚಿತ್ರವಾಗಿ ವರ್ತಿಸಿದ್ದ.' 'ರಾತ್ರಿ ವೇಳೆ ಏಕೆ ಓಡಾಡುತ್ತಿದ್ದಿಯಾ. ಮನೆಗೆ ಹೋಗು' ಎಂದು ಆಲ್ಬರ್ಟ್ ತಾಕೀತು ಮಾಡಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿ, ಆಲ್ಬರ್ಟ್ ಅವರ ಮುಖಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ.

# ವಿಸ್ಟ್ರಾನ್‌ಗೆ ₹ 1.6 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಫೋನ್ ತಯಾರಿಸುವ ವಿಸ್ಟ್ರಾನ್ ಕಂಪನಿಗೆ ರಾಜ್ಯ ಮಟ್ಟದ ಪರಿಸರ ಪರಿಣಾಮ ನಿರ್ವಹಣಾ ಪ್ರಾಧಿಕಾರವು(ಎಸ್‌ಇಐಎಎ) ₹ 1.6 ಕೋಟಿ ದಂಡ ವಿಧಿಸಿದೆ. ಕಂಪನಿಯು ದಂಡದ ಮೊತ್ತವನ್ನು ಪಾವತಿಸಿದೆ.

ತೈವಾನ್ ದೇಶದ ಐಫೋನ್ ತಯಾರಿಕಾ ಕಂಪನಿಗಳಲ್ಲಿ ಒಂದಾಗಿರುವ ವಿಸ್ಟ್ರಾನ್, ಬೆಂಗಳೂರಿನಲ್ಲಿ ₹650 ಕೋಟಿ ಬಂಡವಾಳ ಹೂಡಿಕೆ ಮಾಡಿದೆ. ಕಳೆದ ಕೆಲವು ವರ್ಷಗಳಿಂದ ಉತ್ಪಾದನೆ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸಿದೆ. ದೊಡ್ಡ ಮೊತ್ತವನ್ನು ನಗರದಲ್ಲಿ ಹೂಡಿಕೆ ಮಾಡಿದ್ದರೂ ಪರಿಸರ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ (ಎನ್‌ಒಸಿ) ಪಡೆದುಕೊಂಡಿರಲಿಲ್ಲ. ಹೀಗಾಗಿ ದಂಡ ವಿಧಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ವಿಸ್ಟ್ರಾನ್ ಕಂಪನಿಯನ್ನು ಟಾಟಾ ಗ್ರೂಪ್‌ನವರು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ವೇಳೆ ಎನ್‌ಒಸಿ ಪಡೆದುಕೊಳ್ಳದೇ ಉತ್ಪಾದನೆ ನಡೆಸುತ್ತಿರುವುದು ಬೆಳಕಿಗೆ ಬಂದಿತ್ತು. ಕಂಪನಿಯು ಮೇ 2023ರಲ್ಲಿ ದಂಡವನ್ನು ಪಾವತಿಸಿದೆ ಎಂದು ಮೂಲಗಳು ಹೇಳಿವೆ.

# ‘ಶಕ್ತಿ ಯೋಜನೆ ವ್ಯವಸ್ಥಿತವಾಗಿ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಮಹತ್ವಾಕಾಂಕ್ಷಿ ‘ಶಕ್ತಿ’ ಯೋಜನೆಯನ್ನು ವ್ಯವಸ್ಥಿತವಾಗಿ ನಡೆಯುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಅವರು 16 ವಿಭಾಗೀಯ ನಿಯಂತ್ರಣಾಧಿಕಾರಿಗಳು, 83 ಘಟಕ ವ್ಯವಸ್ಥಾಪಕರೊಂದಿಗೆ ಮಂಗಳವಾರ ವಿಡಿಯೊ ಸಂವಾದದಲ್ಲಿ ಸೂಚನೆ ನೀಡಿದರು.

ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರ ನಿರ್ದೇಶನದಂತೆ ‘ಜನಸಂದಣಿ ಹೆಚ್ಚಿರುವ 10 ಸ್ಥಳಗಳು, ಜಾತ್ರೆ, ಹಬ್ಬಗಳಿರುವ ದಿನಗಳನ್ನು ಗುರುತಿಸಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಬಸ್‌ಗಳನ್ನು ನಿಯೋಜನೆ ಮಾಡಬೇಕು. ಗುರುತಿಸಿರುವ ಸ್ಥಳಗಳಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಬೇಕು’ ಎಂದು ನಿರ್ದೇಶಿಸಿದರು.

‘ಬಸ್‌ಗಳ ನಿಯೋಜನೆ ಹಾಗೂ ಸಾರಿಗೆ ವ್ಯವಸ್ಥೆಯಲ್ಲಿ ಗೊಂದಲಕ್ಕೆ ಅವಕಾಶ ನೀಡಬಾರದು. ನಿಗಮದ ಚಾಲನಾ ಸಿಬ್ಬಂದಿಗಳೊಂದಿಗೆ ಸಂವಾದ ನಡೆಸಿ, ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಕೇಂದ್ರ ಕಚೇರಿ ಹಿರಿಯ ಅಧಿಕಾರಿಗಳು, ಉಸ್ತುವಾರಿ ಅಧಿಕಾರಿಗಳು ಪ್ರತಿವಾರ ತಪ್ಪದೇ ವಿಭಾಗಗಳಿಗೆ ಭೇಟಿ ನೀಡಿ ಪರಾಮರ್ಶೆ ನಡೆಸಬೇಕು. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹೆಚ್ಚುವರಿ ಟ್ರಿಪ್‌ಗಳ ವ್ಯವಸ್ಥೆ ಮಾಡಬೇಕು’ ಎಂದು ಸಂವಾದದಲ್ಲಿ ಸೂಚಿಸಿದರು.

# ಕೆರೆಗಳ ಮಾಲಿನ್ಯ ನಿಯಂತ್ರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಕೆರೆಗಳಲ್ಲಿ ಮಾಲಿನ್ಯ ಪ್ರಮಾಣ ಹೆಚ್ಚಾಗುತ್ತಿದ್ದು, ಎಲ್ಲೆಡೆ ತೀವ್ರ ನಿಗಾವಹಿಸಿ, ಮಾಲಿನ್ಯ ನಿಯಂತ್ರಿಸಲು ಸೂಚನೆ ನೀಡಬೇಕು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮನವಿ ಮಾಡಿಕೊಳ್ಳಲಾಗಿದೆ.

ಆ್ಯಕ್ಷನ್ ಏಡ್ ಅಸೋಸಿಯೇಷನ್ ವತಿಯಿಂದ ನಡೆಸಿದ ಸಮೀಕ್ಷೆಗಳ ವರದಿಯಲ್ಲಿ ಕೆರೆಗಳ ಮಾಲಿನ್ಯಕ್ಕೆ ಕಾರಣವಾದ ಅಂಶಗಳನ್ನು ವಿವರಿಸಲಾಗಿದೆ. ದೇಶದಲ್ಲಿರುವ ನಗರಗಳ ಕೆರೆಗಳು ಹೆಚ್ಚು ಮಾಲಿನ್ಯದಿಂದ ಕೂಡಿದಿದ್ದು, ಇವುಗಳ ಮೇಲೆ ಶೇ 100ರಷ್ಟು ನಿಗಾವಹಿಸಬೇಕಿದೆ. ಗ್ರಾಮೀಣ ಭಾಗಗಳ ಕೆರೆಗಳ ಮೇಲೆ ಶೇ 50ರಷ್ಟು ಮೇಲ್ವಿಚಾರಣೆ ನಡೆಸಬೇಕು ಎಂದು ಸಲಹೆ ನೀಡಲಾಗಿದೆ.

ಕೆರೆಗಳ ನೀರಿನ ಗುಣಮಟ್ಟದ ಬಗ್ಗೆ ಒಂದು ಅಂಶದಲ್ಲಿ ಸರಿ ಇದೆ, ಇಲ್ಲ ಎಂದು ಹೇಳುವ ಪ್ರಕ್ರಿಯೆಯನ್ನು ಕೈಬಿಟ್ಟು, ವಾಸ್ತವ ಸಂಗತಿಯನ್ನು ಪ್ರಕಟಿಸಬೇಕು. ಅಲ್ಲದೆ, ನೀರಿನ ಗುಣಮಟ್ಟದ ತಿಂಗಳ ವರದಿಯನ್ನು 7ರಿಂದ 15 ದಿನಗಳಲ್ಲಿ ಪ್ರಕಟಿಸಬೇಕು. ಇವೆಲ್ಲವೂ ಸಾರ್ವಜನಿಕರಿಗೆ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚನೆ ನೀಡಬೇಕು ಎಂದು ವರದಿಯಲ್ಲಿ ಕೇಳಿಕೊಳ್ಳಲಾಗಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಮೊಬೈಲ್ ಅಪ್ಲಿಕೇಷನ್‌ಗಳನ್ನು ನಿರ್ಮಿಸಿಕೊಂಡು, ಕೆರೆಗಳ ನೀರಿನ ಗುಣಮಟ್ಟದ ಬಗ್ಗೆ ಮಾಹಿತಿ ನೀಡಬೇಕು. ನೀರಿನ ಗುಣಮಟ್ಟವನ್ನು ಸುಧಾರಿಸಲು ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ ಎಂದು ಆ್ಯಕ್ಷನ್ ಏಡ್‌ನ ರಾಘವೇಂದ್ರ ಬಿ. ಪಚ್ಚಾಪುರ್ ತಿಳಿಸಿದರು.

---

ಪ್ರಜಾವಾಣಿ

# ಕ್ಲಾಸಿಫೈಡ್ಸ್

## ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
**ಜಾಹೀರಾತುಗಳಿಗಾಗಿ ಸಂಪರ್ಕಿಸಿ:**
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Teachers/ Professors

**FRANK PUBLIC** SCHOOL, JP.Nagar 6th Phase, Requires HIGH SCHOOL HINDI, SOCIAL STUDIES, TEACHERS. MIDDLE SCHOOL HINDI, MATHEMATICS, TEACHERS. rumysud@gmail.com 7019301626

**SESHADRIPURAM INSTITUTIONS**
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in

*require*
**Lecturers for Pre-University Colleges**
• Physics • Chemistry • Sanskrit
• Computer Science • Economics

**Eligibility:** Master's Degree in the relevant subject with at least 55% marks in the aggregate and at least two years teaching experience.

**Office Superintendent**
Graduate with minimum 10 years administrative experience in higher educational institution with good communication skills in Kannada & English and computer knowledge.

**Accountant (Male)**
B.Com with at least 2 years experience with Computer knowledge and Tally ERP 9.

**Computer Programmer**
BCA / MCA / 3 years Diploma in Computer Science & Electronics Communication / B. E. in Computer Science & Electronics & Communication / B.Sc. (Cs.) / M.Sc. (Cs.) / Degree with PGDCA with at least 2 years experience.

**Walk-in-Interview**
**on Monday, 26th June 2023 @ 4:00 p.m.**
**Venue:** Seshadripuram Educational Trust Office, No. 27, Nagappa Street, Seshadripuram, Bengaluru – 560 020.
Eligible candidates should bring handwritten application along with resume, photo & copies of testimonials at the time of Interview.

N. R. Pandith Aradhya, President — Dr. Wooday P. Krishna, Honorary General Secretary

**AIMS INSTITUTES** Peenya, Bangalore — **HIRING**
*Inviting applications from the qualified Faculty for the following positions reserved for SC/ST categories in the areas of Computer Applications, Commerce & Finance, Management & Hotel Management.*
Professor - 01 | Associate Professor - 02
Assistant Professor - 03 | Office Executive with IT skills - 02
Qualifications are as per UGC/AICTE/State Government norms. Interested candidates can send resume to **hr@theaims.ac.in** and for further clarification you can contact on
**Ph : 08028376430 / 28390433 / 34**

**BHS HIGHER EDUCATION SOCIETY**
No. 35/1, 11th Main, Jayanagar 4th Block, Bangalore - 11.
bhshes_mc@rediffmail.com/principal@vijayacollege.ac.in
Contact: Mob: 9483328221/7795625554
**REQUIRES**
CO-ORDINATOR/ASSISTANT PROFESSORS OF COMMERCE, Full Time for Post Graduate Department, Vijaya College, R.V. Road, Bangalore-04.
**:: QUALIFICATION ::**
First Class in M.Com with Ph.D from UGC recognized University. Candidates with teaching minimum 3 years experience.
Interested candidates may send their detailed CVs along with photocopies of Marks cards / Certificates of work experience etc., to **the Secretary** at the above address by **post or email** to : bhshes_mc@rediffmail.com/principal@vijayacollege.ac.in within 7 days from the date of notification.
Sd/- Secretary

**LOWRY MEMORIAL** Higher Secondary School, behind KR Puram Metro Station, Bengaluru-16 is looking for BSc+MSc Faculty for Chemistry & Biology and BA/MA Hindi. Email id: hr.lowryinstitutions@gmail.com or Call 9886441913

**AN INTERNATIONAL** School on Nagarabhavi -Kengeri Ring Road, recruiting NURSERY /PRE-PRIMARY TEACHERS for a high salary. We welcome all Freshers and experienced graduates with good Spoken ENGLISH skill to apply. 7 MONTHS MONTESSORI TRAINING IS ALSO PROVIDED. Contact: 7829647333

**"ENDEAVOUR'S INTERNATIONAL** School".Sarjapura, Skilled Teachers required High school: Physics,P.E, Salary: According-to 6th pay commission of-Karnataka. Accommodation canbe provided.Call: 8722140020/ 9945058552, E-Mail: endeavoursintlschool@gmail.com

**REQUIRE (1) Office Assistant, B.Com qualified with thorough working knowledge of Tally, M.S Office & fluency in English & Kannada. (2) Experienced Librarian with B.Lib plus exposure in Digital Library. 3) Asst. Teachers for Nursery class with NTT. Apply immediately to Hon. Secretary, Poornaprajna Education Centre, CA Site No.48, New Thippasandra, HAL 3rd Stage, Bangalore-75. Ph: 080- 25292930 poornaprajnants@gmail.com**

**WANTED LADY** PET teacher and Computer Teacher for Nivedita School in Basavanagudi. Candidates in surrounding areas preferred. Call 080-26677932 b/w 10 am to 2 pm.

**WANTED TEACHERS,** Primary and Middle School, Subject English, Qualification D.Ed and experience staff, Priyadarshini Public School, Laggere. Bangalore- 560058. Contact: 9739334968

**LADY TEACHERS** required for primary, High School Science (CBZ) for a school at Rajajinagar: 9620396782/ 9845346754

**WANTED ADMINISTRATOR,** TEACHERS, To Teach English Social Maths, Science Computer in English Medium Classes Contact: Sree Manjunatha Vidyalaya Magadiroad, Tollgate, Bangalore- 560023. 080-23350778, 9448074071, 9448673495.

### Marketing & Sales

**GOYAL BROTHERS** Prakashan -A leading School textbook Publishing House Requires Experienced Marketing Professionals for Openings in Bangalore & other Stations in Karnataka & Tamil Nadu. Contact: 0120-4655555, Mobile: 9880120931/ 9886624277. Email: info@goyal-books.com Bangalore Office Address: No 340, 11th Main, 2nd Cross, 1st Block, 3rd Stage Near Vishveshwaraiya Quarters, Basaveshwara Nagar. Bangalore: 560079

### Factory

**WANTED**
Marketing, Accounts, Office Executive, Production Manager, Production Engineer, Electrician, DTP Technician/Operator, Drivers & Cooks,
with min 3-5 years in the same field with good communication and Computer skills, for a manufacturing company located at Bommanahalli, near HSR Layout, Bangalore-68. Age limit: within 40 years.
**Send CV to:** uppbangalore@gmail.com
**Contact: 9449817703**

### General

Required for immediate placement an experienced **LADY ACCOUNTANT** for a reputed company in Millers Road, Bangalore . Candidate should have good hands on experience in Tally ERP 9 & managing complete Accounts & Finance. Candidates staying in & around Shivajinagar/ Vasanthnagar / RT Nagar preferred. Salary RS.26,000 /- PM
Email Your Biodata : resume@multeeproe.com

**WANTED PART TIME**
**AREA MARKETING EXECUTIVE**
For Bangalore City
Working Place
Around His Residence
Timing : 5pm to 9:00pm
Qualification PUC & above
Male / Female, with Two Wheeler
Attractive Salary & Commission
**Mob: 91762 00934 / 98459 66724**

**AMAZING OPPORTUNITY,** Retired, VRS, Business/ Professionals, Senior Citizens, Earn Lakhs. International Recognition. SUPERB RETIRED LIFE CAREER. 97400-90431/ 97400-76517

**WANTED FACULTIES** B.Sc Nursing, MPT, M.Sc, M.Pharm, English Teaching Faculties, Office Female Assistant (with knowledge of Computer), Security Guards Contact: MGP Institutions. Kanmanike, Kengeri, Mysore Road, Bangalore. Phone: 9886236341. mgp_nc2001@yahoo.com

**COMMERCIAL EXECUTIVE-EXPORT** (Male) Graduate, Minimum 2-3 Years Experience in Export documentation, fluency in English, Hindi & Kannada, Knowledge of Computer, With good Communication Skills. Salary Rs.25000-30000/-PM. email:- csn@newindiaelectricals.com

### Accounts & Finance

**WANTED ACCOUNTANT/** ACCOUNTS EXECUTIVE Qualification B.Com. Exp:3-5years With TDS`&`GST (Apartment Maintenance with accounts is added advantage) Salary 25000`to 30000`Age below 30years Family Accommodation Call:9964034338 7338084555 9845053636:Mail saiconstructions7889@gmail.com Interview Time:10am to 1pm

### Part-Time Jobs

**REPUTED MNC** COMPANY will Provide WORK FROM HOME, Earn 35000 to 40000 Malleshwaram: 9886641282/ 8197350600

### Multiple Vacancy

**REQUIRED**
Manager/PS (female) required to handle multiple roles.
Marketing Manager (female) required for Hospitality Sector, Travels.
**Sal:** 20k-30k.
**Exp:** 2+Yrs
Kannada English must.
ravikp93@rediffmail.com
Only WhatsApp: 9019043325

**CAREER/INCOME OPPORTUNITY** meet for retired officials on Friday, 23/06/2023 in Anagha Grand ,29th Main, Uttarahalli Main Road, Poornaprajna Nagar, Bengaluru-61, Contact: 8095301555

### Wanted

**LADY ACCOUNTANTS**
**VACANCY FOR FRESHERS**
Job involves Accountancy Work in Tally and Filing Work. Basic Knowledge of Tally and MS Word, MS Excel is must.
Job Timing: 9AM - 5.30PM. Mon-Sat. Walk-in Interview in person with Resume and other relevant documents on any weekday between 10 AM and 5.30 PM -
**PAN OFFICE SYSTEMS PVT. LTD**
5, 1st A Cross, Bismilla Nagar, Bannerghatta Road Cross, B'lore - 560029 Ph: 9341221125

### HRD & Admin

**ADMIN.EXECUTIVE WITH** min. 5 yrs. Experience. Excellent communication skills with knowledge of M S Office required. Preferred candidates staying close to campus. ISME, Sarjapur Road. 8880612345. jobs@isme.in

### Hospital & Medical Jobs

**WANTED STAFF** NURSES, OT TECHNICIAN/ STAFF WARD BOYS. Salary Depending on experience. Contact: 8197779588

### Security & Detectives

**URGENTLY REQUIRED** Security Supervisors to work in Attibele /Bommasandra area. Good experience preferred, capable of handling union related activities. CONTACT: 9686911720

## BUSINESS

### Business to Business

### Finance

**WE ARRANGE** Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

### Business Offers

### Distributors

**DISTRIBUTORS** Wanted across Karnataka & Goa for a full range of foldable plastic trolleys mfd in Gujarat. Criteria: should have good network of exclusive industrial plastic products dealers | retailers. Expert in institutional sales an advantage. Investment only on stocks. Contact: 9379794873/ 6357425818/ marketing3@srp.co.in

### Finance

**NRI'S INVESTMENT** And Finance Now funds are Available on Lowinterest against properties mortgage Land/Building, Land development/ projects Contract-7204995189

## EDUCATIONAL

### Tuitions

**NOW AT** Your Doorstep Best (FRENCH) Tuitions: 9743095715 By T.S.Shivashankar, PhD. USA, Living In Mahalaxmi Layout only Home Tuitions Enough Seats Available, at all & different levels, in all Major Areas of Bangalore & towards Yelahanka Peenya Kengeri & Metro Routes From Mahalaxmi Layout Contact Early for New Academic Year 23-24.

## RENTAL PROPERTIES

### Accommodation Available

### Godown

**GODOWN GROUND** floor 3500 soft Garebhavi Palya Off Hosur Road for rent contact 9343713910

### Accommodation Wanted

### Commercial

**LAND FOR** PETROL STATION Required Land Lease For Petrol Pump Around Banglore Contact: 9400103222

## REAL ESTATE SELLING

### House

### Kanakapura Road

**VAKIL GARDEN** CITY, 4BHK, INDEPENDENT HOUSE SALE 5.5CR PLOT 4200SFT 3500SFT BUILTUP 9845291967 9900734700

## PUBLIC NOTICE

**PUBLIC NOTICE**
Our client, intends to purchase the "Schedule Property" from **Mr. Ashish Bansali** Son of Kanmal Jain, aged about 39 years, residing at No.99/2, Pranag Arka, Flat No.S-3, Bull Temple Road, Basavanagudi,Benglauru-560019.
Any person having right, title, interest, claim, objections or whatsoever in respect of the Schedule Property may file their objections with documentary proof to the undersigned **within 15 days** from the date of publication of this notice. If no objections are received within the said period, our client will proceed to complete the proposed transaction presuming that above mentioned persons are the absolute owners of the Schedule Property and that there are no other Claimants.

**SCHEDULE PROPERTY**
All that piece and parcel of the Property bearing Site No.21, Present **PID.No.49-76-21,** Situated at 6th "A" Road, (6th "A" Cross as per BBMP Endorsement), Chamarajpete, Bengaluru, Ward No. 142-Sunkenahalli, measuring East to West: 20 ft.6 Inches, and North to South: 95 Ft, and bounded on the; **East by** : Property No.20 of Sundarraj Iyengar; **West by:** Property No.22 Shivaprakash; **North by:** 6th Parallel Road; **South by:** Conservancy.

**Sanjay H. Sethiya,** Advocate
**Law Square,** Advocates & Solicitors
Level Two, No.2/1, 3rd Cross, Gandhinagar, Bengaluru-560 009
080-4171 1841; info@lawsquare.in
Bengaluru.
Date: 21.06.2023

## PERSONAL

### Change of Name

**I,AROKIA RAJRAJESH** P, changed-my name-to AROKIYA RAJ RAJESH PHILIP dated: 16.06.2023. Sworn before notary Deepa.M, Bengaluru.

**CHANGE OF DATE OF BIRTH**
I, **SHIVAMMA,** W/o No.14811809-L, Rank-NK-TS, Harsha M, R/at # 868, Rakitha 14th Main, 13th B Cross, Chandra Layout, Nagarabhavi 1st Stage, Bengaluru-72, declare that my D.O.B. is worngly mentioned as 30-12-1981 instead of **31-12-1980**, vide affidavit dated 07/06/2023 before Notary P.C. Ramaiah, Bengaluru

**CHANGE OF NAME**
I, **INCHARA,** D/o No.14811809-L, Rank-NK-TS, Harsha M, R/at # 868, Rakitha 14th Main, 13th B Cross, Chandra Layout, Nagarabhavi 1st Stage, Bengaluru-72, have changed my name from INCHARA to
**INCHARA H**
vide affidavit dated 07/06/2023 before notary P.C. Ramaiah, Bengaluru

**AMAL CHANDRA** ROY, JC681755M, SUB, Vill-Purbayan, Sahagonj, Chinsurah, Hooghly, West Bengal changed Son's name from AJAY CHANDRA ROY to AJOY CHANDRA ROY, 12/06/2023, Notary K.V. Mani, Bangalore

**CHANGE OF NAME**
I, **CHAITRA.S** alias **CHAITRA BISHAK REDDY** W/o, Bishak S.Reddy, Aged about 31 Years, R/at No.2365, 24th Main Road, HSR Layout, Sector-1, Bangalore - 560102. Vide affidavit dated 19.06.2023 before Notary B.M. Chandrashekar, Bangalore. Henceforth I Shall be called as **CHAITRA S** only

**BADE SIMHADRI** RAJU, JC681796W, SUB HONY LT, Vill- H Colony Baji Jn, Gopalapatnam, Visakhapatnam, Andhra Pradesh changed Son's name BADAY YASHWANTH RAJ to BADAY YASHWANT RAJ, 20/06/2023, Notary K.V. Mani, Bangalore

**CHANGE OF NAME**
I, **A SHANMUGA NATHAN** S/o T. Arumugam, Residing at P-3/2 Aste Officer's Enclave, Vishwa Vihar, C.V. Raman Nagar, Bangalore-560093 have changed my name from **A SHANMUGA NATHAN** to
**A S NATHAN,**
vide affidavit dated 15/05/2023, before Notary L.Gopalakrishna, Bangalore.

**I, AMEENA** Zehara W/o Syed Noorul Haq 40 years, ITI layout SK garden, Bangalore have changed My name to GOUSIA SHAIK Affidavit 16-06-2023 notary by Muniswamy.T Bangalore reg19927

**I, SANTHOSH** PRAVEEN KUMAR W/o.Praveen Kumar R/a#209, Parmar Palace, Rama Iyengar Road, Lalbagh West`Gate, Bangalore-560004 Have changed my Name`to SANTHOSH KUMARI vide affidavit dated:19.6.2023 before notary L. Shankaranarayana, Bangalore

**CHANGE OF NAME**
I, **BALAPPA PAWAR** S/o Jeevanna Pawar aged 53 Years, R/at No.529, 8th Cross, 9th B Main, Gokul 1st Stage, 2nd Phase, Mathikere, Bengaluru-560054. have changed my name to
**BALASAHEB PAWAR**
vide affidavit dated 20.06.2023 before Notary N.Narayana Swamy, Bangalore

**CHANGE OF DATE OF BIRTH**
I, **SUNDARAMMA,** M/o No.14811809-L, Rank-NK-TS, Harsha M, R/at # 868, Rakitha 14th Main, 13th B Cross, Chandra Layout, Nagarabhavi 1st Stage, Bengaluru-72, declare that my D.O.B. is worngly mentioned in my son service record as 01-07-1946 instead of **01-08-1956**, vide affidavit dated 07/06/2023 before Notary P.C. Ramaiah, Bengaluru

**I, NIRMALA** AARVIND KUMAR W/o.Arvind Kumar R/a#209, Parmar Palace, Rama Iyengar Road, Lalbagh West`Gate, Bangalore-560004 Have changed my Name`to NIRMALA KUMARI vide affidavit dated:19.6.2023 before notary L. Shankaranarayana, Bangalore

## AUTOMOTIVE

### Four Wheelers Selling

### Tata

**ACCIDENT DAMAGED** KA-01 MV-8957 TATA TIAGO 2021 Model for Sale. Contact: 8660318064. Submit sealed quotation to New India Assurance Company Regional Office, Bangalore.

### Maruti

**ACCIDENT VEHICLE** KA-05-MV-6087, Maruti Swift ZDI+AMT 2019 Without RC Ph: 9980009761/ 9844073989



**CONNECT ಕ್ಲಾಸಿಫೈಡ್ಸ್**

ಸಂಕ್ಷಿಪ್ತ ಸುದ್ದಿ

## ಸಿದ್ದರಾಮಯ್ಯ ಇಂದು ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ದೆಹಲಿಗೆ ತೆರಳಲಿದ್ದು, ಅಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲಿದ್ದಾರೆ.

ಮುಖ್ಯಮಂತ್ರಿಯಾದ ನಂತರ ಕೇಂದ್ರ ಸಚಿವರನ್ನು ಸೌಜನ್ಯದ ಕಾರಣಕ್ಕೆ ಭೇಟಿ ಮಾಡುತ್ತಿರುವುದಾಗಿ ತಿಳಿಸಿದರು.

## ನೇಮಕ


ಡಾ.ದೀಪಕ್ ಎಸ್.

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾಗಿ ಡಾ. ದೀಪಕ್ ಎಸ್. ನೇಮಕಗೊಂಡಿದ್ದಾರೆ.

ಇವರು ಆರ್ಥೋಪೆಡಿಕ್ಸ್ ವಿಭಾಗದ ಪ್ರಾಧ್ಯಾಪಕರಾಗಿದ್ದು, ಆಡಳಿತಾತ್ಮಕ ದೃಷ್ಟಿಯಿಂದ ಸರ್ಕಾರವು ಪ್ರಭಾರದಲ್ಲಿ ನೇಮಿಸಿ ಆದೇಶಿಸಿದೆ. ಈ ಹಿಂದೆ ವೈದ್ಯಕೀಯ ಅಧೀಕ್ಷಕರಾಗಿದ್ದ ಡಾ.ರಮೇಶ್ ಕೃಷ್ಣ ಅವರು, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಡೀನ್ ಆಗಿ ಬಡ್ತಿ ಹೊಂದಿದ್ದರು.

## 24ರಿಂದ ಕೈಮಗ್ಗ ಉತ್ಪನ್ನಗಳ ಮೇಳ

ಬೆಂಗಳೂರು: ಜೆ.ಪಿ.ನಗರದ ಸುಭಾಷ್ ಕನ್ವೆಂಷನ್ ಸೆಂಟರ್‌ನಲ್ಲಿ ಜೂನ್ 24ರಿಂದ ಜುಲೈ 7ರ ತನಕ ರಾಷ್ಟ್ರೀಯ ಕೈಮಗ್ಗ ಮೇಳವನ್ನು ಆಯೋಜಿಸಲಾಗಿದೆ.

ಕೇಂದ್ರ ಸರ್ಕಾರದ ಸಹಯೋಗದಲ್ಲಿ ಅಸ್ಸಾಂನ ಬ್ರಾಫೆಡ್ ಸಂಸ್ಥೆಯು ಈ ಮೇಳವನ್ನು ಆಯೋಜಿಸಿದೆ. 80 ಮಳಿಗೆಗಳಲ್ಲಿ ಹಲವು ರಾಜ್ಯಗಳ ಕೈಮಗ್ಗ ಉತ್ಪನ್ನಗಳು ಒಂದೇ ಸೂರಿನಡಿ ಗ್ರಾಹಕರಿಗೆ ಲಭ್ಯವಾಗಲಿವೆ. ಮೇಳವು ಬೆಳಿಗ್ಗೆ 11ರಿಂದ ರಾತ್ರಿ 8ರ ತನಕ ಇರಲಿದೆ. ಮೇಳದಲ್ಲಿ ಕೈಮಗ್ಗ ಉತ್ಪನ್ನಗಳ ತಯಾರಿಕೆ ಬಗ್ಗೆ ಮಾಹಿತಿ ದೊರೆಯಲಿದೆ. ಮೇಳದ ಅಂಗವಾಗಿ ಆರೋಗ್ಯ ಮೇಳ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ. 24ರಂದು ಸಚಿವ ರಾಮಲಿಂಗರೆಡ್ಡಿ ಅವರು ಮೇಳಕ್ಕೆ ಚಾಲನೆ ನೀಡಲಿದ್ದಾರೆ.

## ಎಸ್‌ಎಚ್‌ಆರ್‌ಸಿ ಅಧ್ಯಕ್ಷರ ಹುದ್ದೆ ಖಾಲಿ: ನೋಟಿಸ್

ಬೆಂಗಳೂರು: 'ಖಾಲಿ ಇರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಹಾಗೂ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಲು ನಿರ್ದೇಶನ ನೀಡಬೇಕು' ಎಂದು ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲೆ ಸುಧಾ ಕಾಟ್ವಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಾನೂನು ಇಲಾಖೆ ಕಾರ್ಯದರ್ಶಿ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಎಸ್. ಉಮಾಪತಿ ವಾದ ಮಂಡಿಸಿದರು.

**ಅರ್ಜಿಯಲ್ಲಿ ಏನಿದೆ?:** 'ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಡಿ.ಎಚ್.ವಘೇಲಾ ಅವಧಿ 2023ರ ಮಾರ್ಚ್ 10ಕ್ಕೆ ಮುಕ್ತಾಯವಾಗಿದೆ. ಅಂತೆಯೇ, ಸದಸ್ಯ ಕೆ.ಬಿ.ಚಂಗಪ್ಪ 2023ರ ಫೆಬ್ರುವರಿ 17ರಂದು, ಮತ್ತೊಬ್ಬ ಸದಸ್ಯ ಆರ್.ಕೆ.ದತ್ತ ಅವಧಿ 2023ರ ಫೆಬ್ರುವರಿ 24ರಂದು ಮುಕ್ತಾಯವಾಗಿದೆ. ಈ ಸಂಬಂಧ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೋರಲಾದ ಅರ್ಜಿಗೆ ಸರ್ಕಾರ ಈವರೆವಿಗೂ ಕ್ರಮ ಕೈಗೊಂಡಿಲ್ಲ' ಎಂಬುದು ಅರ್ಜಿದಾರರ ಆಕ್ಷೇಪ.




ನಗರದಲ್ಲಿ ಮಂಗಳವಾರ ಸುರಿದ ಮಳೆಯಿಂದಾಗಿ ಕೆ.ಆರ್.ಮಾರುಕಟ್ಟೆ ರಸ್ತೆಯಲ್ಲಿ ನೀರು ನಿಂತಿತ್ತು (ಎಡಚಿತ್ರ). ಮಹಿಳೆಯೊಬ್ಬರು ಮಗುವನ್ನು ಎತ್ತಿಕೊಂಡು ರಸ್ತೆಯಲ್ಲಿ ನಿಂತಿದ್ದ ನೀರನ್ನು ದಾಟಿದರು
– ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

ಮುಂಗಾರು ಚುರುಕು • ಕೆಲವೆಡೆ ಕೆಳ ಸೇತುವೆಗಳಲ್ಲಿ ನೀರು ನಿಂತು ಸಂಚಾರಕ್ಕೆ ತೊಂದರೆ

# ಜೋರು ಮಳೆ: ರಸ್ತೆಯಲ್ಲಿ ಹರಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಬೆಳಿಗ್ಗೆಯಿಂದ ಜೋರು ಮಳೆಯಾಗಿ, ಪ್ರಮುಖ ರಸ್ತೆಗಳಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ಮಳೆಗಾಲ ಆರಂಭವಾಗಿ ಹಲವು ದಿನವಾದರೂ ನಗರದಲ್ಲಿ ಬಿಸಿಲು ಹೆಚ್ಚಿತ್ತು. ಆಗಾಗ ಮೋಡ ಕವಿದ ವಾತಾವರಣ ಕಾಣಿಸಿಕೊಂಡು, ಸಾಧಾರಣ ಮಳೆಯಾಗಿತ್ತು. ಮಂಗಳವಾರ ಬೆಳಿಗ್ಗೆಯಿಂದ ಬಹುತೇಕ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬಂತು. ಮಳೆಯೂ ಜೋರಾಗಿ ಸುರಿಯಿತು.

ಬಹುತೇಕ ಕಡೆ ಮಳೆಯ ಅಬ್ಬರ ಮಧ್ಯಾಹ್ನ ಕಡಿಮೆಯಾಯಿತು. ಸಂಜೆಯವರೆಗೂ ಕೆಲವೆಡೆ, ಜಿಟಿ ಜಿಟಿ ಮಳೆ ಮಾತ್ರ ಇತ್ತು. ರಾತ್ರಿಯೂ ಅಲ್ಲಲ್ಲಿ ಮಳೆಯಾಯಿತು.

ಕೆಂಗೇರಿ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ, ಹೊಸಕೆರೆಹಳ್ಳಿ, ಗಿರಿನಗರ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಯಶವಂತಪುರ, ಮಲ್ಲೇಶ್ವರ, ಪೀಣ್ಯ, ದಾಸರಹಳ್ಳಿ, ಜಾಲಹಳ್ಳಿ, ನಾಗಸಂದ್ರ, ಎಂಟನೇ ಮೈಲಿ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ, ಹೆಬ್ಬಾಳ, ಆರ್.ಟಿ. ನಗರ, ವಸಂತನಗರ, ನಾಗಾವರ, ಹೆಣ್ಣೂರು, ಬಾಣಸವಾಡಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಹೆಚ್ಚಿತ್ತು.

ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಜಯನಗರ, ಜೆ.ಪಿ. ನಗರ, ಬನಶಂಕರಿ, ಹನುಮಂತನಗರ, ಬಸವನಗುಡಿ, ಚಾಮರಾಜಪೇಟೆ, ಮೆಜೆಸ್ಟಿಕ್, ಗಾಂಧಿನಗರ, ಸಂಪಂಗಿರಾಮನಗರ, ಶಾಂತಿನಗರ, ಹಲಸೂರು, ದೊಮ್ಮಲೂರು, ಇಂದಿರಾನಗರ, ಎಚ್‌ಎಎಲ್, ಬೆಳ್ಳಂದೂರು, ವೈಟ್‌ಫೀಲ್ಡ್ ನಲ್ಲೂ ಮಳೆ ಜೋರಾಗಿತ್ತು.

**ಸುರಿಯುವ ಮಳೆಯಲ್ಲಿ ಶಾಲಾ ಮಕ್ಕಳ ಸಂಚಾರ:** ಮಂಗಳವಾರ ಬೆಳಿಗ್ಗೆ ಸುರಿಯುವ ಮಳೆಯಲ್ಲಿಯೇ ಶಾಲಾ ಮಕ್ಕಳು ಸಂಚರಿಸಿ ಶಾಲೆ ತಲುಪಿದರು. ಕೆಲ ಮಕ್ಕಳು, ಪೋಷಕರ ಜೊತೆ ವಾಹನಗಳಲ್ಲಿ ಶಾಲೆಯತ್ತ ಹೊರಟಿದ್ದರು. ಮಳೆ ಜೋರಾಗಿದ್ದರಿಂದ, ಕೆಲ ಮಕ್ಕಳು ರಸ್ತೆ ಬದಿಯ ಮಳಿಗೆಗಳಲ್ಲಿ ನಿಂತುಕೊಂಡಿದ್ದ ದೃಶ್ಯಗಳು ಕಂಡುಬಂದವು. ಕೆಲ ಮಕ್ಕಳು, ಕೊಡೆ ಸಹಾಯದಿಂದ ಶಾಲೆಯತ್ತ ಹೆಜ್ಜೆ ಹಾಕಿದರು.

ಬೆಳಿಗ್ಗೆ ಕೆಲಸಕ್ಕೆ ಹೊರಟಿದ್ದವರಿಗೂ ಮಳೆಯಿಂದಾಗಿ ತೊಂದರೆ ಉಂಟಾಯಿತು. ದ್ವಿಚಕ್ರ ವಾಹನಗಳ ಕೆಲ ಸವಾರರು, ರೇನ್‌ಕೋಟ್ ಧರಿಸಿ ಸುರಿಯುವ ಮಳೆಯಲ್ಲಿಯೇ ಸಂಚರಿಸಿದರು.

**ಕಾಲುವೆ ತುಂಬಿ ರಸ್ತೆಯಲ್ಲಿ ಹರಿದ ನೀರು:** ಮಳೆಯಿಂದಾಗಿ ಕಾಲುವೆಗಳು ತುಂಬಿ ರಸ್ತೆಯಲ್ಲಿ ನೀರು ಹರಿಯಿತು. ಅದೇ ನೀರಿನಲ್ಲಿ ವಾಹನಗಳು ಸಂಚರಿಸಿದವು. ಕೆಲ ವಾಹನಗಳು, ಕೆಟ್ಟು ನಿಂತಿದ್ದವು. ಅಂಥ ವಾಹನಗಳನ್ನು ಸ್ಥಳೀಯರು ತಳ್ಳಿ ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು.

ಒಕಳಿಪುರ ರೈಲ್ವೆ ಕೆಳ ಸೇತುವೆ, ಶಿವಾನಂದ ವೃತ್ತ, ಶೇಷಾದ್ರಿಪುರ ಕೆಳಸೇತುವೆ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ನೀರು ನಿಂತುಕೊಂಡು ಜನರ ಸಂಚಾರಕ್ಕೆ ತೊಂದರೆ ಉಂಟಾಯಿತು.

ಹಲವು ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದ್ದರಿಂದ ದಟ್ಟಣೆಯೂ ವಿಪರೀತವಾಗಿತ್ತು.

**ಮಾರುಕಟ್ಟೆ ರಸ್ತೆಯಲ್ಲಿ ಹರಿದ ನೀರು:** ಚಿಕ್ಕಪೇಟೆ, ಕಾಟನ್‌ಪೇಟೆ, ಕೆ.ಆರ್. ಮಾರುಕಟ್ಟೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನೀರು ಹರಿಯಿತು. ತರಕಾರಿ, ಹಣ್ಣು ವ್ಯಾಪಾರಿಗಳಿಗೆ ತೊಂದರೆ ಉಂಟಾಯಿತು.

'ಮಂಗಳವಾರ ಉತ್ತಮ ಮಳೆ ಸುರಿದಿದೆ. ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಬಗ್ಗೆ ಮಾತ್ರ ದೂರುಗಳು ಬಂದಿದ್ದವು. ಉಳಿದಂತೆ, ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

## ಪತಿ ಪಾಟಿ ಸವಾಲಿಗೆ ಪ್ರಯಾಣ ವೆಚ್ಚ: ಕೋರ್ಟ್ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚ್ಛೇದನ ಮಂಜೂರಾತಿಗೆ ಕೋರಿದ ಪ್ರಕರಣವೊಂದರಲ್ಲಿ; 'ಪಾಟಿ ಸವಾಲು ಎದುರಿಸಲು ಪತಿ ಅಮೆರಿಕದಿಂದ ಬರಬೇಕಿರುವ ಹಿನ್ನೆಲೆಯಲ್ಲಿ ಆತನ ಪ್ರಯಾಣಕ್ಕೆ ತಗುಲುವ ₹1.65 ಲಕ್ಷ ಭರಿಸಿ' ಎಂದು ಪತ್ನಿಗೆ ನಿರ್ದೇಶಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ದಂಪತಿಗೆ ಅನುಕೂಲವಿರುವಂತೆ ಪಾಟಿ ಸವಾಲು ವ್ಯವಸ್ಥೆ ಮಾಡಬೇಕು. ಮುಂದಿನ ನಾಲ್ಕು ತಿಂಗಳಲ್ಲಿ ವಿಚ್ಛೇದನ ಕೋರಿಕೆ ಅರ್ಜಿ ಇತ್ಯರ್ಥಪಡಿಸಬೇಕು' ಎಂದು ಕೌಟುಂಬಿಕ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

'ಪ್ರಕರಣದಲ್ಲಿ ಪತಿಯೇ ವಿವಾಹ ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಪಾಟಿ ಸವಾಲಿಗೆ ಒಳಪಡಲು ಅವರು ಅಮೆರಿಕದಿಂದ ಭಾರತಕ್ಕೆ ಬಂದು ಹೋಗುವ ಪ್ರಯಾಣದ ವೆಚ್ಚ ಭರಿಸಲಾಗದಷ್ಟು ಬಡತನ ಅವರಿಗಿಲ್ಲ. ವಿವಾಹ ವಿಚ್ಛೇದನದಂತಹ ಗಂಭೀರ ಪ್ರಕರಣದಲ್ಲಿ ಪತಿಯನ್ನು ಪಾಟಿ ಸವಾಲಿಗೆ ಗುರಿಪಡಿಸುವುದು ಪತ್ನಿಯ ಹಕ್ಕು. ಯಾವುದೇ ಸಂದರ್ಭದಲ್ಲೂ ಹೊರಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯನ್ನು ನ್ಯಾಯಾಲಯವು ಪ್ರಕರಣದ ಪಕ್ಷಗಾರರ ಮೇಲೆ ಹೊರಿಸಬಾರದು. ಹಾಗಾಗಿ, ಕೌಟುಂಬಿಕ ನ್ಯಾಯಾಲಯದ ಆದೇಶ ಕಾನೂನು ಬಾಹಿರವಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

## 'ಮದುವೆ ನಂತರ ದೈಹಿಕ ಸಂಪರ್ಕ ನಿರಾಕರಣೆ: ಅಪರಾಧವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದುವೆಯ ಬಳಿಕ ದೈಹಿಕ ಸಂಪರ್ಕಕ್ಕೆ ನಿರಾಕರಿಸುವುದು ಹಿಂದೂ ವಿವಾಹ ಕಾಯ್ದೆ ಅಡಿಯಲ್ಲಿ ನಿಸ್ಸಂದೇಹವಾಗಿ ಕ್ರೌರ್ಯ ಎನಿಸಿದರೂ, ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 498-ಎ ಅಡಿಯಲ್ಲಿ ಹೇಳಿರುವಂತಹ ಕ್ರೌರ್ಯದ ಅಪರಾಧವಾಗುವುದಿಲ್ಲ' ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

'ಮದುವೆ ನಂತರ ದೈಹಿಕ ಸಂಪರ್ಕಕ್ಕೆ ನಿರಾಕರಿಸಿದ ಹಿನ್ನೆಲೆಯಲ್ಲಿ ಪತ್ನಿಯು ಐಪಿಸಿ ಕಲಂ 498-ಎ ಅಡಿಯಲ್ಲಿ ಕ್ರೌರ್ಯದ ಆರೋಪ ಹೊರಿಸಿ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣದಲ್ಲಿ ಪತ್ನಿ ಮದುವೆಯ ನಂತರ 28 ದಿನಗಳ ಕಾಲ ಪತಿಯ ಮನೆಯಲ್ಲಿ ನೆಲೆಸಿದ್ದಾರೆ. ಇವರ ಏಕೈಕ ಆರೋಪ ಎಂದರೆ, ಪತಿ ಆಧ್ಯಾತ್ಮಕ ಚಿಂತಕರೊಬ್ಬರ ಅನುಯಾಯಿಯಾಗಿದ್ದಾರೆ. ಸದಾ ಅವರ ಪ್ರವಚನಗಳ ವಿಡಿಯೊ ಕಡೆಗೇ ಆಸಕ್ತಿ ತೋರುತ್ತಾ ಆಧ್ಯಾತ್ಮಿಕ ಒಲವು ಬೆಳೆಸಿಕೊಂಡಿದ್ದಾರೆ.

ನನ್ನೊಡನೆ ಯಾವತ್ತೂ ದೈಹಿಕ ಸಂಪರ್ಕ ಬೆಳೆಸುವ ವಾಂಛೆಯನ್ನೇ ತೋರಿಸಿಲ್ಲ. ಇದು ಹಿಂದೂ ವಿವಾಹ ಕಾಯ್ದೆಯಡಿ ನಿಸ್ಸಂದೇಹವಾಗಿ ಕ್ರೌರ್ಯ ಎನಿಸಲಿದೆ ಎಂದಿದ್ದಾರೆ. ಆದರೆ, ಇದು ಐಪಿಸಿ ಕಲಂ 498-ಎ ಅಡಿಯಲ್ಲಿ ಹೇಳಿರುವಂತಹ ಕ್ರೌರ್ಯದ ಅಪರಾಧ ಕೃತ್ಯವಾಗುವುದಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಟ್ಟಿದೆ.

'ಕ್ರೌರ್ಯದ ಆಧಾರದ ಮೇಲೆ ಕೌಟುಂಬಿಕ ನ್ಯಾಯಾಲಯ ವಿವಾಹ ಅನೂರ್ಜಿತಗೊಳಿಸಿ ಈಗಾಗಲೇ ವಿಚ್ಛೇದನ ನೀಡಿದೆ. ಅದೇ ಆಧಾರದ ಮೇಲೆ ಕ್ರಿಮಿನಲ್ ಪ್ರಕ್ರಿಯೆ ಮುಂದುವರಿಸಲು ಅವಕಾಶ ಮಾಡಿಕೊಡಲಾಗದು' ಎಂದು ಆದೇಶದಲ್ಲಿ ವಿವರಿಸಿದೆ.

'ದೂರಿನಲ್ಲಿ ಮತ್ತು ದೋಷಾರೋಪ ಪಟ್ಟಿಯಲ್ಲಿ 498-ಎ ಅಡಿಯಲ್ಲಿ ಕ್ರೌರ್ಯದ ಅಪರಾಧ ನಡೆದಿದೆ ಎನ್ನಲಾದ ಬಗ್ಗೆ ಯಾವುದೇ ಅಂಶಗಳು ಕಂಡುಬರುತ್ತಿಲ್ಲ. ಹೀಗಾಗಿ, ಪತಿ ಹಾಗೂ ಅವರ ತಂದೆ-ತಾಯಿ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆ ಮುಂದುವರಿಸುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ' ಎಂದು ತೀರ್ಮಾನಿಸಿರುವ ನ್ಯಾಯಪೀಠ, ಪತಿ ಮತ್ತು ಅವರ ಪೋಷಕರ ವಿರುದ್ಧದ ಕ್ರಿಮಿನಲ್ ವಿಚಾರಣಾ ಪ್ರಕ್ರಿಯೆ ರದ್ದುಪಡಿಸಿದೆ.

**ಪ್ರಕರಣವೇನು?:** ನಗರದ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಪತಿ–ಪತ್ನಿ 2019ರ ಡಿಸೆಂಬರ್ 18 ರಂದು ಮದುವೆಯಾಗಿದ್ದರು. ಮದುವೆಯಾದ 28 ದಿನಗಳವರೆಗೆ ಮಾತ್ರವೇ ಪತ್ನಿ ಪತಿಯ ಮನೆಯಲ್ಲಿ ನೆಲೆಸಿದ್ದರು. ನಂತರ ಪತಿಯ ಮನೆಯನ್ನು ತೊರೆದಿದ್ದರು. 2020ರ ಫೆಬ್ರುವರಿ 5ರಂದು ಪತಿ ಮತ್ತು ಅವರ ಪೋಷಕರ ವಿರುದ್ಧ ಐಪಿಸಿ ಕಲಂ 498–ಎ, ವರದಕ್ಷಿಣೆ ತಡೆ ಕಾಯ್ದೆ ಕಲಂ 4ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಮತ್ತೊಂದೆಡೆ ವಿವಾಹ ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಕ್ರೌರ್ಯದ ಆಧಾರದ ಮೇಲೆ ಮದುವೆ ಅಸಿಂಧುಗೊಳಿಸುವಂತೆ ಕೋರಿದ್ದರು. 2022ರ ನವೆಂಬರ್ 16ರಂದು ದಂಪತಿಯ ಮದುವೆಯನ್ನು ಅನೂರ್ಜಿತಗೊಳಿಸಿ ಕೌಟುಂಬಿಕ ನ್ಯಾಯಾಲಯ ಆದೇಶಿಸಿತ್ತು. ಇದಾದ ನಂತರ ವರದಕ್ಷಿಣೆ ಕಿರುಕುಳ ಆರೋಪದಡಿ ಪತಿಯ ವಿರುದ್ಧದ ಪ್ರಕರಣವನ್ನು ಪತ್ನಿ ಮುಂದುವರಿಸಿದ್ದರು.

ಕ್ರಿಮಿನಲ್ ಪ್ರಕರಣದ ಸಂಬಂಧ ತನಿಖೆ ನಡೆಸಿದ್ದ ಪೊಲೀಸರು, ಪತಿ ಮತ್ತು ಅವರ ತಂದೆ, ತಾಯಿ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ದೋಷಾರೋಪ ಪಟ್ಟಿ ರದ್ದು ಕೋರಿ ಪತಿ 2021ರ ಸೆಪ್ಟೆಂಬರ್ 6ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್, ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿದ್ದ ವಿಚಾರಣೆಯ ಪ್ರಕ್ರಿಯೆಗೆ ತಡೆ ನೀಡಿತ್ತು.

ಪತ್ನಿಯ ಆರೋಪಗಳನ್ನು ಅಲ್ಲಗೆಳೆದಿದ್ದ ಪತಿ, ಮದುವೆಯಾದ ನಂತರ ನನ್ನ ತಂದೆ-ತಾಯಿ ನಮ್ಮ ಜೊತೆಗೆ ನೆಲೆಸಿರಲಿಲ್ಲವಾದರೂ ಅವರನ್ನೂ ಪ್ರಕರಣದಲ್ಲಿ ಎಳೆದು ತಂದಿದ್ದಾರೆ. ಹೀಗಾಗಿ, ಐಪಿಸಿ 498–ಎ ಅಡಿ ಮಾಡಿರುವ ಆರೋಪಗಳನ್ನು ರದ್ದುಪಡಿಸಬೇಕು ಎಂದು ಕೋರಿದ್ದರು.

## 'ಜ್ಞಾನಭಾರತಿ ಉಲ್ಲಾಳ್ ನಾಟಕ ಸ್ಪರ್ಧೆ ಮತ್ತೆ ಶುರುವಾಗಲಿ'

ಬೆಂಗಳೂರು: ಕಾಲೇಜು ರಂಗಭೂಮಿಯನ್ನು ಬೆಳೆಸಲು ಕಳೆದ ದಶಕದಲ್ಲಿ ನಡೆಯುತ್ತಿದ್ದ ಜ್ಞಾನಭಾರತಿ ಉಲ್ಲಾಳ್ ಪಾರಿತೋಷಕ ನಾಟಕ ಸ್ಪರ್ಧೆ ಮಹತ್ವವಾದುದು. ಇತ್ತೀಚೆಗೆ ನಾನಾ ಕಾರಣಗಳಿಂದ ಸ್ಥಗಿತಗೊಂಡಿದ್ದು, ಉಲ್ಲಾಳ್ ನಾಟಕ ಸ್ಪರ್ಧೆಗೆ ಮರುಚಾಲನೆ ನೀಡಬೇಕು ಎಂದು ಲೇಖಕ ಶೂದ್ರ ಶ್ರೀನಿವಾಸ್ ಹೇಳಿದರು.

ಸರ್ಕಾರಿ ಕಲಾ ಕಾಲೇಜಿನ ಕನ್ನಡ ಸಂಘ ಮತ್ತು ಸಂಸ ಥಿಯೇಟರ್ ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಯುವರಂಗ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಾಂಶುಪಾಲ ಪಿ.ಟಿ. ಶ್ರೀನಿವಾಸ ನಾಯಕ ಮಾತನಾಡಿದರು. 'ವಿದ್ಯಾರ್ಥಿಗಳು 'ಲೋರ್ಕನ ಚಮ್ಮಾರನ ಚಾಲೂಕಿ ಹೆಂಡತಿ' ನಾಟಕ ತರಬೇತಿ ಪಡೆಯುತ್ತಿದ್ದಾರೆ.

## 'ಪೋಷಕರ ಅನುಮತಿ ಪತ್ರ ಕಡ್ಡಾಯಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಕ್ತಿ ಯೋಜನೆ ಅಡಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಜಾರಿಯಲ್ಲಿದ್ದು, ಬಾಲಕಿಯರ ಪ್ರಯಾಣಕ್ಕೆ ಪೋಷಕರ ಅನುಮತಿ ಪತ್ರ ಕಡ್ಡಾಯಗೊಳಿಸಬೇಕು' ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ನಿರ್ದೇಶಕ ನಾಗಸಿಂಹ ಜಿ ರಾವ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಮನೆಯಲ್ಲಿ ಪೋಷಕರು ಮಕ್ಕಳು ಚಾಕಲೇಟ್ ತಿಂದರೆಂದು ಬೈದ ಕಾರಣಕ್ಕೆ ಮಕ್ಕಳು ಮನೆ ಬಿಟ್ಟು ಧರ್ಮಸ್ಥಳಕ್ಕೆ ಹೋಗಿದ್ದರು. ಆದ್ದರಿಂದ ಈ ರೀತಿ ಪ್ರಕರಣಗಳು ಮರುಕಳಿಸದಂತೆ ಮಕ್ಕಳ ಹಿತ ದೃಷ್ಟಿಯಿಂದ ಉಚಿತ ಪ್ರಯಾಣದ ಸಮಯದಲ್ಲಿ ಕೆಲವು ನಿಯಮ ಜಾರಿಗೊಳಿಸುವ ಅನಿವಾರ್ಯತೆ ಇದೆ' ಎಂದು ತಿಳಿಸಿದ್ದಾರೆ.

'ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 26ರ ಪ್ರಕಾರ ಮಕ್ಕಳಿಗೆ ಸಾಮಾಜಿಕ ಭದ್ರತೆ ನೀಡುವ ಹೊಣೆ ಸರ್ಕಾರದ ಮೇಲಿದೆ. ನಮ್ಮ ದೇಶ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1992ರಲ್ಲಿ ಸಹಿ ಮಾಡಿ ಮಕ್ಕಳ ಬದುಕು, ರಕ್ಷಣೆ, ಅಭಿವೃದ್ಧಿ ಹಾಗೂ ಭಾಗವಹಿಸುವ ಹಕ್ಕುಗಳನ್ನು ಎತ್ತಿ ಹಿಡಿಯಲು ಬದ್ಧವಾಗಿದೆ. ಮನೆಯಲ್ಲಿ, ಶಾಲೆಯಲ್ಲಿ ಸ್ವಲ್ಪ ಬೇಸರವಾದರೂ ಮಕ್ಕಳು ಬಸ್ ಹತ್ತಿ ಬೇರೆ ಊರಿಗೆ ಹೋಗಿಬಿಡಬಹುದು. ಹಲವು ರೀತಿಯ ಅಪಾಯಗಳಿಗೆ ಸಿಲುಕಬಹುದು ಮಕ್ಕಳ ಉಚಿತ ಪ್ರಯಾಣವನ್ನು ಕಡ್ಡಾಯವಾಗಿ ಮೇಲ್ವಿಚಾರಣೆ ಮಾಡಬೇಕು' ಎಂದಿದ್ದಾರೆ.

'ಪೋಷಕರ ಅನುಮತಿ ಪತ್ರದಲ್ಲಿ ಪೋಷಕರ ಅನುಮತಿಯೊಂದಿಗೆ ಅವರ ಸಹಿ ಮತ್ತು ಮೊಬೈಲ್ ಸಂಖ್ಯೆಗಳು ಕಡ್ಡಾಯವಾಗಿ ಇರಬೇಕು. ಬಸ್ ನಿರ್ವಾಹಕರು ಪೋಷಕರ ಅನುಮತಿ ಪತ್ರವನ್ನು ಕಡ್ಡಾಯವಾಗಿ ಮಕ್ಕಳ ಹಿತದೃಷ್ಟಿಯಿಂದ ಪರಿಶೀಲಿಸಬೇಕು. ಪೋಷಕರ ಅನುಮತಿ ಪತ್ರ ಇಲ್ಲದ ಮಕ್ಕಳು ಪ್ರಯಾಣಕ್ಕೆ ಬಂದರೆ ನಿರ್ವಾಹಕರು ಚೈಲ್ಡ್ ಹೆಲ್ಪ್ ಲೈನ್ 1098 ಅಥವಾ 112 ಸಂಪರ್ಕಿಸಬೇಕು' ಎಂದು ತಿಳಿಸಿದ್ದಾರೆ.

## ಡ್ರಗ್ಸ್: ಆರೋಪಿ ಸೆರೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಎಂಡಿಎಂಎ ಡ್ರಗ್ಸ್ ಮಾರುತ್ತಿದ್ದ ಆರೋಪಿ ಇಮ್ರಾನ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಇಮ್ರಾನ್ (34), ಕೊಟ್ಟಿಗೆಪಾಳ್ಯದ ಬಳಿ ಜೂನ್ 19ರಂದು ಡ್ರಗ್ಸ್ ಮಾರುತ್ತಿದ್ದ. ಮಾಹಿತಿ ತಿಳಿದು ಆರೋಪಿಯನ್ನು ಬಂಧಿಸಲಾಗಿದೆ. ಈತನಿಂದ ₹2.97 ಲಕ್ಷ ಮೌಲ್ಯದ 85 ಗ್ರಾಂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ. ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ, ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳಿಗೆ ಮಾರುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

## ಎಂಟು ಮಂದಿ ಬಂಧನ 22 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದ ಪ್ರಕರಣದಲ್ಲಿ 8 ಮಂದಿಯನ್ನು ಕಾಟನ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದ್ವಿಚಕ್ರ ವಾಹನ ಕಳ್ಳತನ ಸಂಬಂಧ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳಾದ ಪ್ರಭಾಕರ್, ಶಹಿಂಶಾ, ರಾಚಯ್ಯ, ತೌಫಿಕ್, ಮತಿನ್ ಸೇರಿ ಎಂಟು ಮಂದಿಯನ್ನು ಬಂಧಿಸಲಾಗಿದೆ. ಇವರಿಂದ ₹ 20 ಲಕ್ಷ ಮೌಲ್ಯದ 22 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದಲ್ಲಿ ಸಂಚರಿಸಿ ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿಗಳು, ಅವುಗಳನ್ನು ಮಾರಿ ಹಣ ಸಂಪಾದಿಸುತ್ತಿದ್ದರು. ಚಂದ್ರಾಲೇಔಟ್, ಜ್ಞಾನಭಾರತಿ, ಅಮೃತಹಳ್ಳಿ, ಹಲಸೂರು, ಸಂಪಂಗಿರಾಮನಗರ, ಸಿಟಿ ಮಾರ್ಕೆಟ್ ಹಾಗೂ ಹನುಮಂತನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ವಾಹನ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

## ಅನಾಥ ಮಕ್ಕಳಿಗೆ ಶೇ 1 ಮೀಸಲಾತಿ: ಸರ್ಕಾರ ಒಪ್ಪಿಗೆ



ಉಡುಪಿ: ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರಕ್ಕೆ 34 ವರದಿಗಳನ್ನು ಸಲ್ಲಿಸಲಾಗಿದ್ದು ಅನಾಥ ಮಕ್ಕಳಿಗೆ ಮೀಸಲಾತಿ ಕಲ್ಪಿಸಬೇಕು ಎಂಬ ಪ್ರಮುಖ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ತಿಳಿಸಿದರು.

ಮಂಗಳವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಾತನಾಡಿದ ಅವರು, ವರದಿ ಅನುಷ್ಠಾನಗೊಂಡರೆ ತಂದೆತಾಯಿ ಇಲ್ಲದ ಅನಾಥ ಮಕ್ಕಳು ಅತಿ ಹಿಂದುಳಿದ ವರ್ಗಗಳ ಅಡಿಯಲ್ಲಿ ಶೇ 1ರಷ್ಟು ಮೀಸಲಾತಿ ಪಡೆಯಲಿದ್ದಾರೆ. ತಂದೆ ತಾಯಿಯ ಜಾತಿ ತಿಳಿದಿದ್ದರೆ ಅವರ ಜಾತಿಯಡಿಯೇ ಮೀಸಲಾತಿ ದೊರೆಯಲಿದೆ. ಇಲ್ಲವಾದರೆ ಅತಿ ಹಿಂದುಳಿದ ವರ್ಗಗಳ ಅಡಿ ಮೀಸಲಾತಿ ಸಿಗಲಿದೆ ಎಂದರು.

## ವಿಲೀನ ನೇಮಕ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸೇವೆಗೆ ವಿಲೀನಗೊಂಡಿದ್ದ ಇಬ್ಬರು ಉಪನ್ಯಾಸಕರ ನೇಮಕಾತಿ ಆದೇಶಗಳನ್ನು ರದ್ದುಪಡಿಸಿರುವ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) 15 ದಿನದೊಳಗೆ ಅವರು ಮಾತೃ ಇಲಾಖೆಗೆ ಹಿಂದಿರುಗುವಂತೆ ನಿರ್ದೇಶಿಸಿದೆ.

ಈ ಕುರಿತಂತೆ ಸಿ.ಶಿವಕುಮಾರ್ ಮತ್ತು ಬಿ.ಎಂ.ಪ್ರಕಾಶ್ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಕೆಎಟಿ ನ್ಯಾಯಿಕ ಸದಸ್ಯ ನಾರಾಯಣ ಮತ್ತು ಆಡಳಿತಾತ್ಮಕ ಸದಸ್ಯ ಎನ್. ಶಿವಶೈಲಂ ಅವರಿದ್ದ ವಿಭಾಗೀಯ ಪೀಠವು, 'ಆಡಳಿತ ಇಲಾಖೆಯ ಸೇವೆಗಳಿಗೆ ಉಪನ್ಯಾಸಕರು ಮತ್ತು ಶಿಕ್ಷಕರು ವಿಲೀನಗೊಳ್ಳುವ ಪದ್ಧತಿಯಲ್ಲಿ ನಿಯಮಬಾಹಿರ ಪ್ರಕ್ರಿಯೆ ನಡೆದಿದೆ' ಎಂಬ ಅರ್ಜಿದಾರರ ವಾದವನ್ನು ಪುರಸ್ಕರಿಸಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಉಪನಿರ್ದೇಶಕ ಹುದ್ದೆ ಅಲಂಕರಿಸಿದ್ದ ಕೆ.ಆರ್. ರಾಜ್‌ಕುಮಾರ್ ಮತ್ತು ಎಂ.ಎಚ್. ಸುರೇಶ್ ರೆಡ್ಡಿ ಅವರನ್ನು ಮಾತೃ ಇಲಾಖೆಯಾದ ಶಿಕ್ಷಣ ಇಲಾಖೆಗೆ ವಾಪಸ್ ಕಳುಹಿಸುವಂತೆ ನಿರ್ದೇಶಿಸಿದೆ.

**ಪ್ರಕರಣವೇನು?:** ಉಪನ್ಯಾಸಕರಾಗಿದ್ದ ಕೆ.ಆರ್. ರಾಜ್‌ಕುಮಾರ್ ಅವರನ್ನು 2015ರಲ್ಲಿ ಮತ್ತು ಎಂ.ಎಚ್. ಸುರೇಶ್ ರೆಡ್ಡಿ ಅವರನ್ನು 2016ರಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಕಾಯಂ ಆಗಿ ವರ್ಗಾವಣೆ ಮಾಡಲಾಗಿತ್ತು. ಇವರಿಬ್ಬರ ಸೇವೆಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ವಿಲೀನಗೊಳಿಸಲಾಗಿತ್ತು. ಮತ್ತು ಕೆ.ಆರ್.ರಾಜ್‌ಕುಮಾರ್ ಮತ್ತು ಎಂ.ಎಚ್.ಸುರೇಶ್ ರೆಡ್ಡಿ ಅವರಿಗೆ 2022ರ ಜನವರಿ 31ರ ಆದೇಶದಲ್ಲಿ ಉಪನಿರ್ದೇಶಕ ವೃಂದಕ್ಕೆ ಬಡ್ತಿ ನೀಡಲಾಗಿತ್ತು.

ಬಡ್ತಿ ನೀಡಲಾದ ಹಂತದಲ್ಲಿ, 'ಇವರಿಬ್ಬರ ನೇಮಕಾತಿಯೇ ಸರಿ ಇಲ್ಲ ಮತ್ತು ಬಡ್ತಿ ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ' ಎಂದು ಆಕ್ಷೇಪಿಸಿ ಸಿ. ಶಿವಕುಮಾರ್ ಮತ್ತು ಬಿ.ಎಂ. ಪ್ರಕಾಶ್ ಕೆಎಟಿ ಮೆಟ್ಟಿಲೇರಿದ್ದರು.

'ಆಡಳಿತ ಇಲಾಖೆಯಲ್ಲಿ ಉಪನ್ಯಾಸಕರ ವಿಲೀನವು ಕಾನೂನುಬಾಹಿರವಾಗಿದೆ. ಅದೂ ಅಲ್ಲದೆ ಗ್ರೂಪ್ ಬಿ ವೃಂದದಲ್ಲಿದ್ದ ಈ ಉಪನ್ಯಾಸಕರನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಗ್ರೂಪ್ ಎ ವೃಂದದ ಸಹಾಯಕ ನಿರ್ದೇಶಕ ವೃಂದದ ಹುದ್ದೆಗೆ ವಿಲೀನಗೊಳಿಸಿರುವುದು ಕಾನೂನು ಸಮ್ಮತವಲ್ಲ' ಎಂದು ಅವರು ಪ್ರತಿಪಾದಿಸಿದ್ದರು.

'ಸಹಾಯಕ ನಿರ್ದೇಶಕ ಹುದ್ದೆಯಿಂದ ಉಪನಿರ್ದೇಶಕ ಹುದ್ದೆ ಬಡ್ತಿಗೆ ಅರ್ಹತಾದಾಯಕ 3 ವರ್ಷಗಳನ್ನು ಪೂರೈಸಿರುವ ನಮಗೇ ಬಡ್ತಿ ನೀಡಬೇಕು. ನಿಯಮಬಾಹಿರವಾಗಿ ನೇಮಕವಾಗಿರುವ ಇವರಿಬ್ಬರ ಆದೇಶಗಳನ್ನು ರದ್ದು ಮಾಡಬೇಕು' ಎಂದು ಕೋರಿದ್ದರು.

ವಿಚಾರಣೆ ನಡೆಸಿದ ಪೀಠವು, 'ನೇಮಕಾತಿ ಆದೇಶ ಕಾನೂನು ಬಾಹಿರವಾಗಿದೆ' ಎಂಬ ಅಂಶವನ್ನು ಪುರಸ್ಕರಿಸಿದೆ ಹಾಗೂ ಬಡ್ತಿ ನೀಡಿರುವುದನ್ನು ಪ್ರಶ್ನಿಸಿ, 'ನಮಗೇ ಬಡ್ತಿ ನೀಡಬೇಕು' ಎಂಬ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದೆ. ಅರ್ಜಿದಾರರ ಪರವಾಗಿ ವಕೀಲ ವಿಜಯಕುಮಾರ್ ಮತ್ತು ಸರ್ಕಾರದ ಪರವಾಗಿ ಡಿ.ಸಿ.ಪರಮೇಶ್ವರಯ್ಯ ವಾದ ಮಂಡಿಸಿದ್ದರು.

## ಪಿಪಿ ಹುದ್ದೆ ನೇಮಕಾತಿ ಶೀಘ್ರವೇ ಪೂರ್ಣ: ಹೈಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದಲ್ಲಿ ಖಾಲಿ ಇರುವ ಪಬ್ಲಿಕ್ ಪ್ರಾಸಿಕ್ಯೂಟರ್ (ಪಿಪಿ) ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ 109 ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಮುಗಿದಿದ್ದು ಶೀಘ್ರವೇ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ರಾಜ್ಯದ ವಿವಿಧ ವಿಚಾರಣಾ ನ್ಯಾಯಾಲಯಗಳಲ್ಲಿ ಪಿಪಿ ಹುದ್ದೆಗಳು ಸಾಕಷ್ಟು ಖಾಲಿ ಇರುವ ಬಗ್ಗೆ ಹಲವು ಜಿಲ್ಲಾ ನ್ಯಾಯಾಧೀಶರು ಒದಗಿಸಿದ್ದ ಮಾಹಿತಿಯನ್ನು ಆಧರಿಸಿ 2019ರಲ್ಲಿ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ಎಸ್. ಎಸ್. ಮಹೇಂದ್ರ, 'ಈಗಾಗಲೇ 104 ಪಿಪಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಅಂತೆಯೇ, ಈಗಿರುವ ಪಿಪಿಗಳಿಗೆ ಹಿರಿಯ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾಗಿ ಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಪಿಪಿಗಳ ನೇಮಕಾತಿಗೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ಬಹುತೇಕ ಆದೇಶಗಳನ್ನು ಸರ್ಕಾರ ಪಾಲಿಸಿದೆ. ಸಣ್ಣಪುಟ್ಟ ಅನುಪಾಲನೆಗಳು ಬಾಕಿ ಇದ್ದು, ಅವುಗಳನ್ನು ಮೂರು ವಾರಗಳಲ್ಲಿ ಪೂರ್ಣಗೊಳಿಸಬೇಕು' ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

ಪ್ರಮಾಣ ಪತ್ರ: ರಾಜ್ಯ ಸರ್ಕಾರವು 2023ರ ಜನವರಿ 27ರಂದು ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ 'ಪಿಪಿಗಳ ನೇಮಕಾತಿಗೆ 2022ರ ಮೇ-ಜೂನ್‌ನಲ್ಲಿ ಪರೀಕ್ಷೆ ನಡೆಸಲಾಗಿತ್ತು. ಉತ್ತೀರ್ಣರಾದ 161 ಅಭ್ಯರ್ಥಿಗಳ ಪಟ್ಟಿಯನ್ನು 2022ರ ಅಕ್ಟೋಬರ್ 15ರಂದು ಪ್ರಕಟಿಸಲಾಗಿತ್ತು. ಇದರಲ್ಲಿ 158 ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನ ನಡೆಸಿ 143 ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿತ್ತು. ಇದರಲ್ಲಿ ಐವರು ಅಭ್ಯರ್ಥಿಗಳು ಹೈದರಾಬಾದ್ ಕರ್ನಾಟಕ ಕೋಟಾದವರಿದ್ದರು. ಏತನ್ಮಧ್ಯೆ, ಅನುತ್ತೀರ್ಣಗೊಂಡ ಕೆಲ ಅಭ್ಯರ್ಥಿಗಳು ಕೆಎಟಿ ಮೆಟ್ಟಿಲೇರಿದ್ದರು. ಈ ಅರ್ಜಿಗಳನ್ನು ಕೆಎಟಿ ವಜಾಗೊಳಿಸಿದೆ. ಹಾಗಾಗಿ, ನೇಮಕಾತಿ ಪ್ರಕ್ರಿಯೆಗೆ ಪುನಃ ಚಾಲನೆ ನೀಡಲಾಗಿದೆ' ಎಂದು ತಿಳಿಸಿತ್ತು.

120 ನುರಿತ ವೈದ್ಯರು, ವೈದ್ಯಕೀಯ ಸಿಬ್ಬಂದಿ ಭಾಗಿ

## ಜಯದೇವ: 225 ರೋಗಿಗಳಿಗೆ ಸ್ಟೆಂಟ್ ಅಳವಡಿಕೆ

ಪ್ರಜಾವಾಣಿ ವಾರ್ತೆ



ಆಂಜಿಯೋಪ್ಲಾಸ್ಟಿ ಚಿಕಿತ್ಸೆಗೊಳಗಾದ ರೋಗಿಗಳೊಂದಿಗೆ ಡಾ. ಸಿ.ಎನ್.ಮಂಜುನಾಥ್, ಅಮೆರಿಕದ ಹೃದಯತಜ್ಞರಾದ ಡಾ. ಗೋವಿಂದರಾಜು ಸುಬ್ರಮಣಿ, ಡಾ. ದೇವರಾಜ್ ಹಾಗೂ ವೈದ್ಯಕೀಯ ಅಧೀಕ್ಷಕ ಡಾ.ಎಸ್.ಶಂಕರ್ ಇದ್ದಾರೆ.

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹಮ್ಮಿಕೊಂಡಿದ್ದ ಆಂಜಿಯೋಪ್ಲಾಸ್ಟಿ ಕಾರ್ಯಾಗಾರದಲ್ಲಿ 225 ಹೃದ್ರೋಗಿಗಳಿಗೆ ಉಚಿತವಾಗಿ ಸ್ಟೆಂಟ್ ಅಳವಡಿಸಲಾಗಿದೆ.

ಡಾ.ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್ ಹಾಗೂ ಅಮೆರಿಕದ ಮೆಡ್‌ಟ್ರಾನಿಕ್ಸ್, ವಿಸ್ಕಿನ್‌ಸನ್ ಸಂಸ್ಥೆಗಳ ಸಹಯೋಗದಲ್ಲಿ ಈ ಕಾರ್ಯಾಗಾರವು ಬೆಂಗಳೂರು, ಮೈಸೂರು ಹಾಗೂ ಕಲಬುರಗಿಯಲ್ಲಿ ನಡೆದಿದೆ. ರೈತರು, ದಿನಗೂಲಿ ನೌಕರರು, ಆಟೋ ರಿಕ್ಷಾ ಚಾಲಕರು, ಬೀದಿ ಬದಿ ಕಾರ್ಮಿಕರು ಹಾಗೂ ಹಿರಿಯ ನಾಗರಿಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ರಾಜ್ಯದ ಹೃದ್ರೋಗಿಗಳ ಜತೆಗೆಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ತಮಿಳುನಾಡು, ತೆಲಂಗಾಣದ ರೋಗಿಗಳೂ ಕಾರ್ಯಾಗಾರದಲ್ಲಿ ಚಿಕಿತ್ಸೆಗೆ ಒಳಗಾಗಿದ್ದಾರೆ.

'ಈ ಅಸಾಧಾರಣ ಕಾರ್ಯಾಗಾರವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ 17 ಕ್ಯಾತ್‌ಲ್ಯಾಬ್ ನೆರವಾಗಿವೆ. 120 ನುರಿತ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಶ್ರಮಿಸಿದ್ದಾರೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

'ಹೃದಯಾಘಾತಕ್ಕೆ ಸಂಬಂಧಿಸಿದ ಕಾಯಿಲೆಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನರ ಆತಂಕಕ್ಕೆ ಕಾರಣವಾಗಿವೆ. ಈ ಕಾರ್ಯಾಗಾರದಲ್ಲಿ ಭಾಗವಹಿಸಿದವರಲ್ಲಿ 31 ವರ್ಷದ ದಿನಗೂಲಿ ಕೆಲಸಗಾರ ಅತ್ಯಂತ ಕಿರಿಯ ವ್ಯಕ್ತಿಯಾದರೆ, 85 ವರ್ಷದವರು ಅತ್ಯಂತ ಹಿರಿಯರಾಗಿದ್ದಾರೆ. ಶೇ 25 ರಷ್ಟು ರೋಗಿಗಳು 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ' ಎಂದು ಹೇಳಿದರು.

ಆಂಜಿಯೋಪ್ಲಾಸ್ಟಿ ಚಿಕಿತ್ಸೆಗೆ ಒಳಗಾದ ರೋಗಿಗಳೊಡನೆ ಸಮಾಲೋಚನೆ ನಡೆಸಿದ ಡಾ.ಸಿ.ಎನ್. ಮಂಜುನಾಥ್, 'ರಕ್ತ ತೆಳುಗೊಳಿಸುವ ಮಾತ್ರೆಗಳನ್ನು ನಿಲ್ಲಿಸಬಾರದು. ಒಂದು ವೇಳೆ ನಿಲ್ಲಿಸಿದಲ್ಲಿ ಮತ್ತೆ ಹೃದಯಾಘಾತವಾಗುವ ಸಾಧ್ಯತೆ ಇರುತ್ತದೆ. ಅಲ್ಲದೇ, ರಕ್ತದೊತ್ತಡ ಮತ್ತು ಸಕ್ಕರೆ ಅಂಶದಲ್ಲಿ ನಿಯಂತ್ರಣ ಸಾಧಿಸಬೇಕು. ತರಕಾರಿ ಮತ್ತು ಹಣ್ಣುಗಳನ್ನು ಸೇವಿಸಿ, ದಿನನಿತ್ಯ ವ್ಯಾಯಾಮ ಮಾಡಬೇಕು' ಎಂದು ಸಲಹೆ ನೀಡಿದರು.

### ಪುರುಷರೇ ಅಧಿಕ

'ಆಂಜಿಯೋಪ್ಲಾಸ್ಟಿ ಕಾರ್ಯಾಗಾರದಲ್ಲಿ ಪಾಲ್ಗೊಂಡವರಲ್ಲಿ ಶೇ 78 ರಷ್ಟು ರೋಗಿಗಳು ಪುರುಷರಾಗಿದ್ದಾರೆ. ಚಿಕಿತ್ಸೆ ಪಡೆದ ರೋಗಿಗಳಲ್ಲಿ ಶೇ 50ರಷ್ಟು ಮಂದಿಯಲ್ಲಿ ಮಧುಮೇಹ, ಶೇ 53ರಷ್ಟು ರೋಗಿಗಳಲ್ಲಿ ಅಧಿಕ ರಕ್ತದೊತ್ತಡ ಪತ್ತೆಯಾಗಿದೆ. ಶೇ 36ರಷ್ಟು ರೋಗಿಗಳು ಧೂಮಪಾನಿಗಳಾಗಿದ್ದರು' ಎಂದು ಡಾ.ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

ಪೆರಿಫೆರಲ್ ವರ್ತುಲ ರಸ್ತೆ ಯೋಜನೆ: ಕೇಂದ್ರ ಹಣಕಾಸು ಸಚಿವರಿಗೆ ಕೃಷ್ಣ ಬೈರೇಗೌಡ ಮನವಿ

# ₹6 ಸಾವಿರ ಕೋಟಿ ಅನುದಾನಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಸರ್ಕಾರದ ವಿಶೇಷ ಅನುದಾನದಡಿ ಬೆಂಗಳೂರಿನ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ₹6 ಸಾವಿರ ಕೋಟಿ ಅನುದಾನ ನೀಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಜಿಎಸ್‌ಟಿ ಕೌನ್ಸಿಲ್‌ನ ಕರ್ನಾಟಕದ ಪ್ರತಿನಿಧಿಯೂ ಆಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಂಗಳವಾರ ಮನವಿ ಮಾಡಿದರು.

'15ನೇ ಹಣಕಾಸು ಆಯೋಗದ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಜಿಎಸ್‌ಟಿ ಬಾಕಿ ಮೊತ್ತ ಸಹ ಬರಬೇಕಿದೆ. ವಿಶೇಷ ಅನುದಾನದ ಬಿಡುಗಡೆಯಲ್ಲಿ ಕೂಡಾ ವಿಳಂಬವಾಗಿದೆ. ಈ ಬಗ್ಗೆ ಕೇಂದ್ರ ಸಚಿವರ ಗಮನ ಸೆಳೆಯಲಾಗಿದೆ. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.



ನಿರ್ಮಲಾ ಸೀತಾರಾಮನ್ ಜತೆಗೆ ಕೃಷ್ಣ ಬೈರೇಗೌಡ ಚರ್ಚಿಸಿದರು

'ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ವಿಪರೀತವಾಗಿದೆ. ವರ್ತುಲ ರಸ್ತೆ ನಿರ್ಮಾಣದಿಂದ ಸಂಚಾರ ದಟ್ಟಣೆ ಕಡಿಮೆಯಾಗಲಿದೆ. ₹21 ಸಾವಿರ ಕೋಟಿ ಮೊತ್ತದ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ₹6 ಸಾವಿರ ಕೋಟಿ ಅನುದಾನ ಕೇಳಲಾಗಿತ್ತು. ಭೂಸ್ವಾಧೀನಕ್ಕೆ ಸಹ ದೊಡ್ಡ ಮೊತ್ತ ಬೇಕಿದೆ. ಈ ವಿಷಯದ ಕುರಿತು ಕೇಂದ್ರ ಸರ್ಕಾರದ ನಿಲುವು ಬೇರೆ ರೀತಿ ಇದೆ ಎಂದು ಸಚಿವರು ಹೇಳಿದ್ದಾರೆ. ಅವರಿಗೆ ಯೋಜನೆಯ ಅಗತ್ಯದ ಕುರಿತು ಮನವರಿಕೆ ಮಾಡಿಕೊಡಲಾಗಿದೆ. ಅನುದಾನ ಬಿಡುಗಡೆಯಾಗುವ ವಿಶ್ವಾಸ ಇದೆ' ಎಂದರು.

ಸುಮಾರು 74 ಕಿ.ಮೀ ಉದ್ದದ ಹಾಗೂ ಎಂಟು ಪಥಗಳ ಪಿಆರ್‌ಆರ್ ಸರ್ವಿಸ್ ರಸ್ತೆಗಳನ್ನೂ ಒಳಗೊಳ್ಳಲಿದೆ. 100 ಮೀ ಅಗಲದ ರಸ್ತೆ ಹಾಗೂ ಕ್ಲೊವರ್ ಎಲೆಗಳ ಮಾದರಿಯ ಜಂಕ್ಷನ್‌ಗಳು, ಸೇತುವೆಗಳು, ಮೇಲ್ಸೇತುವೆಗಳು, ರೈಲ್ವೆ ಕೆಳ ಸೇತುವೆಗಳು, ರೈಲ್ವೆ ಮೇಲ್ಸೇತುವೆಗಳು ಈ ಯೋಜನೆ ಅಡಿಯಲ್ಲಿ ನಿರ್ಮಾಣವಾಗಲಿವೆ.

ನಗರದ ಹೊರವಲಯದಲ್ಲಿ ಪಿಆರ್‌ಆರ್ ನಿರ್ಮಿಸುವ ಪ್ರಸ್ತಾವನೆಯನ್ನು ಬಿಡಿಎ 2006ರ ನ.27ರಂದು ಸಲ್ಲಿಸಿತ್ತು. ಈ ಯೋಜನೆಗೆ ಸಂಬಂಧಿಸಿ ಅನೇಕ ವ್ಯಾಜ್ಯಗಳಿದ್ದವು. 2018ರ ನ.24ರಲ್ಲಿ ರಾಜ್ಯ ಸರ್ಕಾರವು ₹ 5,616 ಕೋಟಿ ವೆಚ್ಚದ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡಿತು. ಅದರಲ್ಲಿ ಶೇ 16ರಷ್ಟು ವೆಚ್ಚವನ್ನು (₹ 901.72 ಕೋಟಿ) ರಾಜ್ಯ ಸರ್ಕಾರವು ಭರಿಸಲಿದೆ. ಇನ್ನುಳಿದ ಶೇ 84ರಷ್ಟು ವೆಚ್ಚವನ್ನು ಭರಿಸಲು (₹4,714.69ಕೋಟಿ) ಜಪಾನ್‌ಅಂತರ ರಾಷ್ಟ್ರೀಯ ಸಹಕಾರ ಏಜೆನ್ಸಿಯಿಂದ (ಜೈಕಾ) ಮೂರು ಹಂತಗಳಲ್ಲಿ ಸಾಲ ಪಡೆಯಲಾಗುತ್ತದೆ ಎಂದು ಹೇಳಲಾಗಿತ್ತು.

ಬಳಿಕ ಯೋಜನಾ ಮೊತ್ತ ₹21 ಸಾವಿರ ಕೋಟಿಗೆ ಏರಿತ್ತು. ಮತ್ತೆ ಯೋಜನೆಯ ಸ್ವರೂಪ ಬದಲಾಗಿತ್ತು. ಯೋಜನೆಗೆ ₹6 ಸಾವಿರ ಕೋಟಿ ವಿಶೇಷ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಅನುದಾನ ಬಿಡುಗಡೆಗೆ ಕೇಂದ್ರ ಹಿಂದೇಟು ಹಾಕಿತ್ತು. ಈ ಯೋಜನೆಗೆ 2,560 ಎಕರೆಗಳಷ್ಟು ಜಮೀನನ್ನು ಸ್ವಾದೀನಪಡಿಸಿಕೊಳ್ಳಬೇಕಾಗುತ್ತದೆ.

### ಸುಪ್ರೀಂ ಕೋರ್ಟ್ ಅಸಮಾಧಾನ

ಪಿಆರ್‌ಆರ್ ಯೋಜನೆ ಅನುಷ್ಠಾನದ ವಿಚಾರದಲ್ಲಿ ಅನಗತ್ಯ ವಿಳಂಬವಾಗುತ್ತಿರುವ ಕುರಿತು ಸುಪ್ರೀಂ ಕೋರ್ಟ್ ಕೂಡಾ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಯೋಜನೆಯ ಅನುಷ್ಠಾನದ ವಸ್ತುಸ್ಥಿತಿಯ ವರದಿಗೆ ಪ್ರತಿಕ್ರಿಯಿಸಿದ್ದ ಸುಪ್ರೀಂ ಕೋರ್ಟ್ ಪೀಠ, 'ಪಿಆರ್‌ಆರ್ ಯೋಜನೆ ಕುರಿತು 2006ರಲ್ಲೇ ಬಿಡಿಎ ಪ್ರಸ್ತಾವನೆ ಸಲ್ಲಿಸಿದ್ದರೂ, ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವುದನ್ನು ಹೊರತಾಗಿ ಬೇರೆ ಯಾವುದೇ ಪ್ರಗತಿ ಆಗಿಲ್ಲ ಎಂಬುದು ಸ್ಪಷ್ಟ. ಮೂರು ಎಕರೆ 21 ಗುಂಟೆ ಜಮೀನನ್ನು ಮಾತ್ರ ಸ್ವಾಧೀನಪಡಿಸಲಾಗಿದೆ' ಎಂದು 2021ರ ಅಕ್ಟೋಬರ್ 26 ರಂದು ಅಸಮಾಧಾನ ವ್ಯಕ್ತಪಡಿಸಿತ್ತು.





## ಇಮ್ರಾನ್ ವಿರುದ್ಧ ಬಂಧನ ವಾರಂಟ್

**ಲಾಹೋರ್ (ಪಿಟಿಐ):** ಲಾಹೋರ್‌ನ ಭಯೋತ್ಪಾದನೆ ವಿರೋಧಿ ನ್ಯಾಯಾಲಯವು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಸೇರಿದಂತೆ ಅವರ ಪಕ್ಷದ ಆರು ನಾಯಕರ ವಿರುದ್ಧ ಮಂಗಳವಾರ ಜಾಮೀನುರಹಿತ ಬಂಧನದ ವಾರಂಟ್ ಹೊರಡಿಸಿದೆ.

ಮೇ 9ರಂದು ಭ್ರಷ್ಟಾಚಾರ ಆರೋಪ ಸಂಬಂಧ ಇಮ್ರಾನ್ ಖಾನ್ ಅವರನ್ನು ಬಂಧಿಸಲಾಗಿತ್ತು. ಇದನ್ನು ಖಂಡಿಸಿ ಪಾಕಿಸ್ತಾನ ತೆಹ್ರೀಕ್–ಇ–ಇನ್ಸಾಫ್(ಪಿಟಿಐ) ಪಕ್ಷದ ಕಾರ್ಯಕರ್ತರು ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಈ ವೇಳೆ ಆಡಳಿತರೂಢ ಪಾಕಿಸ್ತಾನ್ ಮುಸ್ಲಿಂ ಲೀಗ್(ಎನ್) ಪಕ್ಷದ ಕಚೇರಿ ಮೇಲೆ ದಾಳಿ ನಡೆಸಿ ಬೆಂಕಿ ಇಟ್ಟಿದ್ದರು. ಈ ಸಂಬಂಧ ಇಮ್ರಾನ್ ಸೇರಿದಂತೆ ಹಲವರ ವಿರುದ್ಧ ಪೊಲೀಸರು ಎರಡು ಪ್ರಕರಣ ದಾಖಲಿಸಿದ್ದರು.




ಐಎಎಸ್ ಬಾಬಾ ಸಂಸ್ಥೆಯಿಂದ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳನ್ನು ಸನ್ಮಾನಿಸಲಾಯಿತು

# ಐಎಎಸ್ ಸಾಧಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2022ರ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳನ್ನು ಐಎಎಸ್ ಬಾಬಾ ಸಂಸ್ಥೆಯಿಂದ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಉತ್ತಮ ಶ್ರೇಯಾಂಕಗಳೊಂದಿಗೆ ಉತ್ತೀರ್ಣರಾದ ಸಂಸ್ಥೆಯ 240ಕ್ಕೂ ಹೆಚ್ಚಿನ ಅಭ್ಯರ್ಥಿಗಳನ್ನು ಗೌರವಿಸಲಾಯಿತು.

ಸಂಸ್ಥೆಯ ಸ್ಥಾಪಕ ನಿರ್ದೇಶಕ ಎಸ್. ಮೋಹನ್ ಕುಮಾರ್ ಮಾತನಾಡಿ, 'ಐಎಎಸ್ ಉತ್ತೀರ್ಣರಾದವರು ತಾವು ಯಾರಿಗೂ ಅಡಿಯಾಳಾಗದೇ ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು. ದೇಶವು ತಮ್ಮಿಂದ ಬಹಳಷ್ಟು ನಿರೀಕ್ಷೆ ಅಪೇಕ್ಷಿಸುತ್ತಿದೆ. ಸಾರ್ವಜನಿಕ ಸೇವೆಯಲ್ಲಿ ಅತ್ಯಾಕರ್ಷಕ ಮತ್ತು ತೃಪ್ತಿಕರ ವೃತ್ತಿ ನಿಮಗಾಗಿ ಕಾಯುತ್ತಿದೆ' ಎಂದು ಹೇಳಿದರು.

'ನಿಮ್ಮ ಪ್ರತಿಯೊಂದು ಒಳ್ಳೆಯ ಕೆಲಸವು ನಮಗೆ ಸ್ಫೂರ್ತಿ ನೀಡಬೇಕು. ಇನ್ನಷ್ಟು ಒಳ್ಳೆಯ ಅಧಿಕಾರಿಗಳು ಬರಲು ತಾವು ಮಾರ್ಗದರ್ಶನ ನೀಡಬೇಕು' ಎಂದು ಸಲಹೆ ನೀಡಿದರು.

ಸಂಸ್ಥೆಯ ಕಠಿಣ ಪರಿಶ್ರಮದಿಂದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಪ್ರತಿ ವರ್ಷವೂ ಒಳ್ಳೆಯ ಫಲಿತಾಂಶ ಲಭಿಸುತ್ತಿದ್ದು, ಈ ಸಂಸ್ಥೆಯು ಕನ್ನಡಿಗರಿಂದ ಸ್ಥಾಪಿತವಾದ ಕನ್ನಡಿಗರ ಸಂಸ್ಥೆಯಾಗಿದೆ ಎಂದರು.

ಮೀನಾಕ್ಷಿ ಸುಂದರಂ, ಜಲಜ್ ಶ್ರೀವಾತ್ಸವ್, ಎನ್.ಸಿ.ಮುನಿಯಪ್ಪ, ಕೃಪಾನಿಧಿ ಉಪಸ್ಥಿತರಿದ್ದರು.

ಹುಲಿ ಯೋಜನೆ: ಹಣ ಬಿಡುಗಡೆಗೆ ಕೇಂದ್ರ ಸಚಿವರಿಗೆ ಖಂಡ್ರೆ ಮನವಿ

# ₹30 ಕೋಟಿ ಅನುದಾನ ಬಾಕಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಪ್ರಾಯೋಜಿತ ಹುಲಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ 2022-23ನೇ ಸಾಲಿನಲ್ಲಿ ಮಂಜೂರಾದ ₹60 ಕೋಟಿ ಪೈಕಿ ₹30 ಕೋಟಿ ಬಾಕಿ ಬರಬೇಕಿದ್ದು, ಕೂಡಲೇ ಹಣ ಬಿಡುಗಡೆ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಭೂಪೇಂದರ್ ಯಾದವ್ ಅವರಿಗೆ ಮನವಿ ಮಾಡಿದರು.

ದೆಹಲಿಯಲ್ಲಿ ಮಂಗಳವಾರ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಖಂಡ್ರೆ, 'ಹುಲಿ ಯೋಜನೆಯಡಿ ಕಾಳಿ, ಭದ್ರಾ, ನಾಗರಹೊಳೆ, ಬಂಡಿಪುರ ಮತ್ತು ಬಿಳಿಗಿರಿ ರಂಗನ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ₹61 ಕೋಟಿ ಸೇರಿ ಒಟ್ಟಾರೆ ₹91 ಕೋಟಿ ಹಣ ಬಿಡುಗಡೆ ಮಾಡುವಂತೆ ಕೋರಿದ್ದು, ಇದಕ್ಕೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು.



ಭೂಪೇಂದರ್ ಯಾದವ್ ಅವರಿಗೆ ಈಶ್ವರ ಖಂಡ್ರೆ ಮನವಿ ಸಲ್ಲಿಸಿದರು

'ಅರಣ್ಯ ರಕ್ಷಣೆ ಮತ್ತು ವಿಸ್ತರಣೆಗಾಗಿ ಕಾಂಪಾ ನಿಧಿಯಡಿ 2023-24ರ ಸಾಲಿನಲ್ಲಿ ರಾಜ್ಯದಿಂದ ₹362 ಕೋಟಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಪೈಕಿ ₹140 ಕೋಟಿಗೆ ಮಾತ್ರ ಮಂಜೂರಾತಿ ನೀಡಲಾಗಿದೆ. ಉಳಿದ ₹222 ಕೋಟಿ ಬಾಕಿ ನಿಧಿಯ ಮಂಜೂರಾತಿಗೂ ಮನವಿ ಮಾಡಲಾಗಿದ್ದು, ಇದಕ್ಕೆ ಅಗತ್ಯವಾದ ಎಲ್ಲ ನಿಬಂಧನೆಗಳನ್ನೂ ಪೂರೈಸಲಾಗುವುದು' ಎಂದರು.

ಮಾನವ-ಪ್ರಾಣಿ ಸಂಘರ್ಷ ತಡೆಗಟ್ಟಲು ವಿಶೇಷ ಮಾದರಿಯ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುತ್ತಿದೆ. ಇಲ್ಲಿಯವರೆಗೆ 310 ಕಿ.ಮೀ. ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದೆ. ಉಳಿದ 340 ಕಿ.ಮೀ.ಗೆ ಬ್ಯಾರಿಕೇಡ್ ಅಳವಡಿಕೆಗೆ ₹500 ಕೋಟಿ ಬೇಕಾಗಿದೆ. ಇದಕ್ಕೆ ಕಾಂಪಾ ನಿಧಿಯ ಅನುದಾನ ಬಳಸಲು ಉದ್ದೇಶಿಸಲಾಗಿದೆ. ಕೇಂದ್ರದ ಒಪ್ಪಿಗೆ ಕೋರಲಾಗಿದೆ ಎಂದು ಅವರು ತಿಳಿಸಿದರು.

'ನಗರ -ವನ ಯೋಜನೆ ಅಡಿ ರಾಜ್ಯದ 9 ನಗರಗಳಿಗಾಗಿ ₹26.70 ಕೋಟಿಯ ಯೋಜನೆ ಅನುಮೋದನೆ ನೀಡುವಂತೆಯೂ ಕೇಂದ್ರ ಸಚಿವರಿಗೆ ಮನವಿ ಮಾಡಲಾಗಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು.

ಈ ವರ್ಷ 5 ಕೋಟಿ ಗಿಡಗಳನ್ನು ನೆಡಲು ಉದ್ದೇಶಿಸಲಾಗಿದ್ದು, ಮುಂದಿನ ವಾರ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದೂ ಅವರು ಹೇಳಿದರು.

## ಡ್ರಗ್ಸ್ ದಾಳಿ: ಮಹಿಳಾ ಪಿಎಸ್‌ಐಗೆ ಒದ್ದ ಆರೋಪಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡ್ರಗ್ಸ್ ವಿರುದ್ಧ ಕಾರ್ಯಾಚರಣೆಗೆ ಹೋಗಿದ್ದ ಕಬ್ಬನ್ ಪಾರ್ಕ್ ಠಾಣೆಯ ಮಹಿಳಾ ಪಿಎಸ್‌ಐ ಲಕ್ಷ್ಮಿ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಮುಫಾಲಿ ಕಿನಿಮಿ ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಜೂನ್ 18ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಲಕ್ಷ್ಮಿ ಅವರು ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ಮಹಿಳೆ ಮುಫಾಲಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಸಾದ್ವಾನಿ ವೃತ್ತಗಳಲ್ಲಿ ಸುತ್ತಾಡುತ್ತಿರುವ ಕೆಲ ವಿದೇಶಿ ಪ್ರಜೆಗಳು, ಡ್ರಗ್ಸ್ ಸೇವನೆ ಮಾಡಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿರುವ ಬಗ್ಗೆ ಠಾಣೆಗೆ ಮಾಹಿತಿ ಬಂದಿತ್ತು. ಹಿರಿಯ ಅಧಿಕಾರಿಗಳಿಂದ ಅನುಮತಿ ಪಡೆದಿದ್ದ ಪಿಎಸ್‌ಐ ಲಕ್ಷ್ಮಿ ನೇತೃತ್ವದ ತಂಡ, ಕಾರ್ಯಾಚರಣೆಗೆ ತೆರಳಿತ್ತು' ಎಂದು ತಿಳಿಸಿವೆ.

'ಬ್ರಿಗೇಡ್ ರಸ್ತೆಗೆ ಹೊಂದಿಕೊಂಡಿರುವ ಆರ್.ಎಚ್.ಪಿ ರಸ್ತೆ ಬಳಿ ನಿಂತಿದ್ದ ಮಹಿಳೆ ಹಾಗೂ ಮತ್ತೊಬ್ಬ ವಿದೇಶಿ ಪ್ರಜೆ, ಡ್ರಗ್ಸ್ ಸೇವಿಸಿದ್ದ ಬಗ್ಗೆ ತಂಡಕ್ಕೆ ಅನುಮಾನ ಬಂದಿತ್ತು. ಇಬ್ಬರನ್ನೂ ವಿಚಾರಿಸಿದ್ದ ತಂಡ, ಪಾಸ್‌ಪೋರ್ಟ್ ತೋರಿಸುವಂತೆ ಕೋರಿತ್ತು. ಅಷ್ಟಕ್ಕೆ ಕೋಪಗೊಂಡ ಆರೋಪಿ ಮಹಿಳೆ ಮುಫಾಲಿ, 'ಪಾಸ್‌ಪೋರ್ಟ್ ಏಕೆ ತೋರಿಸಬೇಕು' ಎಂದು ಪ್ರಶ್ನಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು' ಎಂದಿವೆ.



**ಅಪಾಯಕಾರಿ ಪ್ರಯಾಣ** ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಶಾಖಾಪುರದ ಶಾಲೆಯ ವಿದ್ಯಾರ್ಥಿಗಳು ಮಂಗಳವಾರ ಜೆಸಿಬಿ ಯಂತ್ರದಲ್ಲಿ ಕುಳಿತು ಶಾಲೆಗೆ ತೆರಳಿದರು

## ಒತ್ತುವರಿ ತೆರವಿಗೆ ಅಡ್ಡಿ: ಮಾಜಿ ಶಾಸಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಮಾಜಿ ಶಾಸಕ ನಂದೀಶ್ ರೆಡ್ಡಿ ಹಾಗೂ ಇತರರ ವಿರುದ್ಧ ಮಹದೇವಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ದೊಡ್ಡನೆಕ್ಕುಂದಿ ವಾರ್ಡ್ ನಂಬರ್ 85ರ ವ್ಯಾಪ್ತಿಯ ಫೆರ್ನಾ ಸಿಟಿಯ ರಾಜಕಾಲುವೆ ಒತ್ತುವರಿ ತೆರವು ಮಾಡಲು ಸೋಮವಾರ ಕಾರ್ಯಾಚರಣೆ ನಡೆದಿತ್ತು. ನಂದೀಶ್ ರೆಡ್ಡಿ ಹಾಗೂ ಇತರರು ಅಧಿಕಾರಿಗಳ ಕೆಲಸಕ್ಕೆ ಅಡ್ಡಿಪಡಿಸಿದ್ದರು. ಬಿಬಿಎಂಪಿ ಹೂಡಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜಿ. ಶ್ರೀನಿವಾಸ್ ಮೂರ್ತಿ ನೀಡಿರುವ ದೂರು ಆಧರಿಸಿ ನಂದೀಶ್ ಹಾಗೂ ಇತರೆ 50 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜಕಾಲುವೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಕೆಲವರು, ಕಟ್ಟಡ ನಿರ್ಮಾಣ ಮಾಡಿದ್ದಾರೆ. ಅಂಥ ಕಟ್ಟಡ ತೆರವು ಮಾಡಲು ಬಿಬಿಎಂಪಿ ಅಧಿಕಾರಿಗಳ ತಂಡ ಸೋಮವಾರ ಸ್ಥಳಕ್ಕೆ ಹೋಗಿತ್ತು. ಹಿಟಾಚಿ ವಾಹನ ಬಳಸಿ ಕಟ್ಟಡ ತೆರವು ಮಾಡಲಾಗುತ್ತಿತ್ತು.'

'ಸ್ಥಳಕ್ಕೆ ಬಂದಿದ್ದ ನಂದೀಶ್ ರೆಡ್ಡಿ ಹಾಗೂ ಇತರರು, ಹಿಟಾಚಿ ವಾಹನದ ಮುಂದೆ ನಿಂತು ಕೆಲಸಕ್ಕೆ ಅಡ್ಡಿಪಡಿಸಿದ್ದರು. ಹಿಟಾಚಿ ವಾಹನ ಏರಿದ್ದ ನಂದೀಶ್, ಚಾಲಕನಿಂದ ಒತ್ತಾಯದಿಂದ ಕೀ ಕಸಿದುಕೊಂಡು ಎಂಜಿನ್ ಆಫ್ ಮಾಡಿದ್ದರು. ಒಂದು ಗಂಟೆ ಕಾರ್ಯಾಚರಣೆ ನಡೆಯದಂತೆ ತಡೆದಿದ್ದರು. ಮಾಧ್ಯಮದವರು ಸ್ಥಳಕ್ಕೆ ಬಂದು ಪ್ರಶ್ನಿಸುತ್ತಿದ್ದಂತೆ, ನಂದೀಶ್ ಸ್ಥಳದಿಂದ ಹೊರಟು ಹೋದರು ಎಂಬುದಾಗಿ ಶ್ರೀನಿವಾಸ್ ಮೂರ್ತಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಮೂಲಗಳು ವಿವರಿಸಿವೆ.

## ಜೆಇಇ ಅಡ್ವಾನ್ಸ್ಡ್: ಎಸ್‌ಬಿಆರ್‌ನ 11 ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

**ಕಲಬುರಗಿ:** ನಗರದ ಶರಣಬಸವೇಶ್ವರ ಪದವಿಪೂರ್ವ ಕಾಲೇಜಿನ 11 ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ದೇಶದ ಪ್ರತಿಷ್ಠಿತ ಐಐಟಿಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದಾರೆ ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ತಿಳಿಸಿದರು.

'ಜೆಇಇ ಮೇನ್ ಎರಡೂ ಹಂತದ ಪರೀಕ್ಷೆಗಳಲ್ಲಿ 115 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಗೆ ಆಯ್ಕೆ ಆಗಿದ್ದರು. ಅವರಲ್ಲಿ 11 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿದ್ಯಾರ್ಥಿ ಪ್ರೀತೇಶ ಜೋಗಧನಕರ್ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆಯಾಗಿದ್ದಾರೆ. ಶ್ರೇಯಸ್ ಜೆ. ಜಾಧವ್, ಅಭಿಷೇಕ ನಾಗರಾಜ, ಗುರುರಾಜ ಕೆ., ಪ್ರವೀಣ ಪವಾರ್, ಸುಮಿತ್ ಪವಾರ್, ಸಚಿನ್ ಶಿವರಾಜ, ಹರ್ಷ ಎಚ್., ವಿನಯರಾಜ್ ನಿನ್ನೆಕರ್, ತೇಜಸ್ವಿ ಎಚ್., ಜಯಪಾಲ ರೆಡ್ಡಿ ಅವರು ದೇಶದ ಪ್ರತಿಷ್ಠಿತ ಐಐಟಿಗಳಲ್ಲಿ ವ್ಯಾಸಂಗ ಮಾಡಲು ಅರ್ಹತೆ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶರಣಬಸವಪ್ಪ ಅಪ್ಪ ಅವರು ಸಾಧಕ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ತಲಾ ₹ 25 ಸಾವಿರ ನಗದು ಬಹುಮಾನ ವಿತರಿಸಿ, ಸನ್ಮಾನಿಸಿದರು. ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿ ದೊಡ್ಡಪ್ಪ ಅಪ್ಪ, ಸಂಘದ ಚೇರ್‌ಪರ್ಸನ್ ದಾಕ್ಷಾಯಣಿ ಎಸ್. ಅಪ್ಪ, ಡಾ.ಶ್ರೀಶೈಲ್ ಹೊಗಾಡೆ, ಡಾ.ಚಂದ್ರಕಾಂತ ಪಾಟೀಲ ಇದ್ದರು.




ಕಲಬುರಗಿಯ ಶರಣಬಸವೇಶ್ವರ ಸಂಸ್ಥಾನದಲ್ಲಿ ಮಂಗಳವಾರ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಎಸ್‌ಬಿಆರ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ತಲಾ ₹ 25 ಸಾವಿರ ನಗದು ಬಹುಮಾನ ವಿತರಿಸಿ ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

## ರಾಷ್ಟ್ರೋತ್ಥಾನ ತಪಸ್‌ನ 15 ವಿದ್ಯಾರ್ಥಿಗಳು ಐಐಟಿಗೆ ಅರ್ಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆಇಇ ಅಡ್ವಾನ್ಸ್ಡ್‌ನಲ್ಲಿ ರಾಷ್ಟ್ರೋತ್ಥಾನ ತಪಸ್‌ನ 15 ವಿದ್ಯಾರ್ಥಿಗಳು ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಪ್ರವೇಶದ ಅರ್ಹತೆ ಪಡೆದಿದ್ದಾರೆ.

ಕಾಲೇಜಿನ 33 ವಿದ್ಯಾರ್ಥಿಗಳು ಪರೀಕ್ಷೆಗೆ ತೆಗೆದುಕೊಂಡಿದ್ದರು. ಬೆಳಗಾವಿಯ ಪ್ರಜ್ವಲ್ ಲಕ್ಷ್ಮಣ್ ಮಗ್ದುಮ್ (1952 ರ‍್ಯಾಂಕ್) ಬೆಂಗಳೂರು ಗ್ರಾಮಾಂತರದ ಚರಣ್ ಸಿ.ಎಂ (11,454), ಚಿತ್ರದುರ್ಗದ ದತ್ತ ಎಲ್ (11,803), ಉತ್ತರ ಕನ್ನಡದ ಅಮೋಘ್ ಪೈ (13,399), ಬೆಂಗಳೂರಿನ ಕುಶಾಲ್ (14,942), ಉತ್ತರ ಕನ್ನಡದ ಮನೋಹರ ಎಂ. ಹೆಗಡೆ (17,452), ಬೆಳಗಾವಿಯ ಧನಂಜಯ್ ಕಿರಣ್ ಹೊನ್ನಟ್ಟಿ (19,988), ಬೀದರಿನ ವಿನುತ್ ಸಿಂಗಿನ್ (22,739) ರ‍್ಯಾಂಕ್ ಪಡೆದಿದ್ದಾರೆ.

ಬಹುತೇಕ ವಿದ್ಯಾರ್ಥಿಗಳ ಪೋಷಕರು ರೈತರು, ಛಾಯಾಗ್ರಹಕರು, ಚಾಲಕರು, ಕೂಲಿ ಕಾರ್ಮಿಕರು, ಅಟೆಂಡರ್, ಮೆಕ್ಯಾನಿಕ್, ಬಡಗಿ, ಭದ್ರತಾ ಸಿಬ್ಬಂದಿಯ ವೃತ್ತಿ ಮಾಡುವವರಾಗಿದ್ದಾರೆ.

## ರಾಜಕಾಲುವೆಯಲ್ಲಿ ಕುಳಿತು ಮಹಿಳೆ ಪ್ರತಿಭಟನೆ

**ರಾಯಚೂರು:** ಸಫಾಯಿ ಕರ್ಮಚಾರಿಗಳಿಗೆ ಜಲಾಲಸಾಬ ಗುಡ್ಡದಲ್ಲಿ ಪ್ರತ್ಯೇಕ ಸ್ಮಶಾನ ಭೂಮಿ ನೀಡಬೇಕು. ಮ್ಯಾನುವಲ್ ಸ್ಕ್ಯಾವೆಂಜರ್ ಗುರುತಿನ ಚೀಟಿ ಕೊಡಬೇಕು ಎಂದು ಒತ್ತಾಯಿಸಿ ಸಫಾಯಿ ಕರ್ಮಚಾರಿ ಗೀತಾ ಸಿಂಗ್ ನಗರದ ಭಂಗಿಕುಂಟಾ ಬಳಿಯ ರಾಜಕಾಲುವೆಯಲ್ಲಿ ಕುಳಿತು ಪ್ರತಿಭಟಿಸಿದರು.

ಮೈಮೇಲೆ ಕೊಳಚೆ ನೀರು ಸುರಿದುಕೊಂಡು ನಗರಸಭೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅನೇಕ ವರ್ಷಗಳಿಂದ ಜಿಲ್ಲಾಡಳಿತ ಹಾಗೂ ನಗರಸಭೆ ಗಮನಕ್ಕೆ ತಂದರೂ ಭರವಸೆ ನೀಡುವುದರಲ್ಲಿಯೇ ಕಾಲ ದೂಡುತ್ತಿದ್ದಾರೆ ಎಂದು ದೂರಿದರು.

## ಸುಶೀಲಾದೇವಿ, ಚಂಪಾವತಿಗೆ 'ಕಸಾಪ ದತ್ತಿ ಪ್ರಶಸ್ತಿ'

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಶ್ರೀಮತಿ ಟಿ. ಗಿರಿಜ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ದಾವಣಗೆರೆಯ ಜಿ.ಎಸ್. ಸುಶೀಲಾದೇವಿ ಆರ್. ರಾವ್ ಹಾಗೂ ಮೈಸೂರಿನ ಚಂಪಾವತಿ ಶಿವಣ್ಣ ಆಯ್ಕೆಯಾಗಿದ್ದಾರೆ.



ಸುಶೀಲಾದೇವಿ



ಚಂಪಾವತಿ

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹ 13 ಸಾವಿರ ನಗದು ಒಳಗೊಂಡಿದೆ. ಪ್ರತಿವರ್ಷ ಮಹಿಳಾ ಲೇಖಕಿಯೊಬ್ಬರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. 2022 ಹಾಗೂ 2023ನೇ ಸಾಲಿಗೆ ಲೇಖಕಿಯರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಇಬ್ಬರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಕೋಲಾರ:** ತಾಲ್ಲೂಕಿನ ಉಪ್ಪುಕುಂಟೆ ಗ್ರಾಮದಲ್ಲಿ ಮಂಗಳವಾರ ಇಬ್ಬರು ಮಕ್ಕಳೊಂದಿಗೆ ತಾಯಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ.

ತಾಯಿ ಸುಗುಣ (26), ಮಕ್ಕಳಾದ ಪ್ರೀತಂಗೌಡ (9) ಹಾಗೂ ನಿಶಿತಾಗೌಡ (6) ಆತ್ಮಹತ್ಯೆಗೆ ಶರಣಾದವರು. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಕೋಲಾರ ಗ್ರಾಮಾಂತರ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರಾತ್ರಿ 10 ಗಂಟೆವರೆಗೆ ದೂರು ದಾಖಲಾಗಿರಲಿಲ್ಲ. ಸಂಬಂಧಿಕರು ಹಾಗೂ ಗ್ರಾಮದ ಇತರರು ಠಾಣೆ ಬಳಿ ಸೇರಿದ್ದರು.

13 ವರ್ಷಗಳ ಹಿಂದೆ ಸುಗುಣ ಅವರು ಮುರಳಿ ಎಂಬುವರೊಂದಿಗೆ ವಿವಾಹವಾಗಿದ್ದರು. ಪತಿ ಹಾಗೂ ಪತ್ನಿ ಇಬ್ಬರೂ ಕೆಎಸ್‌ಆರ್‌ಟಿಸಿ ಡಿಪೊದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕಾಯ್ದೆ ತಿದ್ದುಪಡಿಗೆ ಚಿಂತನೆ- ವಸತಿ ಸಚಿವ ಜಮೀರ್ ಅಹಮದ್ ಖಾನ್

# 'ನಿವೇಶನ ನೋಂದಣಿ: ರೇರಾ ಅನುಮತಿ ಕಡ್ಡಾಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಧಿಕೃತ ಬಡಾವಣೆಗಳ ನಿರ್ಮಾಣವನ್ನು ನಿಯಂತ್ರಿಸಲು ನಿವೇಶನಗಳ ಮಾರಾಟ ಪ್ರಕ್ರಿಯೆಯಲ್ಲಿ ಸ್ಥಿರಾಸ್ತಿಗಳ ನೋಂದಣಿಗೂ ಮುನ್ನ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲು ಕಾಯ್ದೆಗೆ ತಿದ್ದುಪಡಿ ತರುವ ಕುರಿತು ಚಿಂತನೆ ನಡೆಸಲಾಗುವುದು ಎಂದು ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

ಮಂಗಳವಾರ ರೇರಾ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, 'ಕೆಲವರು ಸಕ್ಷಮ ಪ್ರಾಧಿಕಾರಗಳಿಂದ ಸೂಕ್ತ ಅನುಮತಿಗಳನ್ನು ಪಡೆಯದೇ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಮಾರಾಟ ಮಾಡುತ್ತಿದ್ದಾರೆ. ಕಾನೂನು ವ್ಯಾಜ್ಯಗಳಿರುವ ಪ್ರದೇಶಗಳಲ್ಲೂ ನಿವೇಶನಗಳನ್ನು ನಿರ್ಮಿಸಿ, ಮಾರುತ್ತಿದ್ದಾರೆ. ಇದರಿಂದ ನಿವೇಶನ ಖರೀದಿಸಿದವರು ಸಮಸ್ಯೆಗೆ ಸಿಲುಕುತ್ತಿದ್ದಾರೆ' ಎಂದರು.

ರೇರಾ ಅನುಮತಿ ಇಲ್ಲದೆ ನಿವೇಶನಗಳ ಖರೀದಿ, ಮಾರಾಟ ದಾಖಲೆ ನೋಂದಾಯಿಸುವಂತಿಲ್ಲ ಎಂದು ಕಾನೂನಿಗೆ ತಿದ್ದುಪಡಿ ಮಾಡಿದರೆ ಖರೀದಿದಾರರಿಗೆ ಅನ್ಯಾಯ ಆಗುವುದನ್ನು ತಪ್ಪಿಸಬಹುದು. ರೇರಾ ಅಧಿಕಾರಿಗಳು ನಿವೇಶನ ಮಾರಾಟಕ್ಕೆ ಒಪ್ಪಿಗೆ ನೀಡುವ ಮುನ್ನ ಎಲ್ಲ ವಿಷಯಗಳನ್ನೂ ಪರಿಶೀಲಿಸಿದರೆ ವಂಚನೆ ತಡೆಯಬಹುದು ಎಂದು ಹೇಳಿದರು.

ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಬಡಾವಣೆ ನಿರ್ಮಾಣಕ್ಕೂ ಮೊದಲು ರೇರಾದಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯ ಎಂಬ ನಿಯಮವಿದೆ. ಆದರೆ, ಹಲವರು ಅದನ್ನು ಉಲ್ಲಂಘಿಸಿ ಅಕ್ರಮವಾಗಿ ಬಡಾವಣೆಗಳನ್ನು ನಿರ್ಮಿಸುತ್ತಿದ್ದಾರೆ. ಇದನ್ನು ನಿಯಂತ್ರಿಸುವುದಕ್ಕೂ ಕಾನೂನು ತಿದ್ದುಪಡಿ ಕುರಿತು ಪರಿಶೀಲಿಸಲಾಗುವುದು. ಸ್ವಾಧೀನ ಪ್ರಮಾಣಪತ್ರ ನೀಡುವುದಕ್ಕೂ ರೇರಾ ಒಪ್ಪಿಗೆ ಕಡ್ಡಾಯಗೊಳಿಸಲಾಗುವುದು ಎಂದರು.

ಅನಧಿಕೃತವಾಗಿ ಬಡಾವಣೆಗಳನ್ನು ನಿರ್ಮಿಸಿ, ನಿವೇಶನ ಮಾರಾಟ ಮಾಡುತ್ತಿರುವ ದೂರುಗಳು ಹೆಚ್ಚುತ್ತಿವೆ. ಮೂಲ ಒಪ್ಪಂದಕ್ಕಿಂತ ಹೆಚ್ಚಿನ ದರ ಪಡೆಯುವ ದೂರುಗಳೂ ಬರುತ್ತಿವೆ. ಈ ಕಾರಣದಿಂದ ವಿಭಾಗೀಯ ಮಟ್ಟದಲ್ಲಿ ರೇರಾ ಕಚೇರಿ ತೆರೆಯಲಾಗುವುದು ಎಂದು ಜಮೀರ್ ತಿಳಿಸಿದರು.

ರೇರಾ ಕಾರ್ಯದರ್ಶಿ ಇಬ್ರಾಹಿಂ ಮೈಗೂರ್ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

### ₹ 340 ಕೋಟಿ ದಂಡ ಬಾಕಿ

ಗ್ರಾಹಕರಿಗೆ ವಂಚಿಸಿದ ಆರೋಪ ಎದುರಿಸುತ್ತಿರುವ ನಿತೇಶ್, ಮಂತ್ರಿ ಡೆವಲಪರ್ಸ್ ಸೇರಿದಂಯೆ ಹತ್ತು ಪ್ರಮುಖ ರಿಯಲ್ ಎಸ್ಟೇಟ್ ಕಂಪನಿಗಳು ₹ 340 ಕೋಟಿ ದಂಡ ಬಾಕಿ ಉಳಿಸಿಕೊಂಡಿವೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ತಕ್ಷಣವೇ ದಂಡ ವಸೂಲಿಗೆ ಕ್ರಮ ಕೈಗೊಳ್ಳುವಂತೆ ಸಚಿವ ಜಮೀರ್ ಅಹಮದ್ ಸೂಚಿಸಿದರು.

## ಪ್ರತಾಪಸಿಂಹ 'ಸಾಕು ಚೇಲು': ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಂಸದ ಪ್ರತಾಪ ಸಿಂಹ ಅವರು ನನ್ನನ್ನು ಸಿದ್ದರಾಮಯ್ಯ ಅವರ ಚೇಲಾ ಎಂದಿದ್ದಾರೆ. ಆದರೆ, ಈ ವ್ಯಕ್ತಿ (ಪ್ರತಾಪ ಸಿಂಹ) ಬಿ.ಎಲ್. ಸಂತೋಷ್ ಸಾಕಿಕೊಂಡಿರುವ ಚೇಳು' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಕುಟುಕಿದ್ದಾರೆ.


ತಮ್ಮ ನಿವಾಸದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಪಾಟೀಲ, 'ಸಂತೋಷ್ ಅವರು ಇಂತಹ ಹಲವು ಚೇಳುಗಳನ್ನು ಸಾಕಿಕೊಂಡಿದ್ದಾರೆ. ಹೀಗಾಗಿ ದಿನವೂ ಅವರು ಇಂಥ ಚೇಳುಗಳನ್ನು ಬಿಟ್ಟು ಮಜಾ ತೆಗೆದುಕೊಳ್ಳುತ್ತಿದ್ದಾರೆ' ಎಂದರು.

'ನನ್ನದು ಚಿಲ್ಲರೆ ಖಾತೆ ಎಂದೂ ಹೇಳಿದ್ದಾರೆ. ಕೈಗಾರಿಕಾ ಖಾತೆಯ ಮಹತ್ವದ ಬಗ್ಗೆ ಅವರು ಮೋದಿಯವರ ಬಳಿ ಕೇಳಿ ತಿಳಿದುಕೊಂಡರೆ ಒಳ್ಳೆಯದು. ಖಾತೆ ಯಾವುದಾದರೂ ನಾವು ಮಾಡುವ ಕೆಲಸ ಮುಖ್ಯ. ಇಂಥ ಪ್ರಾಥಮಿಕ ಸಂಗತಿಗಳು ಒಬ್ಬ ಸಂಸದರಿಗೆ ಗೊತ್ತಿಲ್ಲದೇ ಇರುವುದು ವಿಷಾದನೀಯ' ಎಂದರು.

'ಬಿ.ಎಲ್.ಸಂತೋಷ್ ಬಗ್ಗೆ ನಾನು ಮಾತನಾಡಿದ ತಕ್ಷಣ ಅದು ಇಡೀ ಬ್ರಾಹ್ಮಣ ಸಮುದಾಯವನ್ನು ಬೈದಂತೆ ಅಲ್ಲ. ನನ್ನ ಮತ್ತು ಬ್ರಾಹ್ಮಣರ ನಡುವಣ ಸಂಬಂಧ ಎಷ್ಟೊಂದು ಮಧುರವಾಗಿದೆ ಎನ್ನುವುದನ್ನು ಒಮ್ಮೆ ವಿಜಯಪುರಕ್ಕೆ ಬಂದು ನೋಡಲಿ. ಪ್ರತಾಪ ಸಿಂಹ ದಿನವೂ ನನ್ನ ಬಗ್ಗೆ ವೈಯಕ್ತಿಕವಾಗಿ ಮಾತನಾಡುವುದನ್ನು ನಿಲ್ಲಿಸಬೇಕು' ಎಂದರು.


### ತಿದ್ದುಪಡಿ

**ಕಡೂರು:** ಬ್ಲೂ ಆರ್ಮಿ- ಮಾದಿಗರ ಧ್ವನಿ ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷರಾಗಿ ಕಡೂರಿನ ಶೂದ್ರ ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.



ಕಡೂರು ಶೂದ್ರ ಶ್ರೀನಿವಾಸ್

ಮಂಗಳವಾರದ 'ಪ್ರಜಾವಾಣಿ' ಸಂಚಿಕೆಯಲ್ಲಿ ಬೇರೆ ಚಿತ್ರ ಪ್ರಕಟವಾಗಿತ್ತು.




# ಹೊಗಳುವವರಿದ್ದಾರೆ ಎಚ್ಚರಿಕೆ!

ಬೇರೆಯವರ ಅಭಿಪ್ರಾಯವನ್ನು ಆಧರಿಸಿ ನಾವು ಯಾವುದೇ ವಸ್ತುವನ್ನು ಕೊಳ್ಳುವ ಮೊದಲು, ಆ ಹೊಗಳಿಕೆಯು ಖೋಟಾವೋ ಅಥವಾ ಸಾಚಾವೋ ಎಂದು ಪತ್ತೆ ಮಾಡಲಾದೀತೆ?



**ಶರತ್ ಭಟ್ ಸೇರಾಜೆ**

‘ದುಡ್ಡಿನಿಂದ ಸಂತೋಷವನ್ನು ಖರೀದಿ ಮಾಡಲು ಸಾಧ್ಯವಿದೆಯೇ – ಎಂದು ಕೇಳಿದವರಿಗೆ ಎಲ್ಲಿ ಶಾಪಿಂಗ್ ಮಾಡಬೇಕೆಂದು ಗೊತ್ತಿರಲಿಲ್ಲ’ ಎಂಬ ಹಾಸ್ಯೋಕ್ತಿಯೊಂದಿದೆ. ಸುಖವೋ ದುಃಖವೋ, ಜನ ಶಾಪಿಂಗ್ ಅಂತೂ ಮಾಡುತ್ತಿದ್ದಾರೆ; ಅಂಗಡಿಗೆ ಹೋಗುವುದಕ್ಕಿಂತ ಹೆಚ್ಚಾಗಿ ಆನ್‌ಲೈನ್ ಶಾಪಿಂಗ್ ಮಾಡುತ್ತಿದ್ದಾರೆ ಎಂಬುದು ವಾಸ್ತವ. ಕೋಟಿಗಟ್ಟಲೆ ಶಾಪಿಂಗುಗಳು ‘ಅಮೆಜಾನ್’ ಎಂಬ ಬೃಹದಾಗ್ತ್ರದ ಆನ್‌ಲೈನ್ ಅಂಗಡಿಯಲ್ಲಿ ಆಗುತ್ತಿರುವುದು ಸತ್ಯವೇ. ಅದರಲ್ಲಿ ಇರುವ ಒಂದು ಅನುಕೂಲ ಎಂದರೆ ಒಂದು ಸಿದ್ಧವಸ್ತುವನ್ನು ಖರೀದಿ ಮಾಡುವ ಮೊದಲು ಅದರ ಬಗ್ಗೆ ಅದನ್ನು ಖರೀದಿ ಮಾಡಿದವರು ಹಾಕಿದ ವಿಮರ್ಶೆಯನ್ನು ನೋಡಲು ಸಾಧ್ಯವಿದೆ. ಎಲ್ಲರೂ ಸೇರಿ ಅದಕ್ಕೆ ಎಷ್ಟು ರೇಟಿಂಗ್ ಕೊಟ್ಟಿದ್ದಾರೆ; ಮೂರು ಸ್ಟಾರೋ ನಾಲ್ಕೋ ನಾಲ್ಕೂವರೆಯೋ ಎಂದು ನೋಡಿ ಉತ್ಪನ್ನದ ಗುಣಮಟ್ಟದ ಬಗ್ಗೆ ಒಂದು ಅಂದಾಜಿಗೆ ಬರಲು ಸಾಧ್ಯವಿದೆ.



ಕಳೆದ ವರ್ಷವೊಂದರಲ್ಲಿಯೇ ಸುಮಾರು 12.5 ಕೋಟಿ ಜನರು ಸುಮಾರು 150 ಕೋಟಿ ವಿಮರ್ಶೆಗಳನ್ನು ಅಮೆಜಾನಿನ ವೆಬ್‌ಸೈಟಿನಲ್ಲಿ ಹಾಕಿದ್ದಾರೆ ಎಂದು ಅಮೆಜಾನ್ ಹೇಳಿದೆ. 1995ರಲ್ಲಿ ಅಮೆಜಾನ್ ಹೀಗೆ ವಿಮರ್ಶೆ ಮಾಡುವ ಅವಕಾಶವನ್ನು ಗ್ರಾಹಕರಿಗೆ ಕೊಟ್ಟಲ್ಲಿಂದ ವರ್ಷಕ್ಕೆ 150 ಕೋಟಿ ವಿಮರ್ಶೆಗಳವರೆಗೆ ಇದು ಬಂದು ನಿಂತಿದೆ ಎಂದರೆ ಇದರ ಗಾತ್ರ, ಮಹತ್ತ್ವಗಳ ಕಲ್ಪನೆ ಮಾಡಬಹುದು. ಹೀಗಿರುವಾಗ, ಅಲ್ಲಿ ಬರುವ ವಿಮರ್ಶೆಗಳು, ರೇಟಿಂಗುಗಳು ಪ್ರಾಮಾಣಿಕವಾಗಿರುತ್ತವೆ, ವಿಶ್ವಾಸಕ್ಕೆ ಅರ್ಹವಾಗಿರುತ್ತವೆ; ಜನರು ತಾವು ಖರೀದಿಸಿ ನೋಡಿದ್ದನ್ನು, ಅನುಭವಿಸಿದ್ದನ್ನು ಹೊಗಳಿಕೆಯ ರೂಪದಲ್ಲಿಯೋ, ತೆಗಳಿಕೆಯ ರೂಪದಲ್ಲಿಯೋ ಪ್ರಾಮಾಣಿಕವಾಗಿ ದಾಖಲಿಸಿರುತ್ತಾರೆ ಎಂಬ ನಿರೀಕ್ಷೆ ಇರುವುದು ಸಹಜ. ಆದರೆ ವಸ್ತುಸ್ಥಿತಿ ಹಾಗಿಲ್ಲ.

ಈ ಮಟ್ಟದ ವ್ಯಾಪಾರ ಇರುವಲ್ಲಿ ದ್ರೋಹಚಿಂತನೆಯೂ ಇದ್ದೇ ಇರುತ್ತದೆ ಎಂದು ಲೋಕಾನುಭವದಿಂದ ಹೇಳಬಹುದು. ‘ಫೇಕ್ ರಿವ್ಯೂ ಇಂಡಸ್ಟ್ರಿ’ ಎಂಬ ಹೊಸ ಉದ್ಯಮದ ಹುಟ್ಟು ಆದದ್ದು ಹೀಗೆ. ಯಾರೋ ಕೆಲವರು ನಕಲಿ ವಿಮರ್ಶೆಗಳನ್ನು ಬರೆದಿದ್ದರೆ ಚಿಂತೆಯಿರಲಿಲ್ಲ. ಆದರೆ ಇದೊಂದು ಉದ್ಯಮವೇ ಆಗಿ ಬೆಳೆದಿದೆ. ಕಳೆದ ವರ್ಷವೊಂದರಲ್ಲಿಯೇ ಸುಮಾರು ಇಪ್ಪತ್ತು ಕೋಟಿ ನಕಲಿ ವಿಮರ್ಶೆಗಳು ಬಂದಿರಬಹುದು ಎಂದು ಅಮೆಜಾನ್ ಒಂದು ಲೆಕ್ಕವನ್ನು ಕೊಟ್ಟಿದೆ. ಇದನ್ನು ತಡೆಗಟ್ಟುವುದಕ್ಕೆ ಸಾವಿರಾರು ಅಂಶಗಳನ್ನು ಪರಿಗಣಿಸಿ ಖೋಟಾ ರೇಟಿಂಗುಗಳನ್ನು ಕಂಡು ಹಿಡಿಯುವ ಕೃತಕ ಬುದ್ಧಿಮತ್ತೆಯ ಮಶೀನ್ ಲರ್ನಿಂಗಿನ ತಂತ್ರಗಳನ್ನು ಬಳಸಲಿದ್ದೇವೆ ಎಂದು ಹೇಳಿದೆ. ಇದು ಕುತೂಹಲವನ್ನು ಕೆರಳಿಸಿರುವ ವಿಚಾರ. ಇಂಥ ಪತ್ತೆದಾರಿ ಕೆಲಸವನ್ನು ಮಾಡುವ ತಂತ್ರಾಂಶಗಳನ್ನು 11ಈಗಾಗಲೇ ಬೇರೆ ಕೆಲವು ಕಂಪೆನಿಗಳು ತಯಾರಿಸಿರುವುದರಿಂದ ಇದರ ಕಾರ್ಯವೈಖರಿಯ ಬಗ್ಗೆ ಒಂದಷ್ಟು ಊಹೆಗಳನ್ನು ಮಂಡಿಸಲು ಸಾಧ್ಯವಿದೆ. ಅವು ಯಾವ ಸುಳಿವುಗಳ ಬೆನ್ನು ಹತ್ತಿ ನಕಲಿ ಶ್ಯಾಮರನ್ನು ಹಿಡಿಯಬಹುದು ಎಂದು ನೋಡೋಣ.

ಮೊದಲು ನೋಡಬಹುದಾದದ್ದು ‘Verified Purchase’ ಎಂಬ ಅಂಶವನ್ನು. ವಿಮರ್ಶೆಯನ್ನು ಬರೆಯುವವರು ಆ ವಸ್ತುವನ್ನು ಅವರದೇ ವೆಬ್ ಸೈಟಿನಲ್ಲಿ ಖರೀದಿಸಿದ್ದಾರೆ ಅದಕ್ಕೆ ‘Verified Purchase’ ಎಂಬ ಗುರುತುಪಟ್ಟಿಯನ್ನು ಕೊಡಲಾಗುತ್ತದೆ. ಇದೇ ಇಲ್ಲದಿದ್ದರೆ, ಸುಳ್ಳರು ವಸ್ತುವನ್ನು ಕೊಡುಕೊಳ್ಳುವುದಕ್ಕೇ ಹೋಗದೆ ಸುಮ್ಮ ಸುಮ್ಮನೆ ವಿಮರ್ಶೆಯನ್ನು ಬರೆದಿದ್ದಾರೆ, ರೇಟಿಂಗ್ ಅನ್ನು ಕೊಟ್ಟಿದ್ದಾರೆ ಎಂದಾಯಿತು. ಗಣಕಯಂತ್ರಗಳಿಗೆ ಇಂಥದ್ದನ್ನು ಹಿಡಿಯುವುದು ಸಲೀಸಾದ ಕೆಲಸ. ಇದಕ್ಕೆ ಕೃತಕ ಬುದ್ಧಿಮತ್ತೆಯೂ ಬೇಕಾಗಿಲ್ಲ, ಮಾಮೂಲಿ ತಂತ್ರಾಂಶಗಳೇ ಇದನ್ನು ನಿಭಾಯಿಸಬಲ್ಲವು.

‘ರೇಟಿಂಗ್ ಟ್ರೆಂಡ್’ ಎಂಬುದು ಪರಿಗಣಿಸಬೇಕಾದ ಇನ್ನೊಂದು ಅಂಶ. ಉದಾಹರಣೆಗೆ, ಒಂದು ಸರಕಿಗೆ 529 ವಿಮರ್ಶೆಗಳು ಬಂದಿವೆ ಎಂದುಕೊಳ್ಳೋಣ, ಅವುಗಳಲ್ಲಿ 273 ಕಳೆದ ಹನ್ನೆರಡು ದಿನಗಳಲ್ಲಿಯೇ ಬಂದಿದೆ ಎಂದರೆ ಇದರಲ್ಲಿ ಏನೋ ಸ್ವಲ್ಪ ಶಂಕಾಸ್ಪದವಾದ ನಡೆ ಕಾಣುತ್ತಿದೆ ಎಂದುಕೊಂಡು ಅದನ್ನು ಮತ್ತಷ್ಟು ವಿಶ್ಲೇಷಣೆ ಮಾಡಿನೋಡಬಹುದು. ಈ 273 ವಿಮರ್ಶೆಗಳ ಒಟ್ಟು ರೇಟಿಂಗಿನ ಸರಾಸರಿಯು 5 ಅಥವಾ 4.9 ಆದರೆ ಅಲ್ಲಿ ಏನೋ ಮೋಸ ಇದೆ ಎಂದೇ ಅರ್ಥ. ಸಹಜವಾಗಿ ಹೀಗೆ 273 ಜನ ಸಂತೃಪ್ತ ಗ್ರಾಹಕರು ಇಷ್ಟು ಕಡಿಮೆ ಅವಧಿಯಲ್ಲಿ ಸಿಕ್ಕಿ, ಅವರೆಲ್ಲರೂ ಒಟ್ಟೊಟ್ಟಿಗೇ ವಿಮರ್ಶೆಯನ್ನು ಬರೆಯಲು ತೊಡಗುವುದರ ಸಂಭವನೀಯತೆ ಕಡಿಮೆ ಎನ್ನಬೇಕು. ಇಂಥ ವಿಶ್ಲೇಷಣೆಗಳನ್ನು ಗಣಕಯಂತ್ರಗಳು ಸುಲಭದಲ್ಲಿ ಮಾಡುತ್ತವೆ.


ವಿಮರ್ಶೆ ಬರೆದವರ ಆನ್‌ಲೈನ್ ನಡವಳಿಕೆ, ಚಟುವಟಿಕೆಗಳು ಯಾವ ರೀತಿ ಇವೆ ಎಂದು ನೋಡುವುದು ಇನ್ನೊಂದು ವಿಧಾನ. ಒಂದು ಉತ್ಪನ್ನಕ್ಕೆ 529 ವಿಮರ್ಶೆಗಳು ಬಂದಿದ್ದರೆ ಅದರಲ್ಲಿ 273 ಜನರು ಇದೊಂದು ವಿಮರ್ಶೆಯನ್ನು ಬಿಟ್ಟು ಬೇರೇನನ್ನೂ ಬರೆದಿಲ್ಲ ಎಂದಾದರೆ ಇದೂ ಸಂದೇಹಾಸ್ಪದ ನಡೆಯೇ. ಇಷ್ಟೊಂದು ಜನರು ಈ ಒಂದು ಪ್ರಾಡಕ್ಟ್ ಬಿಟ್ಟು ಬೇರೇನನ್ನೂ ಖರೀದಿ ಮಾಡಿಲ್ಲವೇ? ಇದರ ವಿಮರ್ಶೆ ಬರೆಯಲು ಬಂದ ಉತ್ಸಾಹ ಅವರಿಗೆ ಬೇರೆ ಯಾವುದರ ಬಗ್ಗೆ ಬರೆಯಲಿಕ್ಕೂ ಬರಲಿಲ್ಲವೇ ಎಂಬುದು ಪರಿಶೀಲನಾರ್ಹವಾದ ವಿಚಾರ. ಇನ್ನು ಕೆಲವರು ಇಪ್ಪತ್ತೆರಡು ಉತ್ಪನ್ನಗಳನ್ನು ಖರೀದಿ ಮಾಡಿದ್ದಾರೆ, ಇಪ್ಪತ್ತೆರಡಕ್ಕೂ ಐದಕ್ಕೆ ಐದು ಅಂಕಗಳನ್ನು ಕೊಟ್ಟಿದ್ದಾರೆ ಎಂದರೆ ಅದೂ ಹುಬ್ಬೇರಿಸಬೇಕಾದ ನಡೆಯೇ. ಸತ್ಯ ಹೇಳಿ, ನಮ್ಮ ಜನರಿಗೆ ಈ ಮಟ್ಟದ ಉದಾರಬುದ್ಧಿ ನಿಜವಾಗಿಯೂ ಇರುತ್ತದೆಂದು ನಿಮಗೆ ಅನಿಸುತ್ತದೆಯೇ?!

ಇನ್ನು ಇಂಥವರು ಒಂದೇ ತರದ ನುಡಿಗಟ್ಟುಗಳನ್ನು, ವಾಕ್ಯಗುಚ್ಛಗಳನ್ನು ಎಲ್ಲೆಡೆ ಬಿಸಾಕುತ್ತಿದ್ದಾರಾದರೆ, ಇವರ ವಿಮರ್ಶೆಗಳ ಅಥವಾ ಹಲವರ ವಿಮರ್ಶೆಗಳಲ್ಲಿ ಬಳಕೆಯಾಗಿರುವ ಪದಗಳ ಸಂಖ್ಯೆ ಒಂದೇ ಎಂದಾದರೆ ಅದು ‘ಕಾಪಿ ಪೇಸ್ಟ್’ ಸಾಹಸವಾಗಿರುವ ಸಾಧ್ಯತೆಯೇ ಹೆಚ್ಚು. ಐವತ್ತು ಉತ್ಪನ್ನಗಳ ವಿಮರ್ಶೆಗಳನ್ನು ನೋಡಿದಾಗ, ಅದೇ ಇಪ್ಪತ್ತೈದು ಜನರು ಈ ಎಲ್ಲ ಉತ್ಪನ್ನಗಳಿಗೂ ವಿಮರ್ಶೆ ಬರೆದಿದ್ದಾರೆ ಎಂದಾದರೆ ಇದೊಂದು ಗುಂಪಿನ ವ್ಯವಸ್ಥಿತವಾದ ಕೆಲಸ ಎಂಬ ನಿರ್ಧಾರಕ್ಕೆ ಬರಬಹುದು. ನೀವು ಖರೀದಿ ಮಾಡಿದ ಐವತ್ತು ಪ್ರಾಡಕ್ಟುಗಳನ್ನೇ ಪಕ್ಕದ ಮನೆಯವರೂ ಖರೀದಿಸಿದ್ದಾರೆ; ಅದೇ ಐವತ್ತನ್ನೇ ಈ ಕಡೆ ಮನೆಯವರೂ ಖರೀದಿಸಿದ್ದಾರೆ. ಹೀಗಾಗುವ ಸಾಧ್ಯತೆ ಬಹಳವೇ ಕಡಿಮೆಯಲ್ಲವೇ?

ಹೀಗೆ ಹಲವು ತಂತ್ರಗಳನ್ನು ಹೂಡಿ, ಖೋಟಾ ವಿಮರ್ಶೆಗಳ ವಿರುದ್ಧ ಸಮರ ಸಾರುವುದಕ್ಕೆ ಅವಕಾಶವಿದೆ. ❖

## ನ್ಯೂಟ್ರಾಸ್ಯುಟಿಕಲ್

# ಔಷಧವೂ ಹೌದು ಆಹಾರವೂ ಹೌದು



**ಅಮೃತೇಶ್ವರಿ ಬಿ.**

**ಆರ್ಥಿಕತೆ** ಹಾಗೂ ಜೀವನಶೈಲಿಯ ವಿಷಯಕ್ಕೆ ಬಂದಾಗ ನಾವು ಈಗ ಸಾಧಿಸಿರುವುದು ಮಹತ್ತರವಾದದ್ದು. ಹಣದ ಹರಿವು ಹೆಚ್ಚಾದಂತೆಯೇ, ಜೀವನದ ಗುಣಮಟ್ಟ ಸಾಕಷ್ಟು ಸುಧಾರಿಸಿದೆ. ಆದರೆ ಈ ಭೋಗಜೀವನ ಅನೇಕ ಜೀವನಶೈಲಿ ಸಂಬಂಧಿತ ರೋಗಗಳನ್ನೂ ತಂದೊಡ್ಡಿದೆ. ಇಂದಿನ ಬದಲಾಯಿಸಿದ ಜೀವನಶೈಲಿಯ ಹೆಚ್ಚಿನ ಪರಿಣಾಮ ಬೀರಿರುವುದು ನಮ್ಮ ಆಹಾರಶೈಲಿ, ಅರ್ಥಾತ್ ಆರೋಗ್ಯದ ಮೇಲೆಯೇ ಎಂದರೆ ತಪ್ಪಾಗಲಾರದು. ಮಕ್ಕಳಿಂದ ದೊಡ್ಡವರತನಕ ಜಂಕ್ ಫುಡ್ ತಿಂದಾಗ ತೃಪ್ತರಾಗುವಷ್ಟು ಮನೆಯಲ್ಲಿ ಮಾಡಿದ ಊಟ ಅಥವಾ ಹಣ್ಣು-ತರಕಾರಿ ಸೇವಿಸಿದಾಗ ಆಗುವುದಿಲ್ಲ. ಹೊಟ್ಟೆಬಿರಿಯುವಷ್ಟು ಜಂಕ್ ಫುಡ್ ತಿನ್ನುವುದರಿಂದ ದೇಹಕ್ಕೆ ಅವಶ್ಯವಾಗಿ ದೊರೆಯಬೇಕಾದ ಪೋಷಕಾಂಶ ಲಭಿಸದೆ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ. ಫಲವಾಗಿ ಆರೋಗ್ಯಸಮಸ್ಯೆಗಳೂ ಸಾಲುಗಟ್ಟಿ ನಿಲ್ಲುತ್ತಿವೆ. ‘ನಿಮ್ಮ ಆಹಾರವೇ ಔಷಧವಾಗಲಿ ಹಾಗೂ ಆ ಔಷಧವೇ ನಿಮ್ಮ ಆಹಾರವಾಗಿರಲಿ’ ಎಂದು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಹಿಪೋಕ್ರೇಟಸ್ ಹೇಳಿದ್ದ. ನ್ಯೂಟ್ರಾಸ್ಯುಟಿಕಲ್ ಎನ್ನುವ ಹೊಸ ಆಹಾರವರ್ಗವು ಈ ಹೇಳಿಕೆಯನ್ನು ಅದ್ಭುತವಾಗಿ ಸಮರ್ಥಿಸಿಕೊಳ್ಳಬಲ್ಲದು. ಆಹಾರ ಮತ್ತು ಔಷಧ – ಇವೆರೆಡರ ನಡುವಿನ ಗೆರೆಯನ್ನು ಮಂಕಾಗಿಸುವ ಉತ್ತಮ ಖಾದ್ಯೌಷದ ಎನಿಸಿಕೊಳ್ಳಬಲ್ಲವು, ಈ ನ್ಯೂಟ್ರಾಸ್ಯುಟಿಕಲ್‌ಗಳು.

ಹಾಗಾದರೆ ನ್ಯೂಟ್ರಾಸ್ಯುಟಿಕಲ್ ಎಂದರೆ ಏನು? ಆಹಾರಪದಾರ್ಥಗಳಿಂದ ಪ್ರತ್ಯೇಕಿಸಿ, ಶುದ್ಧೀಕರಿಸಿದ, ಪೋಷಕಾಂಶಗಳೆಂದು ಗುರುತಿಸಿಕೊಳ್ಳದ, ಆದರೆ ದೇಹಕ್ಕೆ ಆರೋಗ್ಯಲಾಭಗಳನ್ನು ನೀಡುವ ಸಾರಾಂಶಗಳನ್ನೇ ನ್ಯೂಟ್ರಾಸ್ಯುಟಿಕಲ್ ಎನ್ನಲಾಗುತ್ತದೆ. ಫಾರ್ಮಸ್ಯುಟಿಕಲ್ ಮತ್ತು ನ್ಯೂಟ್ರಿಷನ್ ಪದಗಳಿಂದ ಹುಟ್ಟಿದ್ದೇ ಈ ನ್ಯೂಟ್ರಾಸ್ಯುಟಿಕಲ್. ಆಹಾರಪದಾರ್ಥಗಳಿಂದ ಬೇರ್ಪಡಿಸಿದ ಒಮೆಗಾ-3 ಕೊಬ್ಬಿನಾಮ್ಲಗಳು, ಕರ್ಕ್ಯುಮಿನ್, ಹೈಡ್ರಾಕ್ಸಿ ಸಿಟ್ರಿಕ್ ಆಮ್ಲ, ಮುಂತಾದುವು ಹಾಗೂ ಪ್ರೀಬಯಾಟಿಕ್ ಹಾಗೂ ಪ್ರೋಬಯಾಟಿಕ್‌ನಂತಹ ವಿಶೇಷ ಪೂರಕ ಆಹಾರಗಳು, ಆ್ಯಂಟಿಆಕ್ಸಿಡೆಂಟುಗಳು, ಸಾರವರ್ಧಿತ ಆಹಾರಪದಾರ್ಥಗಳು ಮತ್ತು ಹರ್ಬಲ್ ಉತ್ಪನ್ನಗಳೆಲ್ಲವೂ ನ್ಯೂಟ್ರಾಸ್ಯುಟಿಕಲ್‌ನ ಹಲವು ಬಗೆಗಳು. ಈ ಪೋಷಣಖಾದ್ಯಗಳು ದೀರ್ಘಕಾಲದ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಸುಧಾರಿಸುವಲ್ಲಿಯೂ ಬಹಳ ಅನುಕೂಲಿ.

> ಆಹಾರ ಪದಾರ್ಥಗಳಿಂದ ಪ್ರತ್ಯೇಕಿಸಿ, ಶುದ್ಧೀಕರಿಸಿದ, ಪೋಷಕಾಂಶಗಳೆಂದು ಗುರುತಿಸಿಕೊಳ್ಳದ, ಆದರೆ ದೇಹಕ್ಕೆ ಆರೋಗ್ಯಲಾಭಗಳನ್ನು ನೀಡುವ ಸಾರಾಂಶಗಳನ್ನೇ ನ್ಯೂಟ್ರಾಸ್ಯುಟಿಕಲ್ ಎಂದು ಕರೆಯಲಾಗುತ್ತದೆ

‘ಫಂಕ್ಷನಲ್ ಫುಡ್’ ಎಂದು ಕರೆಯುವ ಸಾರವರ್ಧಿತ ಆಹಾರ ಪದಾರ್ಥಗಳೂ ಇದೇ ಕಾರ್ಯವನ್ನೇ ಮಾಡುತ್ತವೆ. ಅಂದರೆ ನಿರ್ದಿಷ್ಟ ಆಹಾರದಲ್ಲಿರುವ ನಿರ್ದಿಷ್ಟ ಪೋಷಕಾಂಶವನ್ನು ಇನ್ನಷ್ಟು ಸೇರಿಸಿ ಅಥವಾ ಮತ್ತೊಂದು ಪೋಷಕಾಂಶವನ್ನು ಸೇರಿಸಿ, ಸಂಸ್ಕರಿಸಿದ ಆಹಾರವೇ ಫಂಕ್ಷನಲ್ ಫುಡ್. ಉದಾಹರಣೆಗೆ, ‘ಗೋಲ್ಡನ್ ರೈಸ್’ ಎನ್ನುವುದು ತಳಿಸಂವರ್ಧನೆಯ ತಂತ್ರಜ್ಞಾನದಿಂದ ಬೀಟಾ-ಕೆರೋಟೀನು ಉತ್ಪಾದಿಸುವ ಜೀನನ್ನು ಭತ್ತದ ಒಂದು ತಳಿಗೆ ತೂರಿಸಿ ಪಡೆದ ಅಕ್ಕಿ. ಜೀವಸತ್ವ-ಎ ಕೊರತೆಯಿರುವವರಿಗೆ ಹಾಗೂ ಎ-ಜೀವಸತ್ವವುಳ್ಳ ಆಹಾರಗಳನ್ನು ತಿನ್ನದವರಿಗೆ ಅದನ್ನು ಭರಿಸಿಕೊಡುವ ಪ್ರಯತ್ನವೇ ಇದು. ಹೀಗೆ ಫಂಕ್ಷನಲ್ ಫುಡ್ ನಮ್ಮ ದೇಹಕ್ಕೆ ಆರೋಗ್ಯವಾಗಿರಲು ಅವಶ್ಯಕವಾದ ಜೀವಸತ್ವ, ಕೊಬ್ಬು, ಪ್ರೊಟೀನು, ಕಾರ್ಬೋಹೈಡ್ರೇಟುಗಳನ್ನು ಭರಿಸಿಕೊಟ್ಟು, ಪೋಷಕಾಂಶಗಳ ಕೊರತೆಯಿಂದುಂಟಾಗುವ ಸಮಸ್ಯೆಗಳನ್ನು ಪರಿಹರಿಸಿದರೆ ಅವನ್ನೇ ನ್ಯೂಟ್ರಾಸ್ಯುಟಿಕಲ್ ಎನ್ನುತ್ತೇವೆ.

Prevention is better than cure – ‘ರೋಗದ ಚಿಕಿತ್ಸೆಗಿಂತಲೂ ಅದರ ತಡೆಗಟ್ಟುವಿಕೆಯೇ ಉತ್ತಮ’ – ಎನ್ನುವ ಮಾತನ್ನು ಕೇಳಿದ್ದೀರಲ್ಲವೇ? ಈ ನ್ಯೂಟ್ರಾಸ್ಯುಟಿಕಲ್ ಎನ್ನುವ ಪೋಷಕಾಂಶಗಳು ನಮ್ಮ ದಿನನಿತ್ಯದ ಆಹಾರದಲ್ಲಿರಬೇಕಾದ ಪೋಷಕಾಂಶದ ಪ್ರಮಾಣವನ್ನು ಒದಗಿಸಿ, ದೀರ್ಘಕಾಲ ಆರೋಗ್ಯದಿಂದಿರಲು ಸಹಕಾರಿಯಾಗಿರುತ್ತದೆ; ಜೊತೆಗೆ ವೈದ್ಯಕೀಯವಾಗಿ ಮುಂದೆ ಆಗಬಹುದಾದ ಅವ್ಯವಸ್ಥೆಯನ್ನೂ ಇವು ತಡೆಗಟ್ಟಬಲ್ಲವು.

ರೋಗಬಂದಮೇಲೆ ಸೇವಿಸುವ ಔಷಧಗಳಿಗಿಂತ ನ್ಯುಟ್ರಾಸ್ಯುಟಿಕಲ್‌ಗಳು ಹೆಚ್ಚು ನೈಸರ್ಗಿಕ ಹಾಗೂ ಆರೋಗ್ಯಕರ. ವಿಶೇಷ ಕಾಳಜಿ ಅಥವಾ ಪೋಷಕಾಂಶದ ಅಗತ್ಯವಿರುವ ವಯಸ್ಸಾದವರಿಗೆ ಹೆಚ್ಚು ಸೂಕ್ತವೂ ಹೌದು. ವಯಸ್ಸಾದ ಮೇಲೆ ಕಾಡುವಂತಹ ಸಂಧಿವಾತ, ನಿದ್ರಾಸಮಸ್ಯೆ, ಜೀರ್ಣಸಮಸ್ಯೆ, ಮೂಳೆ ಸವೆತ, ರಕ್ತದೊತ್ತಡ, ಮನೋರೋಗದಂತಹ ಕಾಯಿಲೆಗಳನ್ನೂ ಗುಣಪಪಡಿಸುವ ಔಷಧಗಳಲ್ಲಿ ನ್ಯೂಟ್ರಾಸ್ಯುಟಿಕಲ್‌ಗಳದ್ದೇ ಹೆಚ್ಚಿನ ಕೊಡುಗೆಯಿದೆ. ಹಾಗಾಗಿಯೇ ಯುರೋಪಿಯನ್ ವೈದ್ಯಕೀಯ ಕಾನೂನಿನಲ್ಲಿ ನ್ಯೂಟ್ರಾಸ್ಯುಟಿಕಲ್ ಅನ್ನು ಔಷಧವರ್ಗಕ್ಕೇ ಸೇರಿಸಲಾಗಿದೆ. ಆದರೂ ಕೆಲವು ಸಂಸ್ಕರಣಾ ವಿಧಾನಗಳಿಂದಾಗಿ, ಅವನ್ನು ಸೇವಿಸಿದ ನಂತರದ ಅವುಗಳ ಜೈವಿಕ ಲಭ್ಯತೆ ಹಾಗೂ ಪರಿಣಾಮಕಾರಿತ್ವದ ಬಗ್ಗೆ ಸಂಶೋಧನೆಗಳು ನಡೆಯಬೇಕಿದೆ. ಹಾಗಾಗಿ ಔಷಧಗಳಂತೆ ಇವುಗಳಿಗೂ ಕಟ್ಟುನಿಟ್ಟಾದ ನಿಯಂತ್ರಣಗಳಿರಬೇಕಾದ್ದು ಅವಶ್ಯಕ.

ಸದ್ಯ ನ್ಯೂಟ್ರಾಸ್ಯುಟಿಕಲ್‌ಗಳು ಮಾತ್ರೆ, ಕ್ಯಾಪ್ಸೂಲ್, ಟ್ಯಾಬ್ಲೆಟ್, ಪುಡಿ ಅಥವಾ ದ್ರವರೂಪದಲ್ಲಿ ಸೇವಿಸಲು ಲಭ್ಯವಿದೆ. ಇತ್ತೀಚೆಗೆ ಹೊಸದಾದ ‘ಗಮ್ಮೀ’ ಎನ್ನುವ ಮೃದು ಕ್ಯಾಂಡಿರೂಪದಲ್ಲಿ ನ್ಯೂಟ್ರಾಸ್ಯುಟಿಕಲ್‌ಗಳು ಮಾರುಕಟ್ಟೆಗೆ ಬಂದಿವೆ. ಬೇರೆಲ್ಲಾ ಬಗೆಗಿಂತ ಗಮ್ಮೀ ರೂಪದ ನ್ಯೂಟ್ರಾಸ್ಯುಟಿಕಲ್ ಹಿಪೋಕ್ರೇಟಸ್‌ನ ಹೇಳಿಕೆಗೆ ಹೇಳಿಮಾಡಿಸಿದ ಖಾದ್ಯವಾಗುತ್ತದೆ. ಇತ್ತ ಔಷಧವೂ ಅನ್ನಿಸದ, ಅತ್ತ ಸೇವಿಸಿದಾಗ ವಾಕರಿಸುವಂತಹ ಕಹಿಸ್ವಾದವೂ ಇಲ್ಲದ ರುಚಿಯಾದ, ಸ್ವಾದಭರಿತ ಗಮ್ಮೀ ನಮ್ಮ ಪೋಷಕಾಂಶದ ಅವಶ್ಯಕತೆಯನ್ನು ಪೂರೈಸುತ್ತದೆ ಹಾಗೂ ಆರೋಗ್ಯದ ಕಾಳಜಿಯನ್ನೂ ವಹಿಸುತ್ತದೆ. ಮಕ್ಕಳಂತೂ ಚಾಕೋಲೇಟು ತಿನ್ನುವಷ್ಟೆ ಸಲೀಸಾಗಿ, ಖುಷಿಯಾಗಿ ಔಷಧವನ್ನು ಸೇವಿಸಬಿಡಬಹುದು.

ಕೋವಿಡ್ ವೈರಸ್ಸಿನ ದಾಳಿಯ ನಂತರ ದೈಹಿಕ ಸದೃಢತೆ, ಆರೋಗ್ಯದ ಪ್ರಾಮುಖ್ಯದ ಬಗ್ಗೆ ಜನರು ಸಾಕಷ್ಟು ಅರಿತಿದ್ದಾರೆ. ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯತ್ತ ಮತ್ತೆ ಪ್ರಾಶಸ್ತ್ಯ ನೀಡಲಾರಂಭಿಸಿದ್ದಾರೆ. ಆರೋಗ್ಯದಿಂದಿರಲು ವ್ಯಾಯಾಮದಷ್ಟೆ ಉತ್ತಮ ಆಹಾರ ಪದ್ಧತಿಯೂ ಮುಖ್ಯ ಎಂದು ಕೋವಿಡ್ ಮನಗಾಣಿಸಿದೆ. ಕೋವಿಡ್ ನಂತರದ ಕಾಲವು ಆರೋಗ್ಯ ನಿರ್ವಹಣೆಗಾಗಿ ಪರ್ಯಾಯವನ್ನು ಹುಡುಕಲು ಕಲಿಸಿದೆ. ಫಲವಾಗಿ ನ್ಯೂಟ್ರಾಸ್ಯುಟಿಕಲ್ ಅಥವಾ ಪೋಷಣಖಾದ್ಯಭರಿತ ಆಹಾರಪದಾರ್ಥಗಳಿಗಾಗಿ ಬೇಡಿಕೆ ಈಗ ಹೆಚ್ಚಿದೆ. ಹಾಗಾಗಿ ಸಂಸ್ಕರಿಸಿದ ಆಹಾರ ಮತ್ತು ಜಂಕ್ ಫುಡ್‌ನಿಂದ ದೂರ ಸರಿದು ಆರೋಗ್ಯ ನೀಡುವ ನ್ಯೂಟ್ರಾಸ್ಯುಟಿಕಲ್ ಉತ್ಪನ್ನಗಳನ್ನು ಜನರು ಸೇವಿಸಲು ಆರಂಭಿಸಿದ್ದಾರೆ. ಹಸಿರುಕ್ರಾಂತಿ, ಕ್ಷೀರಕ್ರಾಂತಿ ಎನ್ನುವಂತೆ ಇದು ನ್ಯೂಟ್ರಾಸ್ಯುಟಿಕಲ್ ಕ್ರಾಂತಿಯ ಸಂದರ್ಭ! ❖



# ಯೋಗಕ್ಕೆ ಕೆಲವು ಆ್ಯಪ್‌ಗಳು

ಯೋಗವನ್ನು ಮಾಡಲು ನಮ್ಮನ್ನು ಪ್ರಚೋದಿಸುವ, ಗುರಿ ಇರಿಸಿಕೊಂಡು ಯೋಗಾಭ್ಯಾಸವನ್ನು ಮಾಡಲು ಉತ್ತೇಜಿಸುವ, ಈ ಮೂಲಕ ದೇಹಕ್ಕೆ ವ್ಯಾಯಾಮವನ್ನು ನೀಡಿ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ನೆರವಾಗುವ ಸಾಕಷ್ಟು ಆ್ಯಪ್‌ಗಳು ಆ್ಯಪಲ್ ಐಫೋನ್ ಮತ್ತು ಸ್ಮಾರ್ಟ್‌ವಾಚ್‌ಗಳ ಮೂಲಕ ಲಭ್ಯ, ಆಂಡ್ರಾಯ್ಡ್ ಫೋನ್‌ಗಳಲ್ಲಿ ಕೂಡ ಲಭ್ಯ. ಅಂಥ ಕೆಲವು ಆ್ಯಪ್‌ಗಳ ಬಗ್ಗೆ ಮಾಹಿತಿ ಇಲ್ಲಿದೆ...

**ಅವಿನಾಶ್ ಬಿ.**

**ಜಗತ್ತಿಗೆ** ಭಾರತದ ಕೊಡುಗೆ ಯೋಗಾಸನಗಳು. ನಮ್ಮ ಅವಸರದ ಮತ್ತು ತಂತ್ರಜ್ಞಾನ ಆಧರಿತ ಈ ಯುಗದಲ್ಲಿ ನಾವು ಕೇವಲ ಮನಸ್ಸಿಗೆ/ಬುದ್ಧಿಗೆ ಕೆಲಸ ಕೊಡುತ್ತಿದ್ದೇವೆ. ಆದರೆ ದೇಹಕ್ಕೆ ಕೆಲಸವಿಲ್ಲದೆ ಅಥವಾ ವ್ಯಾಯಾಮವಿಲ್ಲದೆ, ನಮ್ಮನ್ನು ಆರೋಗ್ಯ ಸಮಸ್ಯೆಗಳು ಕಾಡುತ್ತವೆ. ನಾವು ಸದಾ ಅವಲಂಬಿಸಿರುವ ಮೊಬೈಲ್ ಫೋನ್ ಮೂಲಕವೇ ಯೋಗವನ್ನು ಮಾಡಲು ಪ್ರಚೋದಿಸುವ, ಆ ಮೂಲಕ ನಮ್ಮ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ನೆರವಾಗುವ ಸಾಕಷ್ಟು ಆ್ಯಪ್‌ಗಳು ಆ್ಯಪಲ್ ಐಫೋನ್ ಮತ್ತು ಸ್ಮಾರ್ಟ್‌ವಾಚ್‌ಗಳ ಮೂಲಕ ಲಭ್ಯ. ಆಂಡ್ರಾಯ್ಡ್ ಫೋನ್‌ಗಳಲ್ಲಿ ಕೂಡ ಹಲವು ಆ್ಯಪ್‌ಗಳು ಲಭ್ಯ ಇವೆ. ಯೋಗ – ಎಂದು ಪ್ಲೇಸ್ಟೋರ್ ಅಥವಾ ಆ್ಯಪ್ ಸ್ಟೋರ್‌ಗಳಲ್ಲಿ ಹುಡುಕಿದರೆ ಇನ್ನೂ ಸಾಕಷ್ಟು ಸಿಗುತ್ತವೆ. ಯೋಗಾಭ್ಯಾಸದ ಪ್ರಮುಖ ಕೆಲವು ಆ್ಯಪ್‌ಗಳು ಇಲ್ಲಿವೆ.

### ಪ್ರಯೋಗ

ಯೋಗಾಭ್ಯಾಸವನ್ನು ಮಾಡುವುದು ಹೇಗೆ ಎಂದು ನೇರವಾಗಿ ತಿಳಿಸಿಕೊಡುತ್ತದೆ, ಈ ಪ್ರಯೋಗ ಎಂಬ ಆ್ಯಪ್. ಕೈಗೆ ಕಟ್ಟಿಕೊಳ್ಳುವ ಆ್ಯಪಲ್ ವಾಚ್‌ನಲ್ಲಿ ಆಡಿಯೊ ಮೂಲಕ ಇದು ಮಾರ್ಗದರ್ಶನ ನೀಡುತ್ತದೆ. ಯಂತ್ರ ಕಲಿಕಾ ತಂತ್ರಜ್ಞಾನ (ಎಂಎಲ್) ಹಾಗೂ ನಮ್ಮ ದೈಹಿಕ ಚಲನವಲನ (ವಾಚ್ ಮೂಲಕ) ಆಧರಿಸಿ ಪ್ರಯೋಗ ಆ್ಯಪ್, ನಿರ್ದಿಷ್ಟ ಆಸನವನ್ನು ಸರಿಯಾಗಿ ಮಾಡಲಾಗಿದೆಯೇ ಎಂದು ತಿಳಿದು, ತಪ್ಪಾಗಿದ್ದರೆ ಸರಿಪಡಿಸಲು ಆ ಕ್ಷಣವೇ ತಿಳಿಸುತ್ತದೆ.

### ಕಲ್ಟ್ ಫಿಟ್

cult.fit ಎಂಬುದು ಆರೋಗ್ಯ ಮತ್ತು ಫಿಟ್ನೆಸ್ ಆ್ಯಪ್. ಇದು ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೂ ಪೂರಕವಾದ ಸಲಹೆಗಳನ್ನು ನೀಡುತ್ತದೆ. ಯೋಗ ಮತ್ತು ಧ್ಯಾನದ ಮೂಲಕ ದೈಹಿಕ ಹಾಗೂ ಮಾನಸಿಕ ಕ್ಷೇಮಕ್ಕೆ ನೆರವಾಗುತ್ತದೆ. ತೂಕ ಇಳಿಸುವುದು, ರಕ್ತನಾಳ ಸಂಬಂಧಿತ ದೋಷ ನಿವಾರಣೆ, ಬಲವರ್ಧನೆ, ದೇಹಕ್ಷಮತೆ ವರ್ಧನೆ ಮುಂತಾದ ನಿರ್ದಿಷ್ಟ ಗುರಿಗಳನ್ನು ಇರಿಸಿಕೊಂಡು ನಿರ್ದಿಷ್ಟ ವ್ಯಾಯಾಮ ಮಾಡುವಂತೆ ಮತ್ತು ಗುರಿ ಸಾಧಿಸುವಂತೆ ಇದು ಪ್ರೇರೇಪಣೆ ನೀಡುತ್ತಾ ಹೋಗುತ್ತದೆ.

### ಆಸನ ರೆಬೆಲ್

ನಮ್ಮ ಆಧುನಿಕ ಜೀವನಶೈಲಿಯ ನಡುವೆ ದೈಹಿಕ-ಮಾನಸಿಕ ಕ್ಷಮತೆಗಾಗಿ ಹಲವು ವಿಧಾನಗಳನ್ನು ಆಸನ-ರೆಬೆಲ್ ಆ್ಯಪ್ ತಿಳಿಸಿಕೊಡುತ್ತದೆ. ತೂಕ ಇಳಿಸುವುದಕ್ಕೆ ಮತ್ತು ದೇಹದ ಸಾಮರ್ಥ್ಯ ವರ್ಧನೆಗೆ ಸಂಬಂಧಿಸಿ ನಿರ್ದಿಷ್ಟ ಗುರಿಗಳನ್ನು ಇರಿಸಿಕೊಂಡು, ದೈಹಿಕ-ಮಾನಸಿಕ ಸ್ವಾಸ್ಥ್ಯ ವರ್ಧನೆಗೆ ಪೂರಕವಾಗಿರುವ ಆಸನಗಳು ಇಲ್ಲಿವೆ.

### ಅರ್ಬನ್ ರಿಲೀಫ್

ಅರ್ಬನ್ ಯೋಗಿ ಮೂಲಕ ಲಭ್ಯವಾಗುವ ಈ ಆ್ಯಪ್‌ನಲ್ಲಿ, ವ್ಯಾಯಾಮದ ದೈನಿಕ ಗುರಿಸಾಧನೆಗೆ ಪ್ರೇರೇಪಣೆ ನೀಡುವುದರ ಜೊತೆಗೆ ಸುಖನಿದ್ರೆಗೆ ಸಹಕರಿಸುವ ತರಬೇತಿಯೂ ದೊರೆಯುತ್ತದೆ.

### ಫೇಸ್ ಯೋಗಿ

ಮುಖದ ನಿರ್ದಿಷ್ಟ ಭಾಗಗಳಿಗೆ ವ್ಯಾಯಾಮ ನೀಡುವ ಮೂಲಕ ಮುಖದ ಸೌಂದರ್ಯವೃದ್ಧಿಗೆ ನೆರವಾಗುತ್ತದೆ ಈ ಫೇಸ್ ಯೋಗಿ ಎಂಬ ಆ್ಯಪ್. ಏಳು ದಿನಗಳ ಫೇಸ್ ಫಿಟ್ನೆಸ್ (ಮುಖದ ಕ್ಷಮತೆ) ಪ್ರೋಗ್ರಾಂ ಇದರಲ್ಲಿದ್ದು, ಮುಖದ ಚರ್ಮದ ಸ್ಥಿತಿಯನ್ನು ಸುಧಾರಿಸಲು ನೆರವಾಗುತ್ತದೆ.

ಇದರ ಹೊರತಾಗಿ, ಮನಸ್ಸನ್ನು ಶಾಂತವಾಗಿಡಲು, ಸುಖನಿದ್ರೆಗೆ ಹಾಗೂ ಧ್ಯಾನಕ್ಕೆ ಸಹಕರಿಸಲು ಕಾಮ್ (Calm) ಹಾಗೂ ಹೆಡ್‌ಸ್ಪೇಸ್ ಎಂಬ ಆ್ಯಪ್‌ಗಳಿವೆ. ಈ ಎಲ್ಲ ಆ್ಯಪ್‌ಗಳಲ್ಲಿ ದೊರೆಯುವ ಸೂಚನೆಗಳನ್ನು ಸರಿಯಾಗಿ ಪಾಲಿಸಬೇಕಾಗುತ್ತದೆ. ಯಾವುದೂ ಅತಿಯಾಗಲೂಬಾರದು ಎಂಬುದು ಗಮನದಲ್ಲಿರಬೇಕಾಗುತ್ತದೆ. **ಗಮನಿಸಿ:** ಆರೋಗ್ಯಸಮಸ್ಯೆ ಇದ್ದವರು ಈ ಆ್ಯಪ್‌ಗಳ ಆಧಾರದಲ್ಲಿ ಯಾವುದೇ ವ್ಯಾಯಾಮ ಮಾಡುವ ಮೊದಲು ವೈದ್ಯರ ಸಲಹೆ ಪಡೆಯುವುದು ಸೂಕ್ತ. ❖

### ಸಮಾಜದಲ್ಲಿ ಅಶಾಂತಿ ಸೃಷ್ಟಿಸುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಸಜ್ಜು

# ಸುಳ್ಳು ಸುದ್ದಿಗೆ ಕಡಿವಾಣ: ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸುವವರ ಹಾವಳಿ ಮಿತಿ ಮೀರಿದೆ. ಇಂತಹ ಸುಳ್ಳು ಸುದ್ದಿಗಳ ಮೂಲಗಳನ್ನು ಪತ್ತೆ ಹಚ್ಚಿ ಅವುಗಳನ್ನು ಹರಡುತ್ತಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಂಗಳವಾರ ತಮ್ಮನ್ನು ಭೇಟಿ ಮಾಡಿದ ಗೃಹ ಸಚಿವ ಜಿ.ಪರಮೇಶ್ವರ ಅವರ ಜತೆ ಈ ಕುರಿತು ವಿವರವಾಗಿ ಚರ್ಚೆ ನಡೆಸಿದರು.

2013ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೂ ಸುಳ್ಳು ಸುದ್ದಿ ಹಾವಳಿ ಹೆಚ್ಚಾಗಿತ್ತು. ಈ ಬಾರಿ ಕೂಡಾ ಇದೇ ತಂತ್ರವನ್ನು ರಾಜಕೀಯ




ವಿರೋಧಿಗಳು ಅನುಸರಿಸುತ್ತಿದ್ದಾರೆ. ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವುದರಿಂದ ಮಾಮೂಲಿಯಂತೆ ಸುಳ್ಳು ಸುದ್ದಿ ಹೆಚ್ಚೆಚ್ಚು ಸೃಷ್ಟಿಸಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ. ಆರಂಭದಲ್ಲೇ ಅವುಗಳನ್ನು ಪತ್ತೆ ಮಾಡಿ ಬೇರು ಸಮೇತ ಕತ್ತರಿಸುವ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.

'ಗೋಮಾಂಸ ಸಾಗಿಸುತ್ತಿದ್ದಾರೆ, ಮಕ್ಕಳ ಕಳ್ಳರು ಬಂದಿದ್ದಾರೆ ಎಂದೆಲ್ಲಾ ಸುಳ್ಳು ಸುದ್ದಿಗಳನ್ನು ಹರಡಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಪ್ರಯತ್ನ ಮಾಡಿದ್ದರು. ಈ ವಿಧಾನಸಭಾ ಚುನಾವಣೆಯಲ್ಲಿ ಜನತೆ ಬಿಜೆಪಿ ಮತ್ತು ಸಂಘ ಪರಿವಾರವನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ದೇಶದ ಪ್ರಜಾಪ್ರಭುತ್ವದ ಉಳಿವಿಗೆ ಮಹತ್ವದಾಗಿರುವ 2024ರ ಲೋಕಸಭಾ ಚುನಾವಣೆಗೆ ಸಜ್ಜಾಗುತ್ತಿರುವ ಹೊತ್ತಿನಲ್ಲಿ ಸುಳ್ಳು ಸುದ್ದಿ, ವದಂತಿ ಮೂಲಕ ಗಲಭೆ ಸೃಷ್ಟಿಸುವ ಪ್ರಯತ್ನಗಳು ನಡೆಯಬಹುದು' ಎಂದೂ ಅವರು ಹೇಳಿದ್ದಾರೆ.

### 'ಫ್ಯಾಕ್ಟ್ ಚೆಕ್' ಮತ್ತೆ ಆರಂಭಿಸಲು ಸೂಚನೆ

ಈ ಹಿಂದೆ ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ಮತ್ತು ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸುಳ್ಳು ಸುದ್ದಿಗಳನ್ನು ಪತ್ತೆ ಮಾಡುವ ಒಂದು ತಂಡ ಕೆಲಸ ಮಾಡುತ್ತಿತ್ತು. ತಂಡವು 'ಫ್ಯಾಕ್ಟ್ ಚೆಕ್' ಹೆಸರಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡುತ್ತಿತ್ತು. ಬಿಜೆಪಿ ಸರ್ಕಾರ ಫ್ಯಾಕ್ಟ್ ಚೆಕ್ ಮಾಡುವುದನ್ನು ಬಂದ್ ಮಾಡಿಸಿತು. ಇದನ್ನು ಮತ್ತೆ ಆರಂಭಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಸೈಬರ್ ಪೊಲೀಸರು ಸುಳ್ಳು ಸುದ್ದಿಗಳನ್ನು ಪತ್ತೆ ಮಾಡಲು ಸರ್ವ ಸನ್ನದ್ಧವಾಗಿ ಕೆಲಸ ಮಾಡಬೇಕು. ಪ್ರತಿ ತಿಂಗಳೂ ಈ ಬಗ್ಗೆ ವರದಿಯನ್ನು ನೀಡಬೇಕು ಎಂದೂ ಅವರು ಅಧಿಕಾರಿಗಳಿಗೆ ತಿಳಿಸಿದರು.

### 'ಫೇಕ್ ನ್ಯೂಸ್' ಹಬ್ಬಿಸಿದ ಸಚಿವರ ವಿರುದ್ಧ ಕ್ರಮವೇನು?– ಬಸನಗೌಡ ಪಾಟೀಲ ಯತ್ನಾಳ

**ಬೆಂಗಳೂರು:** 'ರಾಜ್ಯ ಸರ್ಕಾರದ ಸರ್ವರ್ ಅನ್ನು ಕೇಂದ್ರ ಸರ್ಕಾರ ಹ್ಯಾಕ್ ಮಾಡಿದೆ ಎಂದು ಸಚಿವರೊಬ್ಬರು ಸುಳ್ಳು ಸುದ್ದಿ (ಫೇಕ್ ನ್ಯೂಸ್) ಹಬ್ಬಿಸಿದ್ದಾರೆ. ಇವರ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತೀರಿ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಸಚಿವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಿರಾ ಎಂದು ಕೇಳಿದ್ದಾರೆ. 'ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಸಿದ್ದರಾಮಯ್ಯ ಹೇಳಿಕೆ ನೀಡಿದ್ದಾರೆ. ಇದೀಗ ಸಚಿವರೇ ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಈ ವಿಷಯವನ್ನು ಒಂದೋ ಸಚಿವರು ಅಥವಾ ಸರ್ಕಾರ ಸಾಬೀತು ಮಾಡಬೇಕು. ಪೊಳ್ಳು ಭರವಸೆಗಳನ್ನು ನೀಡಿ, ಈಡೇರಿಸಲಾಗದೆ ಈಗ ದಿನಕ್ಕೊಂದು ನೆಪ, ಹೊಸ ಕಥೆ ಹೇಳುವುದು ಕರ್ನಾಟಕ ಸರ್ಕಾರಕ್ಕೆ ರೂಢಿಯಾಗಿದೆ' ಎಂದು ಯತ್ನಾಳ ಹರಿಹಾಯ್ದಿದ್ದಾರೆ.

## ಮೇಲ್ಮನೆ ಚುನಾವಣೆ: ಮೂವರ ಅವಿರೋಧ ಆಯ್ಕೆ ಖಚಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಪರಿಷತ್ತಿನ ಮೂರು ಸ್ಥಾನಗಳ ಉಪಚುನಾವಣೆಗೆ ಕಾಂಗ್ರೆಸ್‌ನಿಂದ ಜಗದೀಶ ಶೆಟ್ಟರ್, ಎನ್.ಎಸ್,ಬೋಸರಾಜು ಮತ್ತು ತಿಪ್ಪಣ್ಣಪ್ಪ ಕಮಕನೂರ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದ್ದು, ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸದೇ ಇರುವ ಕಾರಣ ಮೂವರೂ ಅವಿರೋಧವಾಗಿ ಆಯ್ಕೆಯಾಗುವುದು ಖಚಿತವಾಗಿದೆ.

ಈ ಮೂವರ ನಾಮಪತ್ರ ಸಲ್ಲಿಕೆಯ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಇತರ ಸಚಿವರು ಹಾಜರಿದ್ದರು.

ಕಳೆದ ವಿಧಾನಸಭಾ ಚುನಾವಣೆಯ ವೇಳೆ ಬಿಜೆಪಿಯಲ್ಲಿ ಟಿಕೆಟ್ ಸಿಗದೇ ಕಾಂಗ್ರೆಸ್ ಸೇರಿದ ಜಗದೀಶ ಶೆಟ್ಟರ್ ಅವರು ಹುಬ್ಬಳ್ಳಿ–ಧಾರವಾಡ ಕೇಂದ್ರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿದ್ದರು. ಸೋತರೂ ಕೈಬಿಡುವುದಿಲ್ಲ ಎಂಬ ಸಂದೇಶವನ್ನು ರವಾನಿಸಲು ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಮಾಡಲು ಕಾಂಗ್ರೆಸ್ ತೀರ್ಮಾನಿಸಿದೆ.

ಎನ್.ಎಸ್.ಬೋಸರಾಜು ಅವರು ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದು, ವಿಧಾನಪರಿಷತ್‌ಗೆ ಟಿಕೆಟ್ ನೀಡಲಾಗಿದೆ. ಚುನಾವಣೆಯಲ್ಲಿ ಸೋತಿದ್ದ ಬಾಬುರಾವ್ ಚಿಂಚನಸೂರ ಅವರು, ಕೋಲಿ ಸಮಾಜದ ಪ್ರಾತಿನಿಧ್ಯದಡಿ ಆಯ್ಕೆ ಬಯಸಿದ್ದರು. ಆದರೆ, ಅವರ ಬದಲು ಅದೇ ಸಮುದಾಯವನ್ನು ಪ್ರತಿನಿಧಿಸುವ ತಿಪ್ಪಣ್ಣಪ್ಪ ಅವರನ್ನು ಮೇಲ್ಮನೆಗೆ ಕಳುಹಿಸಲು ಪಕ್ಷ ನಿರ್ಧರಿಸಿದೆ. ಇವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಆಪ್ತ ಬಣದಲ್ಲಿ ಇದ್ದಾರೆ.




ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿದರು – ಪ್ರಜಾವಾಣಿ ಚಿತ್ರ

## 'ಅಕ್ಕಿ'ಗಾಗಿ ಬೀದಿಗಿಳಿದ ಸಚಿವರು

ಒಂದನೇ ಪುಟದಿಂದ

'ಅಕ್ಕಿ ಬದಲಿಗೆ ಜೋಳ, ರಾಗಿ, ಗೋಧಿಯನ್ನೇ ನೀಡುವಂತೆ ಶಾಸಕರು ಹಾಗೂ ಜನರು ಒತ್ತಾಯಿಸುತ್ತಿದ್ದಾರೆ. ಪರ್ಯಾಯವಾಗಿ ಏನು ವಿತರಿಸಬಹುದು ಎನ್ನುವ ಬಗ್ಗೆಯೂ ಯೋಚಿಸಲಾಗುತ್ತಿದೆ' ಎಂದು ಹೇಳಿದರು.

'10 ಕೆ.ಜಿಯಲ್ಲಿ ಒಂದು ಕಾಳು ಕಡಿಮೆಯಾದರೂ ಅಕ್ಕಿ ಸ್ವೀಕರಿಸಬೇಡಿ ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಆದರೆ, ಕೇಂದ್ರವು ಪ್ರತಿಯೊಬ್ಬರ ಖಾತೆಗೆ ₹ 15 ಲಕ್ಷ ಹಾಕಲಾಗುವುದು ಎಂದು ಭರವಸೆ ನೀಡಿತ್ತು. ಅದನ್ನು ಇನ್ನೂ ಯಾವ ಕಾರಣಕ್ಕೆ ಹಾಕಿಲ್ಲ? ಉದ್ಯೋಗ ಸೃಷ್ಟಿಯ ವಿಚಾರ ಎಲ್ಲಿಗೆ ಬಂತು' ಎಂದು ಪ್ರಶ್ನಿಸಿದ ಅವರು, 'ಕೇಂದ್ರದ ವಿರುದ್ಧವೇ ರಾಜ್ಯದ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಲಿ' ಎಂದು ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಅವರು ಮಾತನಾಡಿ, 'ಕೇಂದ್ರವು ಬಡವರ ಹೊಟ್ಟೆ ಮೇಲೆ ಹೊಡೆಯುವ ಕೆಲಸ ಮಾಡುತ್ತಿದೆ. ಎಷ್ಟೇ ತೊಂದರೆ ಕೊಡಲಿ. ಗ್ಯಾರಂಟಿಗಳನ್ನು ಈಡೇರಿಸುತ್ತೇವೆ' ಎಂದು ಹೇಳಿದರು.

ಸಚಿವ ರಾಮಲಿಂಗಾರೆಡ್ಡಿ, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಪುಷ್ಪಾ ಅಮರನಾಥ್, ರಾಣಿ ಸತೀಶ್, ಜಲಜಾ ನಾಯಕ್ ಇದ್ದರು.

# 'ತಡವಾದರೂ ಅಕ್ಕಿ ಕೊಟ್ಟೇ ಕೊಡುತ್ತೇವೆ'

### ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳದಿಂದಲೂ ಖರೀದಿಗೆ ಚಿಂತನೆ– ಮುಖ್ಯಮಂತ್ರಿ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ ಅಕ್ಕಿಯನ್ನು ತಡವಾದರೂ ಸರಿ ಕೊಟ್ಟೇ ಕೊಡುತ್ತೇವೆ. ಯಾವುದೇ ಸಂಶಯ ಬೇಡ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಶ್ಚಿಮ ಬಂಗಾಳ ಮತ್ತು ಆಂಧ್ರಪ್ರದೇಶದಿಂದ ಅಕ್ಕಿ ಖರೀದಿಸುವ ಬಗ್ಗೆಯೂ ಚರ್ಚೆ ನಡೆದಿದೆ. ಛತ್ತೀಸಗಢದಿಂದ ಅಕ್ಕಿ ಖರೀದಿಸಿದರೆ ಸಾಗಾಣಿಕೆ ದರವೂ ಸೇರಿ ಎಫ್‌ಸಿಐಗಿಂತಲೂ ದರ ಹೆಚ್ಚಾಗುತ್ತದೆ ಎಂದು ಹೇಳಿದರು.

'ಕೇಂದ್ರ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ. ಇವರಿಗೆ ಮಾನವೀಯತೆ ಇದೆಯೇ? ಕೇಂದ್ರ ದುರುದ್ದೇಶದಿಂದ ಈ ಕೆಲಸ ಮಾಡಿದೆ. ನಾವು ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ ಎಂದು ಪ್ರಧಾನಿ ಮೋದಿ ಪದೇ ಪದೇ ಹೇಳುತ್ತಾರೆ. ಇದೇ ಇವರ ಸಹಕಾರಿ ಒಕ್ಕೂಟ ವ್ಯವಸ್ಥೆಯೇ' ಎಂದು ಪ್ರಶ್ನಿಸಿದರು.

'ಮಾತೆತ್ತಿದರೆ ಆಹಾರ ಭದ್ರತಾ ಕಾಯ್ದೆ ಎನ್ನುವ ಕೇಂದ್ರ ಸರ್ಕಾರ, ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದಿದ್ದು ಯುಪಿಎ ಸರ್ಕಾರದಲ್ಲಿ ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಎನ್ನುವುದನ್ನು ಮರೆಯುತ್ತಿದೆ. ಈ ಕಾಯ್ದೆ ಬಂದಿದ್ದರಿಂದಲೇ 5 ಕೆ.ಜಿ ಅಕ್ಕಿ ಕೊಡುವುದು ಮುಂದುವರೆದಿದೆ. ಈಗ ಮೋದಿ ಸರ್ಕಾರ ಬಡವರ ವಿರೋಧಿ ಧೋರಣೆ ತಾಳಿದೆ' ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರದ ಮೂರು ಸಂಸ್ಥೆಗಳಾದ ಎನ್‌ಸಿಸಿಎಫ್, ನಾಫೆಡ್ ಹಾಗೂ ಕೇಂದ್ರೀಯ ಭಂಡಾರಗಳಿಂದ ಅಕ್ಕಿ ಖರೀದಿಗೆ ದರ ಪಟ್ಟಿ ಕೇಳಲಾಗಿದೆ ಎಂದರು

### ಮುನಿಯಪ್ಪ ದೆಹಲಿಗೆ

'ಅನ್ನ ಭಾಗ್ಯ' ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಅಕ್ಕಿಯನ್ನು ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಮೂಲಕ ಪೂರೈಸುವಂತೆ ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಿಗೆ ಮನವಿ ಸಲ್ಲಿಸುವುದಕ್ಕಾಗಿ ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರು ಮಂಗಳವಾರ ರಾತ್ರಿ ದೆಹಲಿಗೆ ತೆರಳಿದರು.

ಅದಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಕ್ಕಿ ಖರೀದಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವರನ್ನು ಭೇಟಿ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ದೇಶನ ನೀಡಿದ್ದಾರೆ. ಬುಧವಾರವೇ ಕೇಂದ್ರ ಸಚಿವರನ್ನು ಭೇಟಿಮಾಡಿ ಅಕ್ಕಿ ಪೂರೈಕೆಗೆ ಬೇಡಿಕೆ ಸಲ್ಲಿಸುತ್ತೇನೆ' ಎಂದರು.

### ಎಪಿಎಂಸಿ ಕಾಯ್ದೆಯಿಂದ ಅಕ್ಕಿ ಗಿರಣಿಗಳನ್ನು ಹೊರಗಿಡಿ: ರಾಜ್ಯ ಅಕ್ಕಿ ಗಿರಣಿದಾರರ ಸಂಘ

**ಬೆಂಗಳೂರು:** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾಯ್ದೆ ವ್ಯಾಪ್ತಿಯಿಂದ ಅಕ್ಕಿ ಗಿರಣಿಗಳನ್ನು ಹೊರಗಿಡುವಂತೆ ರಾಜ್ಯ ಅಕ್ಕಿ ಗಿರಣಿದಾರರ ಸಂಘ ಆಗ್ರಹಿಸಿದೆ.

'ಎಪಿಎಂಸಿ ಕಾಯ್ದೆಗೆ ಹಿಂದಿನ ಸರ್ಕಾರ ತಂದಿರುವ ತಿದ್ದುಪಡಿಗಳನ್ನು ಕೈಬಿಡಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದರೆ, ತಿದ್ದುಪಡಿಯಲ್ಲಿ ಪುನಃ ಅಕ್ಕಿ ಗಿರಣಿಗಳನ್ನು ಎಪಿಎಂಸಿ ಕಾಯ್ದೆಯ ವ್ಯಾಪ್ತಿಗೆ ಸೇರಿಸಿದರೆ ತೊಂದರೆ ಎದುರಾಗುತ್ತದೆ' ಎಂದು ಸಂಘದ ಅಧ್ಯಕ್ಷ ಪರಣ್ಣ ಮುನವಳ್ಳಿ ಮತ್ತು ಕಾರ್ಯದರ್ಶಿ ಎಸ್. ಶಿವಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಅವೈಜ್ಞಾನಿಕವಾಗಿ ವಿದ್ಯುತ್ ದರ ಏರಿಕೆ ಮಾಡಿರುವುದರಿಂದ ಅಕ್ಕಿ ಗಿರಣಿಗಳಿಗೆ ನಷ್ಟ ಉಂಟಾಗುತ್ತಿದೆ. ಎರಡು ವರ್ಷಗಳಿಂದ 'ಕಸ್ಟಮ್ ಮಿಲ್ಲಿಂಗ್ ರೇಟ್' (ಸಿಎಂಆರ್) ವ್ಯವಸ್ಥೆ ಸ್ಥಗಿತಗೊಂಡಿದೆ. ಬಾಕಿ ಕೂಡ ಪಾವತಿಯಾಗಿಲ್ಲ. ಸಿಎಂಆರ್ ಕೇಂದ್ರ ವ್ಯವಸ್ಥೆಯನ್ನು ರದ್ದುಗೊಳಿಸಿರುವುದರಿಂದ ಗಿರಣಿಗಳಲ್ಲಿ ಭತ್ತದ ಸಂಗ್ರಹ ಆಗುತ್ತಿಲ್ಲ. ಈ ವ್ಯವಸ್ಥೆಯನ್ನು ಪುನಃ ಜಾರಿಗೆ ತರಬೇಕು' ಎಂದು ಆಗ್ರಹಿಸಿದ್ದಾರೆ.

## ಬೆಂಗಳೂರು– ಮೈಸೂರು ದಶಪಥ ಹೆದ್ದಾರಿಯಲ್ಲಿ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

**ಮದ್ದೂರು (ಮಂಡ್ಯ ಜಿಲ್ಲೆ):** ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯಲ್ಲಿ ತಾಲ್ಲೂಕಿನ ಗೆಜ್ಜಲಗೆರೆ ಬಳಿ ಮಂಗಳವಾರ ಮಾರುತಿ ಸ್ವಿಫ್ಟ್ ಹಾಗೂ ಟಾಟಾ ನೆಕ್ಸಾನ್ ಕಾರು ನಡುವೆ ನಡೆದ ಭೀಕರ ಅಪಘಾತದಲ್ಲಿ ಮಾರುತಿ ಸ್ವಿಫ್ಟ್‌ನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಉತ್ತರ ಪ್ರದೇಶದ ನೀರಜ್ ಕುಮಾರ್ (55), ಅವರ ಪತ್ನಿ ಸೆಲ್ವಿ (50), ಮಂಡ್ಯದ ಕಾರು ಚಾಲಕ ನಿರಂಜನ್ (35) ಮೃತರು. ನೀರಜ್ ಕುಮಾರ್ ಅವರ ಪುತ್ರ ಶ್ರೀವಾತ್ಸವ್, ಟಾಟಾ ನೆಕ್ಸಾನ್ ಕಾರ್‌ನಲ್ಲಿದ್ದ ಪತಿ–ಪತ್ನಿ ತೀವ್ರವಾಗಿ ಗಾಯಗೊಂಡಿದ್ದು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಶ್ರೀವಾತ್ಸವ್, ಪೋಷಕರೊಂದಿಗೆ ಬಾಡಿಗೆ ಕಾರಿನಲ್ಲಿ ಮಡಿಕೇರಿ ಪ್ರವಾಸಕ್ಕೆ ತೆರಳುತ್ತಿದ್ದರು. ನೀರಜ್ ಕುಮಾರ್ ಉತ್ತರ ಪ್ರದೇಶ ಸರ್ಕಾರದ ತರಬೇತಿ ಹಾಗೂ ನೇಮಕಾತಿ ವಿಭಾಗದ ಹೆಚ್ಚುವರಿ ನಿರ್ದೇಶಕರಾಗಿದ್ದರು.

ಮಂಗಳವಾರ ಬೆಳಿಗ್ಗೆಯಿಂದಲೂ ಸೋನೆ ಮಳೆ ಸುರಿಯುತ್ತಿತ್ತು, ರಸ್ತೆಯಲ್ಲಿ ನೀರು ನಿಂತಿದ್ದರಿಂದ ರಸ್ತೆ ಜಾರುತಿತ್ತು. ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ಕಡೆಗೆ ವೇಗವಾಗಿ ತೆರಳುತ್ತಿದ್ದ ನೆಕ್ಸಾನ್ ಕಾರು ಮೊದಲು ಡಿವೈಡರ್‌ಗೆ ಡಿಕ್ಕಿಯಾಗಿ, ನಂತರ ಪಕ್ಕದ ರಸ್ತೆಯಲ್ಲಿ ಎದುರಿನಿಂದ ಬರುತ್ತಿದ್ದ ಸ್ವಿಫ್ಟ್ ಕಾರಿಗೆ ಡಿಕ್ಕಿ ಹೊಡೆಯಿತು. ಡಿಕ್ಕಿಯ ರಭಸಕ್ಕೆ ಎರಡೂ ಕಾರುಗಳು ಸಂಪೂರ್ಣವಾಗಿ ಜಖಂಗೊಂಡಿವೆ.



ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು

## 'ರಾಜ್ಯದಲ್ಲಿ ಸುಳ್ಳ–ಮಳ್ಳ ಸರ್ಕಾರ'

ಒಂದನೇ ಪುಟದಿಂದ...

ವಿದ್ಯುತ್ ಬಿಲ್ ಏರಿಕೆಯಿಂದ ಸಾಮಾನ್ಯ ಜನರು ಶುಲ್ಕ ಕಟ್ಟಲು ಆಗುತ್ತಿಲ್ಲ. ಕೈಗಾರಿಕೆಗಳು ಬಾಗಿಲು ಮುಚ್ಚುತ್ತಿವೆ. ಮಹಿಳೆಯರ ಉಚಿತ ಪ್ರಯಾಣ ಘೋಷಣೆಗೂ ಮೊದಲು ಸೂಕ್ತ ವ್ಯವಸ್ಥೆ ಮಾಡದೆ ಶಾಲಾ ಮಕ್ಕಳಿಗೆ ತೊಂದರೆಯಾಗಿದೆ. ಬಸ್‌ಗಳು ಕೆಟ್ಟು ನಿಲ್ಲುತ್ತಿವೆ. ಕಾಂಗ್ರೆಸ್ ದಂಧೆ ಆರಂಭಿಸಿದೆ ಎಂದು ದೂರಿದರು.

'ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಮುಖಂಡರ ಬಂಧನ ರಾಜ್ಯದಲ್ಲಿ ಪೊಲೀಸ್ ಆಳ್ವಿಕೆಗೆ ಮುನ್ನುಡಿ ಬರೆದಿದೆ. ಇದು ಸರ್ಕಾರದ ದಮನಕಾರಿ ನೀತಿ. ಪೊಲೀಸ್ ಲಾಠಿಯಲ್ಲಿ ಶಕ್ತಿ ಇದೆಯೋ, ನಮ್ಮ ರಟ್ಟೆಯಲ್ಲಿ ಇದೆಯೋ ಎನ್ನುವುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ. ಕೋವಿಡ್ ಮತ್ತಿತರ ಸಂಕಷ್ಟದಲ್ಲಿ ಕೇಂದ್ರ ಸರ್ಕಾರ ನೆರವಾಗಿದೆ. ಈಗಲೂ ದೇಶದ 80 ಕೋಟಿ ಜನರಿಗೆ ಉಚಿತ ಅಕ್ಕಿ ನೀಡುತ್ತಿದೆ. ಸರಿಯಾದ ಸಿದ್ಧತೆ ಇಲ್ಲದೆ ಕೈ ಚೆಲ್ಲಿರುವ ರಾಜ್ಯ ಸರ್ಕಾರ ಜನರ ಆಕ್ರೋಶ ಎದುರಿಸುವ ಭಯದಿಂದ ಕೇಂದ್ರದ ವಿರುದ್ಧ ಆಧಾರವಿಲ್ಲದ ಆರೋಪ ಮಾಡುತ್ತಿದೆ' ಎಂದು ದೂರಿದರು.

ಶಾಸಕರಾದ ಆರ್. ಅಶೋಕ,- ಮುನಿರಾಜು, ಎಂ.ಕೃಷ್ಣಪ್ಪ, ವಿಧಾನ ಪರಿಷತ್ತಿನ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ, ತೇಜಸ್ವಿನಿ ಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಮುಖಂಡರಾದ ಸಿದ್ದರಾಜು, ಮಂಜುನಾಥ್, ನಾರಾಯಣಗೌಡ ಇದ್ದರು.



ಬೆಂಗಳೂರಿನಲ್ಲಿ ಮಂಗಳವಾರ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪೊಲೀಸರು ಬಂಧಿಸಿದರು

## ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಲಿ: ಪೀಯೂಷ್

ಪ್ರಜಾವಾಣಿ ವಾರ್ತೆ

**ನವದೆಹಲಿ:** 'ಅನ್ನ ಭಾಗ್ಯ ಯೋಜನೆಗೆ ಅಕ್ಕಿ ನೀಡದ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವನ್ನು ಕರ್ನಾಟಕ ಸರ್ಕಾರ ಟೀಕಿಸುವುದು ಸರಿಯಲ್ಲ. ಅದರ ಬದಲು ರಾಜ್ಯ ಸರ್ಕಾರವು ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿ ಮಾಡಿ ವಿತರಿಸಲಿ' ಎಂದು ಕೇಂದ್ರ ವಾಣಿಜ್ಯ ಹಾಗೂ ಆಹಾರ ಸರಬರಾಜು ಸಚಿವ ಪೀಯೂಷ್ ಗೋಯಲ್ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಕ್ತ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಹೆಚ್ಚಾಗುವುದನ್ನು ತಡೆಯಲು ಹಾಗೂ ಜನರು ಕೈಗೆಟಕುವ ದರದಲ್ಲಿ ಅದನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಭಾರತೀಯ ಆಹಾರ ನಿಗಮವು ಹಲವಾರು ರಾಜ್ಯಗಳಿಗೆ ಅಕ್ಕಿ ನೀಡಲು ನಿರಾಕರಿಸಿದೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ದೇಶದ 140 ಕೋಟಿ ಜನರ ಸೇವೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಅಕ್ಕಿ ದಾಸ್ತಾನು ಇರಿಸಿಕೊಳ್ಳಲು ಕಾರ್ಯದರ್ಶಿಗಳ ಸಮಿತಿಯು ಜೂನ್ 8ರಂದು ನಿರ್ಧರಿಸಿತು. ಅಗತ್ಯ ಬಿದ್ದರೆ ರಾಜ್ಯಗಳು ಮುಕ್ತ ಮಾರುಕಟ್ಟೆಯಿಂದ ಅಕ್ಕಿ ಖರೀದಿ ಮಾಡುವಂತೆ ಸೂಚಿಸಿತು' ಎಂದರು.

ಅಕ್ಕಿ ಪೂರೈಕೆ ಮಾಡುವಂತೆ ಉತ್ತರ ಪ್ರದೇಶ, ಮಧ್ಯ ಪ್ರದೇಶ, ತಮಿಳುನಾಡು ಹಾಗೂ ಆಂಧ್ರ ಪ್ರದೇಶ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿವೆ. ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿ ಸರಬರಾಜು ಮಾಡುವಂತೆ ಅನೇಕ ರಾಜ್ಯಗಳು ಬೇಡಿಕೆ ಇಟ್ಟಿವೆ. ಈಗಿನ ಸನ್ನಿವೇಶದಲ್ಲಿ ಅಕ್ಕಿ ಮಾರಾಟ ಮಾಡಲು ಸಾಧ್ಯವಿಲ್ಲ ಎಂಬುದಾಗಿ ರಾಜ್ಯಗಳಿಗೆ ಸ್ಪಷ್ಟಪಡಿಸಲಾಗಿದೆ ಎಂದರು.

### ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ: ಹವಾಮಾನ ಇಲಾಖೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಂಗಳವಾರ ಮುಂಗಾರು ಮಳೆಯಾಗಿದ್ದು ಮುಂದಿನ ಎರಡು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಹಾಸನ, ಕೊಡಗು, ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು, ಕರಾವಳಿ ಭಾಗದ ಅಲ್ಲಲ್ಲಿ ಬುಧವಾರ ಮತ್ತು ಗುರುವಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನಲ್ಲಿ ಗಾಳಿಯು 30ರಿಂದ 40 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಸೂಚನೆ ನೀಡಿದೆ.

ಜೂನ್ 24ರ ಬಳಿಕ ಮುಂಗಾರು ಚುರುಕು ಪಡೆಯುವ ಸಾಧ್ಯತೆಯಿದ್ದು ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಬೆಂಗಳೂರಿನಲ್ಲಿ ಮೋಡ ಮುಸುಕಿದ ವಾತಾವರಣ ಇರಲಿದ್ದು ಮಧ್ಯಾಹ್ನ ಅಥವಾ ಸಂಜೆ ವೇಳೆ ಜೋರು ಮಳೆಯಾಗಲಿದೆ ಎಂದು ತಿಳಿಸಿದೆ.

### ರಸ್ತೆಗಳಲ್ಲಿ ಹರಿದ ನೀರು • ಸಿಡಿಲು ಬಡಿದು ರೈತ ಸಾವು

# ರಾಜ್ಯದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಬೆಂಗಳೂರು, ಮಂಡ್ಯ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಕೊಡಗು, ಕೋಲಾರ ಸೇರಿದಂತೆ ವಿವಿಧೆಡೆ ಮಂಗಳವಾರ ಮಳೆಯಾಗಿದೆ. ಸಿಡಿಲಿನಿಂದ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಬೀರುವಳ್ಳಿಯ ರೈತ ಮಂಜುನಾಥ್ ಮೃತಪಟ್ಟಿದ್ದು, ಮತ್ತೊಬ್ಬ ರೈತ ರಾಜು ಗಾಯಗೊಂಡಿದ್ದಾರೆ. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಸಂತೆಮರೂರಿನಲ್ಲಿ ಸಿಡಿಲು ಬಡಿದು ಹಸುವೊಂದು ಮೃತಪಟ್ಟಿದೆ.

**(ದಾವಣಗೆರೆ ವರದಿ):** ದಾವಣಗೆರೆ, ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗಳ ವಿವಿಧೆಡೆ ಮಂಗಳವಾರ ಉತ್ತಮ ಮಳೆ ಸುರಿದಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಶಿವಮೊಗ್ಗ ನಗರದಲ್ಲಿ ಮಧ್ಯಾಹ್ನದ ಬಳಿಕ ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.

**(ಚಿತ್ರದುರ್ಗ ವರದಿ):** ಜಿಲ್ಲೆಯ ಹೊಸದುರ್ಗ ಸೇರಿದಂತೆ ಕೆಲವೆಡೆ ಸಂಜೆ ಉತ್ತಮ ಮಳೆಯಾಗಿದೆ. ನಾಯಕನಹಟ್ಟಿಯಲ್ಲಿ 1 ಗಂಟೆಗೂ ಹೆಚ್ಚು ಕಾಲ ಜೋರು ಮಳೆ ಸುರಿಯಿತು. ಮಳೆ ವಿಳಂಬದಿಂದಾಗಿ ಬಿತ್ತನೆ ಕಾರ್ಯ ತಡವಾಗಿತ್ತು. ಅಡಿಕೆ ಸಸಿಗಳು ಒಣಗುವ ಭೀತಿ ಎದುರಾಗಿತ್ತು. ಮಂಗಳವಾರದಿಂದ ಮಳೆ ಸುರಿಯುತ್ತಿದ್ದು, ರೈತರು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ.

**(ಕೋಲಾರ ವರದಿ):** ಬಂಗಾರಪೇಟೆ ತಾಲ್ಲೂಕಿನ ಎಪಿಎಂಸಿ ಮಾರುಕಟ್ಟೆಯಲ್ಲಿ ನೀರು ನುಗ್ಗಿದ್ದರಿಂದ ಮಾರಾಟಕ್ಕೆ ಇಟ್ಟಿದ್ದ ಸೊಪ್ಪು, ತರಕಾರಿ ಮಳೆ ನೀರಿನಲ್ಲಿ ಕೊಚ್ಚಿಹೋಯಿತು. ಮೂರ್ನಾಲ್ಕು ತಾಸು ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಚರಂಡಿ ತ್ಯಾಜ್ಯ ಹಾಗೂ ನೀರು ರಸ್ತೆಗೆ ಹರಿಯಿತು. ಕೋಲಾರ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲೂ ಜಿಟಿಜಿಟಿ ಮಳೆಯಾಗಿದೆ.

**(ರಾಮನಗರ ವರದಿ):** ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳಿಗೆ ಬೇಕಾದಷ್ಟು ಹೊತ್ತು ಮಳೆ ಸುರಿಯದ ಕಾರಣ ರೈತರು ನಿರಾಶರಾದರು. ಚಿಕ್ಕಬಳ್ಳಾಪುರ ನಗರ ಸೇರಿದಂತೆ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಹದವಾದ ಮಳೆಯಾಗಿದೆ. ಬೆಳಿಗ್ಗೆ 6 ಗಂಟೆಗೆ ಆರಂಭವಾದ ಮಳೆ 10 ಗಂಟೆಯವರೆಗೂ ಸುರಿಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಭಾಗಗಳಲ್ಲಿ ಬೆಳಗ್ಗಿನಿಂದಲೇ ಗುಡುಗು ಸಹಿತ ಧಾರಾಕಾರ ಮಳೆ ಸುರಿಯಿತು.

**(ಹಾಸನ ವರದಿ):** ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಧಾರಾಕಾರ ಮಳೆ ಸುರಿದಿದೆ. ಜಿಲ್ಲಾ ಕೇಂದ್ರದ ರಾಜಕಾಲುವೆಯಲ್ಲಿ ನೀರು ಉಕ್ಕಿ ಹರಿದಿದ್ದು, ಬಿಎಸ್‌ಎನ್‌ಎಲ್ ಪಕ್ಕದ ರಸ್ತೆಯಲ್ಲಿ ವಾಹನಗಳು ಜಲಾವೃತಗೊಂಡಿದ್ದವು. ಕುವೆಂಪು ನಗರದ ಹಲವು ಮನೆಗಳಿಗೆ ಒಳಚರಂಡಿ ನೀರು ನುಗ್ಗಿತ್ತು.

ನಗರದ ಎಂಎಸ್‌ಡಿ ಕಲ್ಯಾಣ ಮಂಟಪದೊಳಗೆ ಮಳೆ ನೀರು ನುಗ್ಗಿ, ಅಪಾರ ಪ್ರಮಾಣದ ವಸ್ತುಗಳಿಗೆ ಹಾನಿಯಾಗಿದೆ.

### ರಾಜ್ಯದ ತೋಟಗಾರಿಕೆ ಬೆಳೆಗೆ ಸಿಕ್ಕ ಮೊದಲ ಹಕ್ಕುಸ್ವಾಮ್ಯ

# ಸಿದ್ದು, ಶಂಕರ ಹಲಸಿಗೆ ಪೇಟೆಂಟ್

ಪ್ರಜಾವಾಣಿ ವಾರ್ತೆ

**ತುಮಕೂರು:** ಹಲಸಿನ ಹಣ್ಣಿನಲ್ಲೇ ಉತ್ಕೃಷ್ಟ ಎಂದು ಗುರುತಿಸಿರುವ ಜಿಲ್ಲೆಯ ಹೆಮ್ಮೆಯ ತಳಿಗಳಾದ 'ಸಿದ್ದು' ಹಾಗೂ 'ಶಂಕರ' ಹಣ್ಣಿಗೆ ಹಕ್ಕು ಸ್ವಾಮ್ಯ (ಪೇಟೆಂಟ್) ಸಿಕ್ಕಿದೆ. ಇದರಿಂದಾಗಿ ಇನ್ನು ಮುಂದೆ ಯಾರೊಬ್ಬರೂ ಈ ಹಣ್ಣಿನ ತಳಿಗಳನ್ನು ಬೆಳೆಸಲು, ಮಾರಾಟ ಮಾಡಲು ಅವಕಾಶವಿಲ್ಲ.

ಕೇಂದ್ರ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಬರುವ 'ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಪ್ರಾಧಿಕಾರ' (ಪಿಪಿವಿಎಫ್‌ಆರ್‌ಎ) ಈ ಪೇಟೆಂಟ್ ನೀಡಿದೆ.

ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳಲ್ಲಿ ಹಲಸಿಗೆ ಸಿಕ್ಕಿರುವ ಮೊದಲ ಪೇಟೆಂಟ್ ಎಂದು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಹಿರೇಹಳ್ಳಿ ಘಟಕದ ನಿರ್ದೇಶಕ ಡಾ.ಜಿ.ಕರುಣಾಕರ್ ತಿಳಿಸಿದರು.

'ಸಿದ್ದು' ಹಾಗೂ 'ಶಂಕರ' ಹಲಸಿನ ತಳಿಯ ಮಾಲೀಕರು ಮಾತ್ರ ಇದರ ಹಕ್ಕು ಸ್ವಾಮ್ಯ ಹೊಂದಿರುತ್ತಾರೆ. ಮುಂದಿನ 20 ವರ್ಷ ಈ ಹಣ್ಣಿನ ತಳಿಯನ್ನು ಬೇರೆ ಯಾರೂ ಬೆಳೆಸಲು ಅವಕಾಶ ಸಿಗುವುದಿಲ್ಲ. ಹಲಸಿನ ತಳಿಯ ಮಾಲೀಕರು ಅಥವಾ ಅವರು ಅನುಮತಿ ನೀಡಿದವರು ಮಾತ್ರ ಸಸಿಗಳನ್ನು ಬೆಳೆಸಿ, ಮಾರಾಟ ಮಾಡಲು ಅವಕಾಶವಿದೆ.

ನಗರದ ಹೊರವಲಯದಲ್ಲಿರುವ ಐಐಎಚ್‌ಆರ್ ಸಂಸ್ಥೆಯು 2017ರಲ್ಲಿ ಗುಬ್ಬಿ ತಾಲ್ಲೂಕಿನ ಚೇಳೂರಿನ 'ಸಿದ್ದು' ಹಲಸು ಮತ್ತು 2019ರಲ್ಲಿ ಚೌಡ್ಲಾಪುರದ 'ಶಂಕರ' ಹಲಸಿನ ತಳಿಯನ್ನು ದೇಶದ ಅತ್ಯುತ್ತಮ ಹಲಸಿನ ತಳಿಗಳು ಎಂದು ಗುರುತಿಸಿದೆ.



ಸಿದ್ದು ಹಲಸು

## ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಆರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಮಂಗಳವಾರ ಆರಂಭವಾಗಿದ್ದು, ಸುಮಾರು 87 ಸಾವಿರ ಅರ್ಜಿಗಳು ಬಂದಿವೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.


ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ ಮಾಡುವುದರಿಂದ ಸುಮಾರು 27 ಸಾವಿರ ಮಂದಿಗೆ ಅನುಕೂಲ ಆಗಲಿದೆ. ಈಗಾಗಲೇ ತಡವಾಗಿರುವುದರಿಂದ ವರ್ಗಾವಣೆ ಪ್ರಕ್ರಿಯೆ ಬೇಗನೆ ಮುಗಿಸಲು ಸೂಚಿಸಲಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಶಾಲೆಗಳಲ್ಲಿ ಮಕ್ಕಳಿಗೆ ಸುರಕ್ಷತೆ ಒದಗಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು. ಅಲ್ಲದೇ, ಸಿಎಸ್‌ಆರ್ ನಿಧಿ ಬಳಕೆ ಸೇರಿ ಹಂತ ಹಂತವಾಗಿ ಮೂಲಸೌಕರ್ಯ ಅಭಿವೃದ್ಧಿಪಡಿಸಿ ಖಾಸಗಿ ಶಾಲೆಗಳ ವಾತಾವರಣವನ್ನು ಸರ್ಕಾರಿ ಶಾಲೆಗಳಲ್ಲೂ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾಸರಗೋಡಿನಲ್ಲಿ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸುವ ಮತ್ತು ಕನ್ನಡ ಭಾಷಾ ಶಿಕ್ಷಕರ ನೇಮಕ ಕುರಿತು ಅಧಿಕಾರಿಗಳ ಜತೆ ಮಾತುಕತೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

# ಅಭಿಮತ




❦ ಸುಭಾಷಿತ ❦

ಅತಿ ದೊಡ್ಡ ಗುರುಮಂತ್ರ ಇದು: ನಿಮ್ಮ ಗುಟ್ಟಿನ ಸಂಗತಿಗಳನ್ನು ಯಾರೊಂದಿಗೂ ಹಂಚಿಕೊಳ್ಳದಿರಿ. ಹಂಚಿಕೊಂಡರೆ ಅದು ನಿಮ್ಮನ್ನು ನಾಶ ಮಾಡುತ್ತದೆ.

–ಚಾಣಕ್ಯ

# ಬಿಬಿಎಂಪಿ ಚುನಾವಣೆ ಮತ್ತಷ್ಟು ವಿಳಂಬ ಸಲ್ಲದು

**ಬೃಹತ್** ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾಯಿತ ಕೌನ್ಸಿಲ್ ಆಡಳಿತವು 2020ರ ಸೆಪ್ಟೆಂಬರ್‌ನಲ್ಲೇ ಕೊನೆಗೊಂಡಿದೆ. ಚುನಾವಣೆ ನಡೆಸಿ ಹೊಸ ಕೌನ್ಸಿಲ್ ರಚಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಬಿಬಿಎಂಪಿಯ ವಾರ್ಡ್‌ಗಳನ್ನು ಪುನರ್ ವಿಂಗಡಣೆ ಮಾಡಿ ಸರ್ಕಾರವು 2022ರ ಜುಲೈ ತಿಂಗಳಲ್ಲಿ ಅಧಿಸೂಚನೆ ಹೊರಡಿಸಿತ್ತು. ಈ ಅಧಿಸೂಚನೆಯನ್ನು ರದ್ದುಪಡಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ವಾರ್ಡ್‌ಗಳ ಮರುವಿಂಗಡಣೆಯಲ್ಲಿ ಕೆಲವು ಲೋಪಗಳಿದ್ದು, ಅವುಗಳನ್ನು ಸರಿಪಡಿಸುವ ಅಗತ್ಯ ಇದೆ ಎಂದು ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಅವರು ಹೈಕೋರ್ಟ್ ಗಮನಕ್ಕೆ ತಂದಿದ್ದಾರೆ. ಈ ಪ್ರಕ್ರಿಯೆ ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ 12 ವಾರಗಳ ಕಾಲಾವಕಾಶವನ್ನು ನೀಡಿದೆ. ಇನ್ನೂ ಕನಿಷ್ಠ ನಾಲ್ಕು ತಿಂಗಳು ಬಿಬಿಎಂಪಿ ಚುನಾವಣೆ ನಡೆಯುವ ಸಾಧ್ಯತೆ ಇಲ್ಲ ಎಂಬುದು ಇದರಿಂದ ಸ್ಪಷ್ಟ. ಈ ನಡುವೆ ಬಿಬಿಎಂಪಿಯ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ, ಸಂಸ್ಥೆಯನ್ನು ವಿಭಜನೆ ಮಾಡುವ ಹಳೆಯ ಪ್ರಸ್ತಾವಕ್ಕೆ ಪುನಃ ಜೀವ ತುಂಬಲು ಸರ್ಕಾರ ಹೊರಟಿದೆ.



**ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸುವ ಮೂಲಕ ಸಂವಿಧಾನದ ಆಶಯಕ್ಕೆ ಬದ್ಧವಾಗಿ ಸರ್ಕಾರ ನಡೆದುಕೊಳ್ಳಬೇಕು**

ಬಿಬಿಎಂಪಿ ಆಡಳಿತ ಸುಧಾರಣೆಗಾಗಿ ವರದಿ ಸಿದ್ಧಪಡಿಸಲು ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ ನೇತೃತ್ವದಲ್ಲಿ ಸಮಿತಿಯನ್ನು ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ರಚಿಸಲಾಗಿತ್ತು. ಬಿಬಿಎಂಪಿಯನ್ನು ಐದು ಪಾಲಿಕೆಗಳನ್ನಾಗಿ ವಿಂಗಡಿಸಿ, ಪ್ರತಿಯೊಂದಕ್ಕೂ ಪ್ರತ್ಯೇಕ ಮೇಯರ್ ಮತ್ತು ಉಪ ಮೇಯರ್ ಅವರನ್ನು ಆಯ್ಕೆ ಮಾಡಬೇಕು ಎಂದು ಆ ಸಮಿತಿಯು ಶಿಫಾರಸು ಮಾಡಿತ್ತು. ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಬಿಬಿಎಂಪಿಯನ್ನು ವಿಭಜಿಸಲು ಮುಂದಾಗಿದ್ದ ಆಗಿನ ಸರ್ಕಾರ ಈ ಕುರಿತ ಮಸೂದೆಯನ್ನೂ ವಿಧಾನಮಂಡಲದಲ್ಲಿ ಮಂಡಿಸಿತ್ತು. ಆ ಮಸೂದೆಯನ್ನು ಬಿಜೆಪಿ ಬಲವಾಗಿ ವಿರೋಧಿಸಿತ್ತು. ಬಳಿಕ ರಾಜ್ಯದ ಚುಕ್ಕಾಣಿ ಹಿಡಿದ ಬಿಜೆಪಿ ನೇತೃತ್ವದ ಸರ್ಕಾರವು 2020ರಲ್ಲಿ ಬಿಬಿಎಂಪಿಗಾಗಿ ಪ್ರತ್ಯೇಕ ಮಸೂದೆಯನ್ನು ಅಂಗೀಕರಿಸಿತು. 2021ರ ಜನವರಿಯಲ್ಲಿ ಅದು ಕಾಯ್ದೆಯಾಗಿ ಜಾರಿಗೊಂಡಿತು. ಅದರ ಪ್ರಕಾರ, ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ನಿಗದಿಪಡಿಸಲಾಗಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು.

ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರವು ಬಿ.ಎಸ್.ಪಾಟೀಲ ನೇತೃತ್ವದ ಸಮಿತಿಯನ್ನು ಇತ್ತೀಚೆಗೆ ಪುನರ್‌ರಚಿಸಿದೆ. ವಾರ್ಡ್‌ಗಳ ಮರುವಿಂಗಡಣೆಯ ಲೋಪ ಸರಿಪಡಿಸಲು ಹೈಕೋರ್ಟ್‌ನಿಂದ ಕಾಲಾವಕಾಶ ಪಡೆದಿರುವ ಸರ್ಕಾರ, 2022ರಲ್ಲಿ ರೂಪಿಸಲಾದ ವಾರ್ಡ್‌ಗಳ ಲೋಪದೋಷಗಳನ್ನಷ್ಟೇ ಸರಿಪಡಿಸಿ ಬಿಬಿಎಂಪಿಗೆ ಚುನಾವಣೆ ನಡೆಸಲು ಅನುವು ಮಾಡಿಕೊಡುತ್ತದೆಯೋ ಅಥವಾ ಬಿಬಿಎಂಪಿಯನ್ನೇ ವಿಭಜನೆ ಮಾಡಿ ನಂತರ ಚುನಾವಣೆ ನಡೆಸುತ್ತದೆಯೋ ಎಂಬುದು ಸಾರ್ವಜನಿಕರ ಮುಂದಿರುವ ಪ್ರಶ್ನೆ. 'ಬಿಬಿಎಂಪಿಯನ್ನು ವಿಭಜನೆ ಮಾಡುವುದು ಸರಿಯಲ್ಲ. ನವದೆಹಲಿಯಲ್ಲಿ ಇಂತಹ ಪ್ರಯೋಗ ವಿಫಲವಾಗಿರುವ ಉದಾಹರಣೆ ನಮ್ಮ ಮುಂದಿದೆ. ಬಿಬಿಎಂಪಿ ಕಾಯ್ದೆಯಡಿ ವಲಯ ಸಮಿತಿಗಳನ್ನು ಬಲಪಡಿಸಿ ಆಡಳಿತದ ವಿಕೇಂದ್ರೀಕರಣಕ್ಕೆ ಈಗಾಗಲೇ ಅವಕಾಶ ಕಲ್ಪಿಸಲಾಗಿದ್ದು, ವಿಭಜನೆಯ ಅಗತ್ಯವಿಲ್ಲ' ಎಂಬುದು ಬಿಜೆಪಿಯ ವಾದ. ಸರ್ಕಾರವು ಬಿಬಿಎಂಪಿಯನ್ನು ವಿಭಜನೆ ಮಾಡುವ ನಿಲುವಿಗೆ ಅಂಟಿಕೊಂಡಿದ್ದೇ ಆದರೆ, ಚುನಾವಣೆ ಮತ್ತಷ್ಟು ಕಾಲ ಮುಂದಕ್ಕೆ ಹೋಗುವುದು ನಿಶ್ಚಿತ. ಬೆಂಗಳೂರಿಗೆ ಮೆಟ್ರೊಪಾಲಿಟನ್ ದರ್ಜೆಯ ಆಡಳಿತ ವ್ಯವಸ್ಥೆ ರೂಪಿಸುವ ಆಶಯವು ಬಿಬಿಎಂಪಿ ಕಾಯ್ದೆ ಜಾರಿಯಾದ ಬಳಿಕವೂ ಈಡೇರಿಲ್ಲ. ಪ್ರಸ್ತುತ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬಿಬಿಎಂಪಿ, ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ), ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮುಂತಾದ ಸರ್ಕಾರಿ ಸಂಸ್ಥೆಗಳು ನಗರದ ಆಡಳಿತಕ್ಕೆ ಸಂಬಂಧಿಸಿದ ಬೇರೆ ಬೇರೆ ಜವಾಬ್ದಾರಿಗಳನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತಿವೆ. ಬಿಡಿಎ, ಬಿಎಂಟಿಸಿ, ಜಲಮಂಡಳಿಯನ್ನು ಉದ್ದೇಶಿತ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಗೆ ತರಬೇಕು ಎಂಬ ಸಲಹೆಯನ್ನು ಬಿ.ಎಸ್.ಪಾಟೀಲ ನೇತೃತ್ವದ ಸಮಿತಿ ಈ ಹಿಂದೆ ನೀಡಿತ್ತು. ಅಭಿವೃದ್ಧಿ ಯೋಜನೆಗಳ ರೂಪುರೇಷೆ ಸಿದ್ಧಪಡಿಸುವುದು ಮತ್ತು ಅವುಗಳ ನಿರ್ವಹಣೆಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸುವ ಮೂಲಕ ಆಡಳಿತದಲ್ಲಿ ಸಮನ್ವಯ ಸಾಧಿಸುವ ಅಗತ್ಯ ಇದೆ ಎಂಬುದು ಕೆಲವು ತಜ್ಞರ ಅಭಿಮತವೂ ಹೌದು. ರಾಜಧಾನಿಯ ಆಡಳಿತಕ್ಕೆ ಹೊಸ ದಿಕ್ಕು ನೀಡಬಲ್ಲ ಇಂತಹ ಮಹತ್ವದ ನಿರ್ಣಯ ಕುರಿತು ಸಾರ್ವಜನಿಕರ ಸಲಹೆ ಪಡೆದು, ಸಮಾಲೋಚನೆ ನಡೆಸಿದ ಬಳಿಕವೇ ಅಂತಿಮ ನಿರ್ಣಯ ಕೈಗೊಳ್ಳಬೇಕು. ಆದರೆ, ಇದು ಬಿಬಿಎಂಪಿ ಚುನಾವಣೆಯನ್ನು ಮತ್ತಷ್ಟು ಕಾಲ ಮುಂದೂಡುವುದಕ್ಕೆ ಒಂದು ನೆಪ ಆಗಬಾರದು. ಕಾಲಮಿತಿಯನ್ನು ನಿಗದಿಪಡಿಸಿ ಇಂತಹ ಸುಧಾರಣಾ ಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸಬೇಕು. ಆದಷ್ಟು ಶೀಘ್ರ ಚುನಾವಣೆ ನಡೆಸುವ ಮೂಲಕ ಸಂವಿಧಾನದ ಆಶಯಕ್ಕೆ ಬದ್ಧವಾಗಿಯೂ ಸರ್ಕಾರ ನಡೆದುಕೊಳ್ಳಬೇಕು.

## ದಿನದ ಟ್ವೀಟ್

### ರಾಜಕೀಯದಾಟ!



**ಶಿವಸೇನಾ ನಾಯಕ ಸಂಜಯ್ ರಾವತ್ ಅವರು ಜೂನ್ 20 ಅನ್ನು 'ವಿಶ್ವ ವಿಶ್ವಾಸದ್ರೋಹ ದಿನ'ವನ್ನಾಗಿ ಘೋಷಿಸುವಂತೆ ಕೋರಿ ವಿಶ್ವಸಂಸ್ಥೆಗೆ ಪತ್ರ ಬರೆದಿದ್ದಾರೆ. ಅಂದು ಏಕನಾಥ ಶಿಂದೆ ಅವರು ಉದ್ಧವ್ ಠಾಕ್ರೆ ಅವರಿಗೆ ವಿಶ್ವಾಸದ್ರೋಹವೆಸಗಿ ಮಹಾರಾಷ್ಟ್ರ ಸರ್ಕಾರದ ಪತನಕ್ಕೆ ಕಾರಣವಾದ ದಿನ ಎಂದಿರುವ ಅವರು, ಪತ್ರವನ್ನು ಪ್ರಧಾನಿ ಮೋದಿಯವರಿಗೂ ಟ್ಯಾಗ್ ಮಾಡಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ ಶಾಸಕ ನಿತೇಶ್ ರಾಣೆ ಅವರು ಉದ್ಧವ್ ಠಾಕ್ರೆ ಅವರ ಹುಟ್ಟುಹಬ್ಬದ ದಿನವನ್ನು 'ಅಂತರಾಷ್ಟ್ರೀಯ ವಿಶ್ವಾಸದ್ರೋಹ ದಿನ'ವನ್ನಾಗಿ ಆಚರಿಸುವಂತೆ ಕೋರಿದ್ದಾರೆ!**

**ನವಿಲಾ ಜಮಾಲ್,** ಪತ್ರಕರ್ತೆ

## ಕಿಡಿನುಡಿ



**ಮಾಧ್ಯಮಗಳು ಮಳೆಯ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ. ಮಳೆಯ ಅವಾಂತರ, ಮಳೆಯ ಅಬ್ಬರ, ಮಳೆಯ ರಗಳೆ, ವರುಣಾರ್ಭಟ... ಮುರ್ಖರು ಶಿಡಿಲು-ಕ್ಷಬೆಲು, ಮಳೆ ಬಾರದಿದ್ದರೆ ಜೀವನವೇ ಶೂನ್ಯ. ಇನ್ನು ಅವಾಂತರ ಆಗುವುದು ನಾವು ಮಾಡಿಕೊಂಡಿರುವ ಅವ್ಯವಸ್ಥೆಯ ಫಲಿತಾಂಶ. ಅದಕ್ಕೆ ಮಳೆ ಹೇಗೆ ಕಾರಣವಾಗುತ್ತದೆ?**

**ರೋಹಿತ್ ಸಿಂಹ,** ಎಂಜಿನಿಯರ್

## 25 ವರ್ಷಗಳ ಹಿಂದೆ

ಭಾನುವಾರ, 21-6-1998

● **ಕೊಜೆಂಟ್ರಿಕ್ಸ್ ಸ್ಥಾವರಕ್ಕೆ ಕೇಂದ್ರ ಅನುಮತಿ ಸಾಧ್ಯತೆ**

**ಬೆಂಗಳೂರು, ಜೂನ್ 20–** ವಿದ್ಯುತ್ ಅಭಾವ ನಿವಾರಣೆಗೆ ಕರ್ನಾಟಕವು ಆತುರದಿಂದ ಕಾಯ್ದಿರುವ ಮಂಗಳೂರು ಸಮೀಪದ ನಂದಿಕೂರಿನ ಕೊಜೆಂಟ್ರಿಕ್ಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ಸದ್ಯದಲ್ಲಿ ಅನುಮತಿ ಸಿಗುವ ಸಂಭವ ಇದೆ ಎಂದು ಕೇಂದ್ರ ವಿದ್ಯುತ್ ಸಚಿವ ರಂಗರಾಜನ್ ಕುಮಾರಮಂಗಲಂ ಅವರು ಇಂದು ಇಲ್ಲಿ ಇಂಗಿತ ನೀಡಿದರು.

ನಾಲ್ಕು ಸಾವಿರ ಕೋಟಿ ರೂಪಾಯಿ ವೆಚ್ಚದ ಒಟ್ಟು ಸುಮಾರು 1,000 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಿರುವ ಈ ಯೋಜನೆಯನ್ನು ಅಮೆರಿಕದ ಕೊಜೆಂಟ್ರಿಕ್ಸ್ ಕಂಪನಿಯು ಕೆಲವು ಕಂಪನಿಗಳ ಜೊತೆ ಕೂಡಿ ನಿರ್ಮಿಸಿಕೊಂಡು ಸ್ಥಾಪಿಸಲು ಉದ್ದೇಶಿಸಿದೆ.

## 50 ವರ್ಷಗಳ ಹಿಂದೆ

ಗುರುವಾರ, 21-6-1973

● **ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆಂದೂ ಕಾಣದಂತಹ ಆಹಾರ ಅಭಾವ**

**ಬೆಂಗಳೂರು, ಜೂನ್ 20–** ದಕ್ಷಿಣ ಕನ್ನಡ ಜಿಲ್ಲೆ 'ಹಿಂದೆಂದೂ ಕಾಣದ' ಗಂಭೀರ ರೀತಿಯ ಆಹಾರ ಅಭಾವವನ್ನು ಎದುರಿಸುತ್ತಿದೆ. ಅದಕ್ಕೆ ಕಾರಣ 'ಕಳೆದ ಎರಡು ವರ್ಷಗಳಲ್ಲಿ ಬೆಳೆ ಕಡಿಮೆಯಾಗಿ, ತಿನ್ನುವವರ ಸಂಖ್ಯೆ ಹೆಚ್ಚಿರುವುದು'.

ಈ ಎರಡೂ ಕಾರಣಗಳನ್ನು ಅಂಕಿ-ಅಂಶಗಳಿಂದ ಇಂದು ಇಲ್ಲಿ ವಿವರಿಸಿದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಕೆ.ಎನ್.ಮಹಾಬಲೇಶ್ವರ, ಮುಖ್ಯಮಂತ್ರಿ ಮತ್ತು ಪರಿಹಾರ ಕ್ರಮಗಳನ್ನು ಸೂಚಿಸಿದರು.

ಅಕ್ಕಿ ದಾಸ್ತಾನು ಹೊಂದಿರುವವರ ವಿರುದ್ಧ ಭಾರತ ರಕ್ಷಣಾ ಕಾನೂನಿನಂತೆ ಕ್ರಮ ಕೈಗೊಂಡರೆ 'ಮಾರನೆಯ ದಿನವೇ ಬೆಲೆ ಕಡಿಮೆಯಾಗುತ್ತದೆ' ಎಂದು ಅವರ ನಂಬಿಕೆ.

ಅವರು ಪತ್ರಿಕಾಗೋಷ್ಠಿಯಲ್ಲಿ ಸೂಚಿಸಿದ ಮತ್ತೊಂದು ಪರಿಹಾರ ಹೆಚ್ಚು ಸಮರ್ಪಕವಾದದ್ದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನಾ ಚಟುವಟಿಕೆಗಳಲ್ಲಿ ಕೆಲಸ ಮಾಡುವವರು, ಕೈಗಾರಿಕೆ ಕಾರ್ಮಿಕರು, ರೋಗ ಬಂದು ಬೆಳೆ ಇಲ್ಲದಿರುವ ಭಾಗಗಳ ಕೃಷಿ ಕಾರ್ಮಿಕರು ಇವರುಗಳಿಗೆ ಕೂಡಲೇ ಸಮರ ಸಿದ್ಧತೆಯಂತೆ ಕಾರ್ಡುಗಳನ್ನು ಕೊಟ್ಟು ಅಕ್ಕಿ ಒದಗಿಸುವುದು. ಮೂರನೇ ಪರಿಹಾರ ಶಿವಮೊಗ್ಗ, ಹಾಸನ, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಂದು ವಲಯವನ್ನಾಗಿ ಮಾಡುವುದು.

ಸಮಾಜದಲ್ಲಿ ಬುದ್ಧಿವಂತರನ್ನೇ ಪ್ರತಿಭಾವಂತರೆಂದು ಭಾವಿಸುವ ಸಾಧ್ಯತೆಯೇ ಹೆಚ್ಚು

# ಪ್ರತಿಭೆ ಇದೆ, ಗುರುತಿಸುವವರು...?



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ಪರೀಕ್ಷಾ** ಫಲಿತಾಂಶಗಳು ಪ್ರಕಟವಾಗುತ್ತಿದ್ದ ಹಾಗೆ, ಬಂದ ಅಂಕಗಳ ಕುರಿತಾಗಿ ವಿದ್ಯಾರ್ಥಿಗಳ ಕಡೆಯಿಂದ ಹಲವು ಬಗೆಯ ಅಸಮಾಧಾನಗಳು ವ್ಯಕ್ತವಾಗುತ್ತವೆ. ಸಾಮಾನ್ಯವಾಗಿ ಇಂತಹ ಅಸಮಾಧಾನಗಳು ಅಲ್ಲಿಂದಲ್ಲಿಗೆ ಉತ್ತೀರ್ಣರಾಗುವವರದ್ದಾಗಿರುವುದಿಲ್ಲ. ಬಹಳಷ್ಟು ಒಳ್ಳೆಯ ಅಂಕಗಳನ್ನು ಪಡೆದವರದ್ದೇ ಆಗಿರುತ್ತವೆ. ಯಾವುದೇ ವ್ಯವಸ್ಥೆ ಸೋತವನ ಪರವಾಗಿ ಇರಬೇಕಾದ್ದು ನ್ಯಾಯ ಮತ್ತು ಹಾಗೆ ಇರುವುದು ಸಹಜ. ಆದ್ದರಿಂದ ಒಳ್ಳೆಯ ಅಂಕಗಳನ್ನು ಪಡೆಯುವವರಿಗೆ ಕಡಿಮೆ ಅಂಕಗಳು ಬಂದ ಕುರಿತ ಅಹವಾಲುಗಳು ಹೆಚ್ಚು ವೈಯಕ್ತಿಕವಾಗಿ ಉಳಿಯುತ್ತವೆ. ವ್ಯವಸ್ಥೆಯ ಗಮನ ಸೆಳೆಯದೇ ಹೋಗುತ್ತವೆ.

ಆದರೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ಒಳ್ಳೆಯ ಅಂಕಗಳಿಗಾಗಿನ ಬೇಡಿಕೆಯು ಸರಳ ವ್ಯಾಖ್ಯಾನಕ್ಕೆ ನಿಲುಕುವುದಿಲ್ಲ. 1961ರಲ್ಲಿ ಜವಾಹರಲಾಲ್ ನೆಹರೂ ಅವರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಬರೆದ ಒಂದು ಪತ್ರದಲ್ಲಿ, ಯಾವುದೇ ಆಡಳಿತಾತ್ಮಕ ನಿಲುವುಗಳು ಪ್ರತಿಭಾವಂತರನ್ನು ಎರಡು ಅಥವಾ ಮೂರನೆಯ ದರ್ಜೆಗೆ ಇಳಿಸಬಾರದು ಎಂದು ಹೇಳಿದ್ದರು. ಬಹುತೇಕ ಮಾರುಕಟ್ಟೆಯೇ ಪ್ರಧಾನವಾದ ಜಾಗತೀಕರಣದ ಆರ್ಥಿಕತೆ ಬರುವತನಕ ಪ್ರತಿಭಾವಂತರನ್ನು ಗುರುತಿಸುವ ದಿಸೆಯಲ್ಲಿ ಚಿಂತನೆಗಳಿದ್ದವು. ಆದರೆ ಆನಂತರ ಶೇಕಡ ನೂರು ಫಲಿತಾಂಶವೇ ಶಾಲೆಯ ಶ್ರೇಷ್ಠತೆಯ ಮಾನದಂಡ ಎಂಬ ಸಾರ್ವತ್ರಿಕ ಚಿಂತನೆ ಪ್ರಬಲವಾಗಿ, ಶಿಕ್ಷಣ ಚಿಂತಕರ ಸ್ಥಾನವನ್ನು ಶಿಕ್ಷಣೋದ್ಯಮಿಗಳೇ ಆವರಿಸಿಕೊಂಡು, ಶಿಕ್ಷಣೋದ್ಯಮಿಗಳನ್ನು ಶಿಕ್ಷಣ ಚಿಂತಕರು, ಶಿಕ್ಷಣ ತಜ್ಞರು ಎಂದು ಕರೆಯಲು ಶುರು ಮಾಡಿದ ನಂತರ, ಒಳ್ಳೆಯ ಅಂಕಗಳನ್ನು ಪಡೆಯುವವರು ಮಾತ್ರ ಪ್ರತಿಭಾವಂತರು ಎಂಬ ಕಲ್ಪನೆ ಸಾರ್ವತ್ರಿಕವಾಯಿತು.

ಶೈಕ್ಷಣಿಕ ಮನೋವಿಜ್ಞಾನದ ಪ್ರಕಾರ, ಬುದ್ಧಿವಂತರು ಮತ್ತು ಪ್ರತಿಭಾವಂತರು ಬೇರೆ ಬೇರೆ ವಿಂಗಡಣೆಗಳಾಗಿರುತ್ತಾರೆ. ಬುದ್ಧಿವಂತರೆಲ್ಲರೂ ಪ್ರತಿಭಾವಂತರಾಗಿ ಇರಲೇಬೇಕಾಗಿಲ್ಲ. ಆದರೆ ಪ್ರತಿಭಾವಂತರೆಲ್ಲರೂ ತಕ್ಕ ಮಟ್ಟಿಗೆ ಬುದ್ಧಿವಂತರೇ ಆಗಿರುತ್ತಾರೆ. ಈ ವ್ಯತ್ಯಾಸ ಎಷ್ಟು ತೀವ್ರ ತರಹದ್ದಾಗಿರುತ್ತದೆ ಎಂದರೆ, ಕೆಲವೊಮ್ಮೆ ಪ್ರತಿಭಾವಂತರು ಕಲಿಕಾ ಹಿಂದುಳಿದವರ ಹಾಗೆ ಕಾಣಿಸುವುದೂ ಇರುತ್ತದೆ. ಉದಾಹರಣೆಗೆ, ಒಂದು ಮಗು ಎಡಗಡೆಯಿಂದ ಬಲಗಡೆಗೆ ಬರೆಯುವ ಬದಲಿಗೆ ಬಲಗಡೆಯಿಂದ ಎಡಗಡೆಗೆ ಬರೆದುಕೊಂಡು ಬಂದರೆ, ಮೇಲ್ನೋಟಕ್ಕೆ ಅದು ಕಲಿಕಾ ಹಿಂದುಳಿದ ಮಗು ಎಂದು ಅರ್ಥೈಸಲ್ಪಡುತ್ತದೆ. ನಿಜವಾಗಿ ಅದು ಕಲಿಕಾ ಹಿಂದುಳಿದ ಮಗುವಾಗಿದೆಯೇ ಅಥವಾ ಪ್ರತಿಭಾವಂತ ಮಗುವಾಗಿದೆಯೇ ಎಂಬುದನ್ನು ಗುರುತಿಸಬೇಕಾದರೆ, ಯಾವ ರೀತಿಯ ಚಿಂತನೆಯಲ್ಲಿ ಮಗು ಆ ರೀತಿ ಬರೆದಿದೆ ಎಂಬುದನ್ನು ಪರಿಶೀಲಿಸಬೇಕು.

ಮಗುವಿಗೆ ಅಧ್ಯಾಪಕರು ಕಲಿಸಿದ ರೀತಿಯಲ್ಲಿ ಬರೆಯಲು ಗೊತ್ತಾಗದೆ ಬಲದಿಂದ ಎಡಕ್ಕೆ ಬರೆದುಕೊಂಡು ಬಂದಿದ್ದರೆ, ಅದು ಕಲಿಕಾ ಹಿಂದುಳಿದ ಮಗುವಾಗಿರುತ್ತದೆ. ಅರೇಬಿಕ್ ಭಾಷೆಯನ್ನು ಕಲಿಯುತ್ತಿರುವ ಮಗು, ಕನ್ನಡ ಭಾಷೆಯಲ್ಲಿ ಬರೆಯುವಾಗ ಸಹಜವಾಗಿ ಬಲದಿಂದ ಎಡಕ್ಕೆ ಬರೆಯುತ್ತಾ ಬಂದರೆ, ಒಂದು ಭಾಷೆಯ ಕಲಿಕಾ ಕೌಶಲವು ಮತ್ತೊಂದು ಭಾಷೆಯ ಕಲಿಕೆಗೆ ನಕಾರಾತ್ಮಕವಾಗಿ ವರ್ಗಾವಣೆಯಾಗಿದ್ದು, ತಪ್ಪು ಕಲಿಕಾ ವರ್ಗಾವಣೆ ಆಗಿದೆ ಎಂದು ಅರ್ಥ. ಒಂದು ಮಗು, ಎಡದಿಂದ ಬಲಕ್ಕೆ ಬರೆಯುವುದನ್ನು ಅಧ್ಯಾಪಕರೇ ಕಲಿಸಿದ್ದಾರೆ, ತಾನು ಬಲದಿಂದ ಎಡಕ್ಕೆ ಬರೆದು ಹೀಗೂ ಬರೆಯಲು ಸಾಧ್ಯವಿದೆ ಎಂದು ತೋರಿಸುತ್ತೇನೆ ಎಂದು ಯೋಚಿಸಿ ಬಲದಿಂದ ಎಡಕ್ಕೆ ಬರೆದುಕೊಂಡು ಬಂದಿದ್ದರೆ ಅದು ಪ್ರತಿಭಾವಂತ ಮಗುವಾಗಿದೆ ಎಂದು ಅರ್ಥ. ಏಕೆಂದರೆ ಆ ಮಗು ತನ್ನ ಮಟ್ಟಿಗೆ ಹೊಸ ಆವಿಷ್ಕಾರ ಮಾಡಿದ್ದರ ಕಾರಣದಿಂದ ಬಲದಿಂದ ಎಡಕ್ಕೆ ಬರೆದುಕೊಂಡು ಬಂದಿರುತ್ತದೆ.

ಇದನ್ನು ಗುರುತಿಸಬಲ್ಲ ಅಧ್ಯಾಪಕರಿದ್ದು, ಅವರಿಗೆ ಗುರುತಿಸಲು ಸಾಧ್ಯವಾಗುವಷ್ಟು ಸಮಯಾವಕಾಶವೂ ಇದ್ದು, ಆ ಕೆಲಸವನ್ನು ಮಾಡಿದಾಗ ಮಾತ್ರ ಪ್ರತಿಭಾವಂತರು ಬೆಳಕಿಗೆ ಬರುತ್ತಾರೆ. ಇಲ್ಲದಿದ್ದರೆ ಬುದ್ಧಿವಂತರನ್ನೇ ಪ್ರತಿಭಾವಂತರೆಂದು ಭಾವಿಸಲಾಗುತ್ತದೆ. ಬುದ್ಧಿವಂತರು ಆವಿಷ್ಕಾರಕ್ಕೆ ಮನಸ್ಸು ಮಾಡುವುದಿಲ್ಲ. ಬದಲಾಗಿ, ಹೇಳಿದ್ದನ್ನು ಅಥವಾ ಓದಿದ್ದನ್ನು ಬಹಳ ಬೇಗ ಗ್ರಹಿಸಿ, ಧಾರಣೆ ಮಾಡಿ ಉಳಿಸಿಕೊಂಡು, ಪ್ರಶ್ನೆ ಕೇಳಿದಾಗ ಉತ್ತರದ ರೂಪದಲ್ಲಿ ಪುನರುತ್ಪಾದನೆ ಮಾಡಿ ಕೊಟ್ಟುಬಿಡುತ್ತಾರೆ. ಬುದ್ಧಿವಂತರು ಮತ್ತು ಪ್ರತಿಭಾವಂತರ ಮನೋಧರ್ಮದಲ್ಲಿ ಮೂಲಭೂತವಾದ ಒಂದು ವ್ಯತ್ಯಾಸ ಇರುತ್ತದೆ. ಬರೀ ಬುದ್ಧಿವಂತರು ಸೋಲಿಗೆ ಭಯಪಡುವ ಪ್ರವೃತ್ತಿ ಹೊಂದಿರುತ್ತಾರೆ. ಆದ್ದರಿಂದ ಸಾಧನೆಯಲ್ಲಿ ಹಿನ್ನಡೆ ಆದಾಗ ಅವರು ಕುಗ್ಗುತ್ತಾರೆ. ಆಗ ಪೋಷಕರು, ಅಧ್ಯಾಪಕರು ಮತ್ತು ಸಮುದಾಯ ಅವರನ್ನು ಸಮಾಧಾನಪಡಿಸುವ ಅಗತ್ಯವಿರುತ್ತದೆ. ಅವರಿಗೆ ಬೆಂಬಲವಾಗಿ ನಿಲ್ಲಬೇಕಾಗುತ್ತದೆ. 'ಅಧ್ಯಾಪಕರು ಕೊಟ್ಟ ಉತ್ತರದಲ್ಲಿ ಒಂದಕ್ಷರವೂ ತಪ್ಪದ ಹಾಗೆ ನಾನು ಬರೆದಿದ್ದೇನೆ. ಆದರೂ ಒಂದು ಅಂಕ ಕಡಿಮೆ ಮಾಡಿದ್ದಾರೆ' ಎಂದು ಪರಿತಪಿಸುವವರಲ್ಲಿ ಈ ಲಕ್ಷಣವನ್ನು ಗುರುತಿಸಬಹುದು.

ಪ್ರತಿಭಾವಂತರು ಸೋಲಿಗೆ ಭಯಪಡುವುದಿಲ್ಲ. ಅವರಲ್ಲಿ ಅಗಾಧವಾದ ಸೃಜನಶೀಲ ಶಕ್ತಿ ಇರುತ್ತದೆ. ಥಾಮಸ್ ಆಲ್ವಾ ಎಡಿಸನ್ ಅವರ ಹಲವಾರು ಪ್ರಯೋಗಗಳು ವಿಫಲವಾದವು. ಆದರೆ ಕುಗ್ಗಲಿಲ್ಲ. ಕೊನೆಯ ಪ್ರಯೋಗ ಎಷ್ಟು ಯಶಸ್ವಿಯಾಯಿತು ಎಂದರೆ, ಎಡಿಸನ್ ಅವರ ನಿಧನಾನಂತರವೂ ಇಡೀ ಜಗತ್ತು ಅವರಿಗೆ ಚಿರಋಣಿ ಆಗಬೇಕಾಗುತ್ತದೆ. ಪ್ರತಿಭಾವಂತರಲ್ಲಿ ಪ್ರಯೋಗಶೀಲತೆ ಮತ್ತು ಆವಿಷ್ಕಾರ ಪ್ರವೃತ್ತಿ ಇರುವುದರಿಂದ, ಒಂದು ವೈಫಲ್ಯಕ್ಕೆ ಕಂಗೆಡದೆ ಮತ್ತೊಂದು ಪ್ರಯೋಗಕ್ಕೆ ತೊಡಗಿಕೊಳ್ಳುವ ಮನೋಧರ್ಮ ಇರುತ್ತದೆ.



ಇಂದಿನ ಮಾರುಕಟ್ಟೆ ಆರ್ಥಿಕತೆಯು ರೂಪಿಸಿರುವ ಶಿಕ್ಷಣ ವ್ಯವಸ್ಥೆಯು ಸೋತವನಿಗೆ ಭವಿಷ್ಯವೇ ಇಲ್ಲ ಎಂಬ ಭಾವನೆಯನ್ನು ಮಕ್ಕಳಲ್ಲಿ ಹುಟ್ಟುಹಾಕುತ್ತದೆ. ಪ್ರತಿಭಾವಂತರು ಬೆಳೆಯುವುದಕ್ಕೆ ಶಿಕ್ಷಣ ವ್ಯವಸ್ಥೆ ಬೆಂಬಲಿಸುತ್ತಿಲ್ಲ. ಅಂತಹವರು ಆವಿಷ್ಕಾರದಲ್ಲಿ ಸೋತಾಗ ಸಮಾಧಾನಪಡಿಸಬೇಕಾದ್ದಲ್ಲ, ಸೋಲನ್ನು ಸವಾಲಾಗಿ ತೆಗೆದುಕೊಳ್ಳಲು ಉತ್ತೇಜಿಸಬೇಕು. ಆಗ ಅವರು ಮತ್ತೊಂದು ಪ್ರಯೋಗಕ್ಕೆ ಇಳಿಯುತ್ತಾರೆ. ಆದರೆ ಪ್ರತಿಭಾವಂತರನ್ನು ಹತ್ತಿರಕ್ಕೆ ತೆಗೆದುಕೊಂಡ ಹಾಗೆ ಅವರನ್ನು ನಿರ್ವಹಿಸುವುದು ಸವಾಲಾಗುತ್ತದೆ. ಬುದ್ಧಿವಂತರು ಮೆಚ್ಚುಗೆ, ಬಹುಮಾನಗಳಿಂದ ಸಂತುಷ್ಟರಾಗುತ್ತಾರೆ. ಆದರೆ ಪ್ರತಿಭಾವಂತರು ಅಪಾರವಾಗಿ ಪ್ರಶ್ನಿಸುತ್ತಾರೆ. ಉತ್ತರ ಕೊಟ್ಟಾಗ ಮಾತ್ರ ಅವರು ತೃಪ್ತರಾಗುವುದು.

ಪರೀಕ್ಷೆಯ ಉತ್ತರ ಪತ್ರಿಕೆಯ ಮೌಲ್ಯಮಾಪನ ಮಾಡುವವರಿಗೆ ವಿದ್ಯಾರ್ಥಿಗಳಲ್ಲಿ ಇರುವ ಈ ವ್ಯತ್ಯಾಸದ ತಿಳಿವಳಿಕೆ ಇರಬೇಕಾಗುತ್ತದೆ. ಸ್ವತಂತ್ರ ಚಿಂತನೆ ಪ್ರತಿಭಾವಂತರ ಮೂಲಭೂತ ಲಕ್ಷಣವಾಗಿರುತ್ತದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಸ್ವತಂತ್ರ ಚಿಂತನೆ ಉತ್ತರ ಪತ್ರಿಕೆಯಲ್ಲಿ ಕಾಣಿಸದೆ ಇರಲು ಹಲವು ಕಾರಣಗಳಿವೆ. ಪ್ರಶ್ನೆ ಕೋಠಿಗಳು, ಗೈಡ್‌ಗಳು ಯಥೇಚ್ಛವಾಗಿ ವಿದ್ಯಾರ್ಥಿಗಳಿಗೆ ಪೂರೈಕೆಯಾಗುವುದರಿಂದ ಅನ್ವಯ ಮಾದರಿಯ ಪ್ರಶ್ನೆಗಳ ಉತ್ತರಗಳೂ ಬಾಯಿಪಾಠ ಮಾಡಲ್ಪಟ್ಟು ಪರೀಕ್ಷೆಯಲ್ಲಿ ಬರೆಯಲ್ಪಡುತ್ತವೆ. ಆಗ ಅಂಕಗಳು ಬರುತ್ತವೆ. ಆದರೆ ವಿದ್ಯಾರ್ಥಿಯಲ್ಲಿ ಸ್ವತಂತ್ರ ಚಿಂತನೆ ಇರುವುದಿಲ್ಲ. ಎರಡನೆಯದಾಗಿ, ಸ್ವತಂತ್ರ ಚಿಂತನೆಯನ್ನು ತನ್ನದೇ ಭಾಷೆಯಲ್ಲಿ ಹೇಳುವ ಕೌಶಲ ವಿದ್ಯಾರ್ಥಿಗಿಲ್ಲದಿದ್ದರೆ ಬಾಯಿಪಾಠ ಅನಿವಾರ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಭಾಷಾ ಕೌಶಲಗಳ ಕಲಿಸುವಿಕೆ ದುರ್ಬಲಗೊಂಡಿರುವುದರಿಂದ ತನ್ನದೇ ಯೋಚನೆಯನ್ನು ವಾಕ್ಯ ಮಾಡಿ ಬರೆಯುವ ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತಿದೆ. ಆಗಲೂ ಅವರು ತನ್ನದಲ್ಲದ ಕಲಿಕಾ ಪಠ್ಯಗಳ ವಾಕ್ಯಗಳನ್ನೇ ಬಾಯಿಪಾಠ ಮಾಡುವುದು ಅನಿವಾರ್ಯವಾಗುತ್ತದೆ.

ಮೂರನೆಯದು, ಮೌಲ್ಯಮಾಪಕರ ಗುಣಮಟ್ಟದ ಸಮಸ್ಯೆ. ಮೌಲ್ಯಮಾಪಕರಿಗೆ 'ಕೀ' ಉತ್ತರಗಳನ್ನು ಕೊಡಲಾಗಿರುತ್ತದೆ. ವಿದ್ಯಾರ್ಥಿಯ ಉತ್ತರ ತನ್ನದೇ ವಾಕ್ಯದಲ್ಲಿ ಇರಬಹುದು, ಕೀ ಉತ್ತರದಲ್ಲಿರುವ ವಾಕ್ಯವೇ ಆಗಬೇಕಾಗಿಲ್ಲ. ಮೌಲ್ಯಮಾಪಕರು ಇದನ್ನು ಅರಿತುಕೊಳ್ಳದೆ ಕೀ ಉತ್ತರದ ವಾಕ್ಯವೇ ಆಗಬೇಕೆಂದು ಭಾವಿಸಿದರೆ ಅಥವಾ ತಾನು ತನ್ನ ವಿದ್ಯಾರ್ಥಿಗಳಿಗೆ ಕೊಟ್ಟ ನೋಟ್ಸ್‌ನ ಪ್ರಕಾರವೇ ಇರಬೇಕೆಂದು ಭಾವಿಸಿದರೆ ಪ್ರತಿಭಾವಂತರಿಗೆ ಕಡಿಮೆ ಅಂಕಗಳು ಬಂದು ಅನ್ಯಾಯವಾಗುತ್ತದೆ. ಇದು ಬರೀ ಅಂಕಗಳಲ್ಲಿ ಅನ್ಯಾಯ ಮಾತ್ರವಲ್ಲದೆ ಪ್ರತಿಭೆಯ ವಿಕಾಸಕ್ಕೂ ವಿರೋಧಿಯಾಗಿರುತ್ತದೆ.

ಪ್ರತಿಭಾವಂತರು ಕೀ ಉತ್ತರಗಳಲ್ಲಿ ಕೊಟ್ಟಿರುವುದಕ್ಕಿಂತಲೂ ಉನ್ನತ ಗುಣಮಟ್ಟದ ಉತ್ತರಗಳನ್ನು ಬರೆದಿರಬಹುದು. ಆಗ ಆ ಉತ್ತರಕ್ಕೆ ಜಾಸ್ತಿ ಅಂಕಗಳು ಸಿಗಬೇಕು. ಅದು ಪ್ರತಿಭೆಗೆ ಉತ್ತೇಜನಕಾರಿಯಾಗಿರುತ್ತದೆ. ಈ ವಿಚಾರದಲ್ಲಿ ಮೌಲ್ಯಮಾಪಕರು ಹೆಚ್ಚು ಪರಿಣತರಾಗಬೇಕು.

## ಚುರುಮುರಿ



# ಬಾಹುಬಲಿ ಶಕ್ತಿ

● ಕೆ.ವಿ.ರಾಜಲಕ್ಷ್ಮಿ

'ಬಾಹುಬಲಿ ಸುದ್ದಿ ನೋಡಿದಿರಾ?' ನನ್ನವಳ ಅಚ್ಚರಿಯ ಪ್ರಶ್ನೆ.

'ನಿನ್ನೆ ಬಲಶಾಲಿ ಬಾಹುಬಲಿ, ಇವತ್ತು ಕಾಂಟ್ರವರ್ಶಿಯಲ್ ಅವತಾರಪುರುಷ, ಪ್ರಭಾಸ್ ಬಗ್ಗೆ ತಾನೇ?' ಪುಟ್ಟಿ ಥಟ್ಟಂತ ಉತ್ತರಿಸಿದಳು.

'ಅದಲ್ಲ, ಅರ್ಧ ಗಂಟೇಲಿ 12 ಕೆ.ಜಿ. ಸಮೋಸ ತಿಂದ್ರೆ 71 ಸಾವಿರ ರೂಪಾಯಿ ಬಹುಮಾನ! ಬಾಯಲ್ಲಿ ನೀರೂರಿಸೋ ಆಹ್ವಾನ'.

'ಮುದ್ದೆ ತಿನ್ನೋ ಸ್ಪರ್ಧೆ ಹಾಗೆ... ಮುದ್ದೆ ನುಂಗಬಹುದು, ಇದು ಹಾಗಲ್ವೇ. ನುಂಗಕ್ಕೆ ಹೋಗಿ ಗಂಟಲಲ್ಲಿ ಸಿಕ್ಹಾಕ್ಕೊಂಡು, ಅಯ್ಯೋ ಕಲ್ಪಿಸಿಕೊಳ್ಳೋಕೂ ಸಾಧ್ಯವಿಲ್ಲ' ಅತ್ತೆ ಉಗುಳು ನುಂಗಿದರು. 'ಅದಕ್ಕೆ ಬದಲು ತಿಂದಷ್ಟಕ್ಕೆ ಅನುಸಾರವಾಗಿ ಬಹುಮಾನ ಕೊಟ್ಟರೆ ಟ್ರೈ ಮಾಡಬಹುದು' ಪುಟ್ಟಿಯ ಚಟಾಕಿ.

'ಶಕ್ತಿಯಿದ್ದವ್ರು ಗೆಲ್ತಾರೆ, ಈಗ ಬಸ್‌ಗಳಲ್ಲಿ ನೋಡ್ತಿದ್ದೀವಲ್ಲ, ಶಕ್ತಿಯಿದ್ದವರೆಲ್ಲ ಬಸ್ಸಲ್ಲಿ ನುಗ್ಗಿ ಹೇಗೋ ಜಾಗ ಹಿಡೀತಾರೆ. ಅಶಕ್ತರು ಮುಂದಿನ ಬಸ್‌ಗೆ ಕಾಯ್ತಾನೇ ಇರ್ತಾರೆ. ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್' ನನ್ನ ಕಾಮೆಂಟ್ ಕೊಟ್ಟೆ.

'ಪುಟ್ಟಿಗೆ ಕಾಲೇಜಿಗೆ ಹೋಗೋಕೆ ಬದಲಿ ವ್ಯವಸ್ಥೆ ಮಾಡಿ, ಉಚಿತ ಬಸ್‌ನಲ್ಲಿ ಓಡಾಡೋ ಶಕ್ತಿಯಿಲ್ಲದೆ ವಾರದಿಂದ ಕಾಲೇಜಿಗೆ ಸರಿಯಾದ ಸಮಯಕ್ಕೆ ಹೋಗೋಕ್ಕಾಗದೆ ಹಾಜರಾತಿ ಕಡಿಮೆಯಾಗ್ತಿದೆ' ಹೊಸ ಅಹವಾಲು!

'ಬದಲಿ ಅಂದ್ರೆ? ಸ್ಕೂಟಿ?' ನನ್ನ ಜೇಬಿಗೆ ಕತ್ತರಿ ಖಚಿತ.

'ರಾತ್ರಿಯಿಂದ ಅದೇನು ಮಳೆ, ನನಗಂತೂ ಸಾಕಾಗಿಹೋಯ್ತು, ಅಂತೂ ಕೆಲಸ ಮುಗಿಸಿದ ಸಮಾಧಾನ' ಕೊಡೆ ಹೊರಗಿಟ್ಟು, ತಲೆ ಕೊಡವಿಕೊಳ್ಳುತ್ತ ಕಂಠಿ ಬಂದ. 'ಯಾವ ಘನಂದಾರಿ ಕಾರ್ಯವೋ?' ನಾನು ಕಾಲೆಳೆದೆ.

'ಉಚಿತ ಕರೆಂಟಿನ ಸವಲತ್ತು ಬೇಕೂಂದ್ರೆ ದಾಖಲಿಸಬೇಕಲ್ಲ? ಮೊನ್ನೆಯಿಂದ ಹೆಣಗಾಡಿ ಇವತ್ತಿಗೆ ಮುಗೀತು. ಇವತ್ತು ಬಾಸ್ ಮನೆ ಜ್ಯೋತಿ ಕೆಲಸ' ಎಂದವನೇ, ಸುಮ್ಮನಿರದೆ 'ನಿಮ್ಮ ಗೃಹಜ್ಯೋತಿ ಲಿಂಕಿಂಗ್ ಆಯ್ತಾ?' ಕೆಣಕಿದ.

'ನಿಮ್ಮಷ್ಟು ಜಾಣತನ ಎಲ್ಲಿ ಬರ್ಬೇಕು?' ಅತ್ತೆ ಇಂಡೈರೆಕ್ಟಾಗಿ ಗೊಣಗಿದರು.

'ನಿಮಗೋಸ್ಕರ ಕಾಯ್ತಿದ್ರು, ಕಾಫಿ ಕುಡಿದು ಮಳೆ ನಿಲ್ಲುತ್ತಲೇ ಹೊರಡುವಿರಂತೆ, ಇರಿ' ನನ್ನವಳು ನಯವಾಗಿ ಎಚ್ಚರಿಸಿದಳು.

## ಸಂಗತ

# ಕೆಲಸದ ಆಚೆಯೂ ಒಂದು ಬದುಕಿದೆ

## ಸತತ ಕೆಲಸಕ್ಕಾಗಿ ಆಯಸ್ಸನ್ನು ಖರ್ಚು ಮಾಡಿದರೆ ನಾವು ಯಾವ ವಯಸ್ಸಿನಲ್ಲಿ ಬದುಕನ್ನು ಸಂಭ್ರಮಿಸಬೇಕು?

● ಸದಾಶಿವ್ ಸೊರಟೂರು

**ವೃದ್ಧರೊಬ್ಬರು** ಪುಟ್ಟ ಹೋಟೆಲ್ ನಡೆಸುತ್ತಾರೆ. ಬೆಳಿಗ್ಗೆ ಏಳರಿಂದ ಹನ್ನೊಂದು ಮತ್ತು ಸಂಜೆ ನಾಲ್ಕರಿಂದ ಏಳು ಗಂಟೆವರೆಗೆ ಮಾತ್ರ ಅವರು ಹೋಟೆಲ್‌ನ ಬಾಗಿಲು ತೆರೆಯುತ್ತಾರೆ. ವ್ಯಾಪಾರ ಹೆಚ್ಚೇನೂ ಇಲ್ಲ, ಸಮಾಧಾನಕರವಾಗಿದೆ ಅಷ್ಟೇ. 'ನೀವೇಕೆ ದಿನಪೂರ್ತಿ ಬಾಗಿಲು ತೆರೆದು ಕೂರಬಾರದು? ಹೆಚ್ಚು ವ್ಯಾಪಾರ ನಡೆದು, ಹೆಚ್ಚು ಹಣ ಬರುತ್ತೆ' ಅಂದೆ. 'ನಾನು ದುಡಿಯಲು ಬದುಕಿದವನಲ್ಲ, ಬದುಕಲು ದುಡಿಯುವವನು' ಅನ್ನಬೇಕೆ? ಕೆಲಸ, ಬಿಡುವು, ಬದುಕು, ಖುಷಿ ಇದರ ಬಗ್ಗೆಯೆಲ್ಲಾ ಮಾತಾಡಿದರು. ಕೆಲಸದ ಬಗೆಗೆ ಅವರ ಧೋರಣೆ ಇಷ್ಟವಾಯಿತು.

ನಾನು ಹೊಸದಾಗಿ ಕೆಲಸಕ್ಕೆ ಸೇರಿದಾಗ ನನ್ನ ಕರ್ತವ್ಯದ ಅವಧಿ ಮುಗಿದರೂ ಅಲ್ಲೇ ಏನಾದರೂ ಮಾಡುತ್ತಾ ಕೂತಿರುತ್ತಿದ್ದೆ. ಒಬ್ಬನೇ ರೂಮಿನಲ್ಲಿ ಮಾಡುವುದಾದರೂ ಏನು ಎಂಬುದು ನನ್ನ ವಿಚಾರವಾಗಿತ್ತು. ಕೆಲವೊಮ್ಮೆ ಭಾನುವಾರವೂ ಕಚೇರಿ ಕಡೆ ಹೋಗುತ್ತಿದ್ದೆ. ಒಂದು ದಿನ ಮ್ಯಾನೇಜರ್ ಕರೆದು ಹೇಳಿದರು 'ಈ ಅಭ್ಯಾಸ ಸರಿ ಅಲ್ಲ. ಕೆಲಸದಷ್ಟೇ ವಿರಾಮವೂ ಮುಖ್ಯ. ಕೆಲಸದ ಗೀಳು ಹೀಗೆ ರೂಢಿಯಾಗಿಬಿಟ್ಟರೆ ನಿನಗೂ ಮತ್ತು ಆ ಕಚೇರಿಯ ಬೇರೆಯವರಿಗೂ ಕಿರಿಕಿರಿ. ಸದಾ ದುಡಿಯುತ್ತಾ ಇರೋದು ಒಳ್ಳೆಯ ಜೀವನದ ಲಕ್ಷಣ ಅಲ್ಲ' ಎಂದರು. ಅಂದಿನಿಂದ ಕೆಲಸದ ಬಗೆಗಿನ ನನ್ನ ಅಭಿಪ್ರಾಯ ಬದಲಾಯಿತು.

ಹೆಚ್ಚು ಹೆಚ್ಚು ದುಡಿದಷ್ಟೂ ಮನುಷ್ಯ ಹೆಚ್ಚು ಸುಖವಾಗಿರಬೇಕಿತ್ತು, ಖುಷಿಯಾಗಿರಬೇಕಿತ್ತು. ಆದರೆ ಅದು ಹಾಗಾಗುತ್ತಿಲ್ಲ. ಎಷ್ಟು ದುಡಿಯಬೇಕು ಎಂಬುದರ ಬಗ್ಗೆ ನಮಗೆ ಅಂದಾಜಿಲ್ಲದ ಕಾರಣ ಮತ್ತೆ ಮತ್ತೆ ದುಡಿಯುತ್ತೇವೆ ಮತ್ತು ಮೊದಲಿನಷ್ಟೇ ತೊಳಲಾಡುತ್ತೇವೆ. ಮೊದಲು ಮನುಷ್ಯ ಕಡಿಮೆ ದುಡಿಯುತ್ತಿದ್ದ ಹೆಚ್ಚು ಖುಷಿಯಾಗಿದ್ದ, ಈಗ ಹೆಚ್ಚು ದುಡಿಯುತ್ತಿದ್ದಾನೆ ಕಡಿಮೆ ಖುಷಿಯಾಗಿದ್ದಾನೆ.

ಕೆಲಸ ಕಡಿಮೆ ಮಾಡಬೇಕು ಅನ್ನುವುದರ ಹಿಂದೆ ವಿರಾಮ ಬೇಕು ಅನ್ನುವ ಅರ್ಥವಿದೆ. ವಿರಾಮ ಅನ್ನುವುದನ್ನು ಸೋಮಾರಿತನ ಎಂದು ಅರ್ಥೈಸಿಕೊಳ್ಳಬಾರದು. ಈ ಎರಡರ ನಡುವೆ ಸೂಕ್ಷ್ಮ ಅರ್ಥವ್ಯತ್ಯಾಸಗಳಿವೆ. ಬಿಡುವನ್ನು ಬಳಸಿಕೊಳ್ಳುವುದರ ಬಗ್ಗೆ ವಿರಾಮ ವ್ಯಾಖ್ಯಾನಿಸುತ್ತದೆ. ವಿರಾಮದಲ್ಲಿ ಬದುಕನ್ನು ಪರಿಣಾಮಕಾರಿಯಾಗಿಸುವ ಬಹಳಷ್ಟು ಅವಕಾಶಗಳಿವೆ.

ಮನುಷ್ಯನ ನಾಗರಿಕತೆಯನ್ನು ಗಮನಿಸಿದರೆ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಯಂತಹವು ಹೇಗೆ ರೂಪುಗೊಂಡವು ಎಂಬುದು ಗೊತ್ತಾಗುತ್ತದೆ. ಅವನು ಬರೀ ದುಡಿದುಕೊಂಡೇ ಇದ್ದರೆ ಕಲೆ ಸಾಧ್ಯವಾಗುತ್ತಿರಲಿಲ್ಲ. ಅವನು ತನಗೆ ಎಷ್ಟು ಬೇಕೊ ಅಷ್ಟು ದುಡಿಯುತ್ತಿದ್ದ. ಉಳಿದ ಸಮಯವನ್ನು ತನಗೆ ಖುಷಿ ಕೊಡುವ ಚಟುವಟಿಕೆಗಳಲ್ಲಿ ಕಳೆಯುತ್ತಿದ್ದ. ಅದು ಅವನ ಜೀವನದ ಗುಣಮಟ್ಟದ ಗುಟ್ಟನ್ನು ಹೇಳುತ್ತದೆ.

ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್, ನಮ್ಮಲ್ಲಿರುವ ಉತ್ಪಾದಕತೆ ಮತ್ತು ತಂತ್ರಜ್ಞಾನವನ್ನು ಆಧರಿಸಿ ಸುಖವಾಗಿ ಬದುಕಲು ವಾರಕ್ಕೆ ಹದಿನೈದು ಗಂಟೆಗಳ ಕೆಲಸ ಮಾತ್ರ ಸಾಕು ಅಂತ ಸುಮಾರು ತೊಂಬತ್ತು ವರ್ಷದ ಹಿಂದೆಯೇ ಹೇಳಿದ್ದಾನೆ. ನಾವು ವಾರಕ್ಕೆ ಎಷ್ಟು ಗಂಟೆ ದುಡಿಯುತ್ತೇವೆ ಮತ್ತು ಅದೆಷ್ಟು ಖುಷಿಯಾಗಿದ್ದೇವೆ ಯೋಚಿಸಿ. ಇಂದಿಗೂ ಕೆಲವು ಆದಿವಾಸಿಗಳು ತಿಂಗಳಿಗೆ ಹದಿನೈದು ದಿನ ಕೆಲಸ ಮಾಡಿ ಖುಷಿಯಾಗಿರುವ ಉದಾಹರಣೆಗಳಿವೆ.

ಬಹುತೇಕ ದೇಶಗಳಲ್ಲಿ ನೌಕರರು ವಾರಕ್ಕೆ ಐದು ದಿನವಷ್ಟೇ ಕೆಲಸ ಮಾಡುತ್ತಾರೆ. ನಮ್ಮಲ್ಲೂ ನೌಕರರಿಗೆ ಐದು ದಿನ ಮಾತ್ರ ಕೆಲಸ ನೀಡುವ ಬಗ್ಗೆ ಚರ್ಚೆಗಳಾಗುತ್ತಿವೆ. ಇದು ಒಳ್ಳೆಯ ಬೆಳವಣಿಗೆ. ಉಳಿದ ಎರಡು ದಿನಗಳಲ್ಲಿ ಅವನು ಸಿನಿಮಾ ನೋಡಬಹುದು, ಪ್ರವಾಸ ಹೊರಡಬಹುದು, ಓದಬಹುದು, ಸಂಗೀತ ಕಲಿಯಬಹುದು, ಆಟ ಆಡಬಹುದು, ಇಲ್ಲವೇ ಚೆನ್ನಾಗಿ ನಿದ್ರಿಸಬಹುದು, ಗೆಳೆಯರೊಂದಿಗೆ ಬೆರೆಯಬಹುದು. ಇಂತಹ ಹತ್ತಾರು ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಅವನ ಬದುಕಿನ ಗುಣಮಟ್ಟವನ್ನು ಹೆಚ್ಚಿಸುತ್ತವೆ.



ನಿರಂತರ ಕೆಲಸದಿಂದ ದೇಹ ಬಳಲುತ್ತದೆ. ಮನಸ್ಸಿಗೂ ಸುಸ್ತು. ಬೇರೆ ಯಾವುದರ ಕಡೆಗೂ ಆಸಕ್ತಿ ಉಳಿಯುವುದಿಲ್ಲ. ಕೆಲವರು ದುಡಿಯುವ ವಯಸ್ಸಿನಲ್ಲಿ ದುಡಿಯಬೇಕು ಅನ್ನುತ್ತಾರೆ. ದುಡಿಯುವ ವಯಸ್ಸು ಕೂಡ ಬದುಕು ಸವಿಯುವ ವಯಸ್ಸೇ ಆಗಿರುತ್ತದೆ. ಸತತ ಕೆಲಸಕ್ಕಾಗಿ ಆಯಸ್ಸನ್ನು ಖರ್ಚು ಮಾಡಿದರೆ ನಾವು ಯಾವ ವಯಸ್ಸಿನಲ್ಲಿ ಬದುಕನ್ನು ಸಂಭ್ರಮಿಸಬೇಕು? ಲೇಖಕ ಸುಜ್‌ಮನ್ ತನ್ನ 'ವರ್ಕ್' ಎಂಬ ಪುಸ್ತಕದಲ್ಲಿ ಕೆಲಸದ ಇತಿಹಾಸದ ಬಗ್ಗೆ ಹೇಳುತ್ತಾ, ಹೆಚ್ಚು ದುಡಿಯುವುದು ಹೇಗೆ ಬದುಕಿನ ಒಳ್ಳೆಯ ಸಮಯವನ್ನು ಕಬಳಿಸುತ್ತದೆ ಎಂಬುದನ್ನು ತುಂಬಾ ಅರ್ಥಗರ್ಭಿತವಾಗಿ ಚರ್ಚಿಸಿದ್ದಾರೆ.

ಕೆಲವು ಶಿಕ್ಷಕರು ರಜೆಯನ್ನು ಅನುಲಕ್ಷಿಸಿ ಭಾನುವಾರವೂ ದುಡಿಯುತ್ತಾರೆ. ಕಂಪನಿಗಳಲ್ಲಿ ನೌಕರರು ಓ.ಟಿ. ಬೆನ್ನು ಹತ್ತುತ್ತಾರೆ. ರೈತ ಹಗಲು– ರಾತ್ರಿ ಹೊಲದಲ್ಲಿರುತ್ತಾನೆ. ಕೆಲವರಂತೂ ದಿನಕ್ಕೆ ಹದಿನಾರು ಗಂಟೆ ಆಟೊ ಓಡಿಸುತ್ತಾರೆ. ಇನ್ನು ಕೆಲವರದು ಸಮಯವೇ ಇರದ ದುಡಿಮೆ... ಹೀಗೆ ನಾವೆಲ್ಲಾ ಸತತವಾಗಿ ಕೆಲಸದ ಬೆನ್ನು ಹತ್ತಿ, ಪಡೆದುಕೊಂಡಿದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು.

'ಕತ್ತೆ ದುಡಿದ ಹಾಗೆ ದುಡಿಯುತ್ತಾರೆ, ಆದರೂ ಮೇಲೆ ಬಂದಿಲ್ಲ' ಎನ್ನುವ ಮಾತನ್ನು ನೀವು ಕೇಳಿರಬಹುದು. ಹೆಚ್ಚಿನ ದುಡಿಮೆ ಬದುಕಿನ ಗುರಿಯ ಮೇಲಿನ ಗಮನವನ್ನು ತಪ್ಪಿಸಬಹುದು. ಮೈ ಬಗ್ಗಿಸಿ ದುಡಿಯುವುದು ಮಾತ್ರವಲ್ಲ, ಯಾಕೆ ಈ ಕೆಲಸ, ಏನು ಉಪಯೋಗ ಎಂದು ಯೋಚಿಸಬೇಕು. ಏಕೆಂದರೆ ಬದುಕು ಎನ್ನುವುದು ಕೆಲಸದ ಆಚೆಯೂ ಇದೆ!

## ವಾಚಕರ ವಾಣಿ

### 'ನಮ್ಮ ಕ್ಲಿನಿಕ್' ಮುಂದುವರಿಯಲಿ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರುತ್ತಿರುವುದು ಖುಷಿಯ ವಿಚಾರ. ಆದರೆ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದ 'ನಮ್ಮ ಕ್ಲಿನಿಕ್' ಯೋಜನೆ ಮುಂದುವರಿಯಲಿ. ಬಡವರು ಹಾಗೂ ಕೂಲಿ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಸೌಲಭ್ಯಗಳು ಸುಲಭವಾಗಿ ಅವರ ಕೈಗೆಟಕುವ ಹಾಗೆ ಸರ್ಕಾರವು ಬೆಂಗಳೂರಿನ ಪ್ರತಿ ವಾರ್ಡ್‌ನಲ್ಲಿ 'ನಮ್ಮ ಕ್ಲಿನಿಕ್'ಗಳನ್ನು ಪ್ರಾರಂಭಿಸಿತ್ತು. ಆದರೆ ಸರ್ಕಾರದ ಚುಕ್ಕಾಣಿ ಹಿಡಿದವರು ಬದಲಾದ ಕಾರಣದಿಂದ ಅದು ಬರೀ ಬೆಂಗಳೂರಿಗೆ ಸೀಮಿತವಾಗಿದೆ.

ಹಳ್ಳಿಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಕೆಲವು ಹಳ್ಳಿಗಳಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲಾಗಿದೆ. ಹೀಗಾಗಿ, ಒಂದು ಊರಿನ ಜನರು ಮತ್ತೊಂದು ದೂರದ ಊರಿಗೆ ಹೋಗಿ ಆರೋಗ್ಯ ಸೌಲಭ್ಯವನ್ನು ಪಡೆಯಲು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. 'ನಮ್ಮ ಕ್ಲಿನಿಕ್' ಪ್ರತಿ ಹಳ್ಳಿಯಲ್ಲೂ ಸ್ಥಾಪನೆಯಾದರೆ, ಅಲ್ಲಿನ ಬಡವರು ಹಾಗೂ ರೈತರಿಗೆ ತುಂಬಾ ಸಹಾಯವಾಗುತ್ತದೆ.

**ಅಭಿಷೇಕ್ ಚವ್ಹಾಣ,** ವಿಜಯಪುರ

### ಬೇಕು ಶಕ್ತಿ...!

ಆ ಬಸ್ಸಿನಲ್ಲಿ
ಸ್ತ್ರೀಯರು
ಸಂಚರಿಸಬೇಕಾದರೆ
ಆಧಾರ್ ಕಾರ್ಡ್
ಗುರುತಿನ ಪತ್ರ
ಇವಷ್ಟೇ ಇದ್ದರೆ ಸಾಲದು
ಜೊತೆಗೆ ಇರಲೇಬೇಕು
ಮೈತುಂಬಾ 'ಶಕ್ತಿ'!

**ಮ.ಗು.ಬಸವಣ್ಣ**
ನಂಜನಗೂಡು

### ಹೇಳಿಕೆಗೆ ಬದ್ಧರಾಗಿ, ಸಾಕ್ಷ್ಯಾಧಾರ ಮುಂದಿಡಿ

ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಸ್ಪಂದಿಸದೆ ಬಡವರ ವಿರೋಧಿ ನೀತಿ ಅನುಸರಿಸುತ್ತಿದೆ ಹಾಗೂ ದ್ವೇಷರಾಜಕಾರಣ ಮಾಡುತ್ತಿದೆ, ವಿದ್ಯುತ್ ದರ ಏರಿಕೆಗೆ ಈ ಹಿಂದೆ ಆಡಳಿತ ನಡೆಸಿದ ಬಿಜೆಪಿ ಕಾರಣ ಎಂದೆಲ್ಲ ಕಾಂಗ್ರೆಸ್ ನಾಯಕರು ದಿನಬೆಳಗಾದರೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ ರಾಜ್ಯಗಳು ತಮ್ಮ ಯೋಜನೆಗಳಿಗೆ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಕೇಂದ್ರ ಸರ್ಕಾರ ಹೇಳುತ್ತದೆ. ವಿದ್ಯುತ್ ದರ ಪರಿಷ್ಕರಣೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಬೇಡಿಕೆ ಸಲ್ಲಿಸಿದ್ದರೂ ತಮ್ಮ ಆಡಳಿತಾವಧಿಯಲ್ಲಿ ಬೇಡಿಕೆಯನ್ನು ತಿರಸ್ಕರಿಸಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಆದರೆ ಕಾಂಗ್ರೆಸ್ ನಾಯಕರು ಮಾತ್ರ ವಿದ್ಯುತ್ ದರ ಏರಿಕೆಗೆ ಬಿಜೆಪಿ ಅನುಮೋದನೆ ನೀಡಿದೆ ಎಂದು ಹೇಳುತ್ತಾರೆ.

ಎರಡೂ ಪಕ್ಷಗಳ ನಾಯಕರ ತದ್ವಿರುದ್ಧ ಹೇಳಿಕೆಗಳು ಜನರನ್ನು ಗೊಂದಲಕ್ಕೆ ಈಡುಮಾಡಿವೆ. ಆದ್ದರಿಂದ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ತಮ್ಮ ಹೇಳಿಕೆಗಳಿಗೆ ಬದ್ಧರಾಗಿದ್ದು, ಸೂಕ್ತ ಸಾಕ್ಷ್ಯಾಧಾರಗಳನ್ನು ಜನರ ಮುಂದಿಟ್ಟು ಸಂಶಯವನ್ನು ನಿವಾರಿಸಬೇಕಾಗಿದೆ.

**ಜಿ.ನಾಗೇಂದ್ರ ಕಾವೂರು,** ಸಂಡೂರು

### ಮಕ್ಕಳಿಗೆ ಸಂಸ್ಕಾರ ಕಲಿಸುವುದಾದರೂ ಹೇಗೆ?

ಚಾಕೊಲೇಟ್ ತಿನ್ನಬಾರದೆಂದು ಅಪ್ಪ ಬೈದ ಕಾರಣಕ್ಕಾಗಿ 9 ಹಾಗೂ 11 ವರ್ಷದ ಅಕ್ಕತಂಗಿಯರು ಮನನೊಂದು, ಉಚಿತ ಬಸ್ ಪ್ರಯಾಣ ಸೌಲಭ್ಯ ಬಳಸಿಕೊಂಡು ಧರ್ಮಸ್ಥಳಕ್ಕೆ ಹೋಗಿದ್ದ ಸುದ್ದಿ ಓದಿ (ಪ್ರ.ವಾ., ಜೂನ್ 20) ವಿಷಾದದ ಜೊತೆಗೆ ಕಳವಳವೂ ಆಯಿತು. ಹೀಗಾದರೆ ಈಗಿನ ಮಕ್ಕಳ ಪಾಲನೆ ಪೋಷಣೆ ಮಾಡುವುದಾದರೂ ಹೇಗೆ? ಮನೆಯಲ್ಲಿ ತಂದೆ, ತಾಯಿ ಬುದ್ಧಿ ಹೇಳುವ ಹಾಗಿಲ್ಲ, ಶಾಲೆಯಲ್ಲಿ ಶಿಕ್ಷಕರು ಶಿಕ್ಷಿಸುವಂತಿಲ್ಲ.

ಈ ವಯಸ್ಸಿಗೇ ಮನ ನೋಯುತ್ತದೆ ಎಂದರೆ ಆ ಮಕ್ಕಳಿಗೆ ಅದರ ಅರ್ಥವಾದರೂ ಗೊತ್ತಿರುತ್ತದೆಯೇ? ಮಕ್ಕಳಿಗೆ ಸುಂದರ ಸಾರ್ಥಕ ಜೀವನವನ್ನು, ಭವಿಷ್ಯವನ್ನು ರೂಪಿಸಿಕೊಳ್ಳುವ ಒಂದು ಸಂಸ್ಕಾರ ಕೊಡುವುದಾದರೂ ಹೇಗೆ? ಇದು ಹೀಗೇ ಮುಂದುವರಿದರೆ ಮುಂದೆ ಸುಸಂಸ್ಕೃತ ಸಮಾಜದ ಬದಲು ಸ್ವೇಚ್ಛಾಚಾರದ ಸಮಾಜವನ್ನು ನೋಡಬೇಕಾಗುತ್ತದೇನೋ.

**ಅರ್ಚನಾ ಶಂಕರ್,** ಬೆಂಗಳೂರು

### ಇಲ್ಲಿ ಯಾಕಿಲ್ಲ 'ಡಿಜಿಟಲ್ ಪೇಮೆಂಟ್'?

ನಾನು ಮತ್ತು ನನ್ನ ಶ್ರೀಮತಿ ಪಾಸ್‌ಪೋರ್ಟ್ ನವೀಕರಣಕ್ಕಾಗಿ ಇತ್ತೀಚೆಗೆ ತತ್ಕಾಲ್‌ನಲ್ಲಿ ನೋಂದಣಿ ಮಾಡಿಕೊಂಡು ಹುಬ್ಬಳ್ಳಿಯ ಪಾಸ್‌ಪೋರ್ಟ್ ಕಚೇರಿಗೆ ಹೋಗಿದ್ದೆವು. ಅಲ್ಲಿ ಸೆಕ್ಯೂರಿಟಿಯಿಂದ ಹಿಡಿದು ಎಲ್ಲಾ ಸಿಬ್ಬಂದಿ ಪ್ರತಿ ಬಾರಿ ನಿಗದಿತ ಶುಲ್ಕ ಭರಿಸಲು ನಮ್ಮಲ್ಲಿ ನಗದು ಹಣ ಇದೆಯೇ ಎಂದು ಕೇಳುತ್ತಿದ್ದರು. ನನಗಂತೂ ಇದರಿಂದ ತುಂಬಾ ಆಶ್ಚರ್ಯವಾಯಿತು.

ಕುತೂಹಲ ತಡೆಯಲಾರದೆ, ನಗದು ಶುಲ್ಕ ಪಾವತಿ ಮಾಡುವಾಗ 'ನಮ್ಮ ಪ್ರಧಾನಮಂತ್ರಿಯಿಂದ ಹಿಡಿದು ಕೇಂದ್ರ ಸರ್ಕಾರದ ಎಲ್ಲಾ ವಿಭಾಗದವರು ಡಿಜಿಟಲ್ ಪೇಮೆಂಟ್ ಮಾಡಲು ನಮಗೆ ಸಲಹೆ ನೀಡುತ್ತಾರೆ. ಆದರೆ ನೀವು ನಗದು ಕೇಳುತ್ತೀದ್ದೀರಿ, ಯಾಕೆ' ಎಂದು ಸಿಬ್ಬಂದಿಯನ್ನು ಕೇಳಿದೆ. ಆದರೆ ಅವರಿಂದ ನಮಗೆ ಯಾವುದೇ ಸಮಂಜಸವಾದ ಉತ್ತರ ಬರಲಿಲ್ಲ. ಏನೇನೋ ಕಾರಣ ಹೇಳಿದರು. ದಯವಿಟ್ಟು ಇನ್ನು ಮುಂದಾದರೂ ಡಿಜಿಟಲ್ ವ್ಯವಸ್ಥೆಯ ಮೂಲಕ ಪಾವತಿಸಲು ಸಂಬಂಧಪಟ್ಟವರು ಅನುವು ಮಾಡಿಕೊಡಬೇಕು.

**ಪಿ.ಎಚ್.ಪಾಟೀಲ್,** ರಾಣೆಬೆನ್ನೂರು

### ನೆರವಿಗೆ ಮನವಿ

ಹದಿಮೂರು ವರ್ಷದ ನನ್ನ ಮಗಳು ವಿನುತಾ, ಆಸ್ಟಿಯೋಸಾರ್ಕೋಮಾ ಎಂಬ ಒಂದು ಬಗೆಯ ಮೂಳೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾಳೆ. ಆಕೆಗೆ ನಡೆಯಬೇಕಾದ ಕಿಮೊಥೆರಪಿ, ಶಸ್ತ್ರಚಿಕಿತ್ಸೆ ಮತ್ತು ಇತರ ಚಿಕಿತ್ಸೆಗೆ 19 ಲಕ್ಷ ರೂಪಾಯಿ ವೆಚ್ಚವಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ. ಅಷ್ಟೊಂದು ಹಣ ಭರಿಸುವ ಸ್ಥಿತಿಯಲ್ಲಿ ನಮ್ಮ ಕುಟುಂಬ ಇಲ್ಲ. ಹೀಗಾಗಿ ದಾನಿಗಳು ದಯಮಾಡಿ ನೆರವಾಗಿ. ನನ್ನ ಬ್ಯಾಂಕ್ ಖಾತೆ ವಿವರ: ಹೇಮಾ, ಕರ್ನಾಟಕ ಬ್ಯಾಂಕ್, ಖಾತೆ ಸಂಖ್ಯೆ: 7092500101895101, IFSC: KARB0000709, ಗೂಗಲ್ ಪೇ ಅಥವಾ ಫೋನ್ ಪೇ ಸಂಖ್ಯೆ- 7090221842.

**ಹೇಮಾ,** ಶ್ರೀರಂಗಪಟ್ಟಣ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

ಅಂತರರಾಷ್ಟ್ರೀಯ ಯೋಗ ದಿನ ಇಂದು

# ಪ್ರಾಚೀನ ಆಚರಣೆಗೆ ಜಾಗತಿಕ ಮನ್ನಣೆ



ಲಂಡನ್‌ನಲ್ಲಿ ಬುಧವಾರ ನಡೆಯಲಿರುವ ಯೋಗ ಕಾರ್ಯಕ್ರಮಕ್ಕಾಗಿ ಮಂಗಳವಾರ ತಾಲೀಮು ನಡೆಸಲಾಯಿತು –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಇದೇ ಬುಧವಾರದಂದು ವಿಶ್ವದಾದ್ಯಂತ 'ಅಂತರರಾಷ್ಟ್ರೀಯ ಯೋಗ ದಿನಾಚರಣೆ' ನಡೆಯಲಿದೆ. ಇದು ಒಂಬತ್ತನೇ ಯೋಗ ದಿನಾಚರಣೆ. ಯೋಗಕ್ಕೆ ಜಾಗತಿಕ ಮಾನ್ಯತೆ ನೀಡಬೇಕು ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಮಿಷನ್ 2014ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಆ ಪ್ರಸ್ತಾವವನ್ನು ಮಾನ್ಯ ಮಾಡಿದ್ದ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು, ಪ್ರತಿ ವರ್ಷ ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಒಪ್ಪಿಗೆ ಸೂಚಿಸಿದ್ದವು.

ಯಾವುದೇ ಒಂದು ವಿಷಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ, ಆ ವಿಷಯವನ್ನು ಆಧರಿಸಿ ಅಂತರರಾಷ್ಟ್ರೀಯ ದಿನ ಅಥವಾ ಅಂತರರಾಷ್ಟ್ರೀಯ ಸಪ್ತಾಹವನ್ನು ಆಚರಿಸಲಾಗುತ್ತದೆ. ವಿಶ್ವ ಸಂಸ್ಥೆಯ ಸದಸ್ಯ ದೇಶಗಳೆಲ್ಲವೂ ಇವುಗಳಲ್ಲಿ ಭಾಗಿಯಾಗುತ್ತವೆ. ಯೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಮತ್ತು ಅದನ್ನು ಮಾನವನ ಅಭಿವೃದ್ಧಿಗೆ ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಜಾಗೃತಿ ಮೂಡಿಸಲು ಯೋಗ ದಿನವನ್ನು ಆಚರಿಸಲು ನಿರ್ಧರಿಸಲಾಗಿತ್ತು.




'ಜಗತ್ತಿನ ಎಲ್ಲಾ ಜನರ ಆರೋಗ್ಯ ಮತ್ತು ಜೀವನಮಟ್ಟ ಸುಧಾರಣೆಯು ಅತ್ಯಂತ ಅವಶ್ಯಕವಾದುದು. ಇದನ್ನು ಸಾಧಿಸುವುದು ಅತ್ಯಂತ ದೀರ್ಘವಾದ ಕಾರ್ಯವಾಗಲಿದೆ. ಆದರೆ, ಇದನ್ನು ಸಾಧಿಸುವಲ್ಲಿ ಯೋಗವೂ ಒಂದು ಉತ್ತಮ ಸಾಧನವಾಗಲಿದೆ. ಹೀಗಾಗಿ ಯೋಗದ ಪ್ರಯೋಜನಗಳು ಮತ್ತು ಲಾಭಗಳನ್ನು ಜಗತ್ತಿನ ಎಲ್ಲರಿಗೂ ಮನವರಿಕೆ ಮಾಡಿಕೊಡಬೇಕು. ಅದಕ್ಕಾಗಿ ಯೋಗಕ್ಕೆ ಮಾನ್ಯತೆ ನೀಡಬೇಕು' ಎಂದು ಭಾರತದ ಆ ಪ್ರಸ್ತಾವದಲ್ಲಿ ವಿವರಿಸಲಾಗಿತ್ತು. ಜೂನ್ 21ರಂದೇ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಬೇಕು ಎಂದು ಪ್ರಸ್ತಾವದಲ್ಲಿ ಕೋರಲಾಗಿತ್ತು.

ಪ್ರಸ್ತಾವವನ್ನು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ಎದುರು ಮಂಡಿಸಲಾಗಿತ್ತು. ವಿಶ್ವಸಂಸ್ಥೆಯ ಎಲ್ಲಾ 177 ಸದಸ್ಯ ರಾಷ್ಟ್ರಗಳೂ ಪ್ರಸ್ತಾವದ ಪರವಾಗಿ ಮತ ಚಲಾಯಿಸಿದವು. ಹೀಗಾಗಿ ಜೂನ್ 21 ಅನ್ನು ಯೋಗ ದಿನವನ್ನಾಗಿ ಆಚರಿಸಬೇಕು ಎಂಬುದನ್ನು ಅವಿರೋಧವಾಗಿ ನಿರ್ಧರಿಸಲಾಯಿತು. ಅದರಂತೆ 2015ರ ಜೂನ್ 21ರಂದು ಮೊದಲ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗಿತ್ತು. ಈಗಿನದ್ದು ಒಂಬತ್ತನೇ ದಿನಾಚರಣೆ.

'ವಸುದೈವ ಕುಟುಂಬಕಂಗಾಗಿ ಯೋಗ' ಎಂಬುದು ಈ ಬಾರಿ ಯೋಗ ದಿನಾಚರಣೆಯ ವಿಷಯವಾಗಿದೆ. ಈ ಬಾರಿಯ ಯೋಗ ದಿನಾಚರಣೆಯ ಅಂಗವಾಗಿ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಮಿಷನ್, ನ್ಯೂಯಾರ್ಕ್‌ನ ಕೇಂದ್ರ ಕಚೇರಿಯ ಆವರಣದಲ್ಲಿ ಯೋಗ ಕಾರ್ಯಕ್ರಮವನ್ನು ಆಯೋಜಿಸಿದೆ. ಸ್ಥಳೀಯ ಕಾಲಮಾನ ಬೆಳಿಗ್ಗೆ 8ರಿಂದ 9ರವರೆಗೆ ನಡೆಯಲಿರುವ ಯೋಗ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಲಿದ್ದಾರೆ.

## 180ಕ್ಕೂ ಹೆಚ್ಚು ದೇಶಗಳಲ್ಲಿ ಯೋಗ

ಈ ಬಾರಿಯ ಅಂತರರಾಷ್ಟ್ರೀಯ ದಿನಾಚರಣೆಯಲ್ಲಿ 180ಕ್ಕೂ ಹೆಚ್ಚು ದೇಶಗಳು ಭಾಗಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ. 2015ರ ಜೂನ್ 21ರಂದು ನಡೆದ ಮೊದಲ ಯೋಗ ದಿನಾಚರಣೆಯಲ್ಲಿ 192 ದೇಶಗಳು ಭಾಗಿಯಾಗಿದ್ದವು. ಅಂದು ಆ ಎಲ್ಲಾ ದೇಶಗಳ ರಾಜಧಾನಿಗಳಲ್ಲಿ ಯೋಗ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಒಂದು ತಾಸಿಗೂ ಹೆಚ್ಚು ಕಾಲ ಅಂತಹ ಕಾರ್ಯಕ್ರಮಗಳು ನಡೆದಿದ್ದವು.

ವಿಶ್ವ ಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳೂ, ವಿಶ್ವ ಸಂಸ್ಥೆ ಘೋಷಿಸಿರುವ ಅಂತರರಾಷ್ಟ್ರೀಯ ದಿನಾಚರಣೆಗಳಲ್ಲಿ ಭಾಗಿಯಾಗಬೇಕು. ಆದರೆ, ಬೇರೆ–ಬೇರೆ ಕಾರಣಗಳಿಂದಾಗಿ ಎಲ್ಲಾ ದೇಶಗಳೂ ಅಂತಹ ದಿನಾಚರಣೆಗಳಲ್ಲಿ ಭಾಗಿಯಾಗಲು ಸಾಧ್ಯವಾಗುವುದಿಲ್ಲ. ಈ ಬಾರಿಯ ಅಂತರರಾಷ್ಟ್ರೀಯ ದಿನಾಚರಣೆಗಳಲ್ಲಿ ಕೆಲವು ದೇಶಗಳು ಆಂತರಿಕ ಸಂಘರ್ಷ, ಗಡಿಸಂಘರ್ಷ ಮತ್ತು ಸೇನಾಕಾರ್ಯಾಚರಣೆ, ಆರ್ಥಿಕ ಬಿಕ್ಕಟ್ಟಿನ ಕಾರಣಕ್ಕೆ ಯೋಗ ದಿನಾಚರಣೆಯಲ್ಲಿ ಭಾಗಿಯಾಗುತ್ತಿಲ್ಲ. ಜತೆಗೆ ಕೆಲವು ದೇಶಗಳಲ್ಲಿ ಸರ್ಕಾರಗಳು ಬದಲಾಗಿದ್ದು, ಯೋಗ ದಿನಾಚರಣೆಯಲ್ಲಿ ಭಾಗಿಯಾಗದೇ ಇರಲು ನಿರ್ಧರಿಸಿವೆ. ಈ ಕಾರಣದಿಂದ ಈ ಬಾರಿ ಯೋಗ ದಿನಾಚರಣೆಯಲ್ಲಿ ಭಾಗಿಯಾಗುವ ದೇಶಗಳ ಸಂಖ್ಯೆ 180ರಷ್ಟಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಈಗ ಯೋಗ ದಿನಾಚರಣೆಯಲ್ಲಿ ಭಾಗಿಯಾಗುತ್ತಿರುವ ಹಲವು ದೇಶಗಳಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದಕ್ಕಾಗಿ ಹಲವು ದಿನಗಳ ಮೊದಲಿನಿಂದಲೇ ತಯಾರಿ ನಡೆದಿದೆ. ಕೆಲವು ದೇಶಗಳಲ್ಲಿ ಹಲವೆಡೆ ಏಕಕಾಲದಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಲಾಗಿದೆ.

ಭಾರತದಲ್ಲೂ ಯೋಗ ದಿನಾಚರಣೆಗೆ ಭಾರಿ ಸಿದ್ಧತೆ ನಡೆದಿದೆ. ಸರ್ಕಾರದ ವಿವಿಧ ಇಲಾಖೆಗಳ ವತಿಯಿಂದ, ಸೇನೆಯ ಮೂರೂ ಪಡೆಗಳಿಂದ, ವಿವಿಧ ಸಚಿವಾಲಯಗಳಿಂದ ದೇಶದ ಹಲವೆಡೆ ಸಾಮೂಹಿಕ ಯೋಗ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಸಲಾಗಿದೆ. ಇದಕ್ಕಾಗಿ ಒಂದು ವಾರ ಮೊದಲಿನಿಂದಲೇ ತಯಾರಿ ನಡೆದಿದೆ. ಹಲವು ಖಾಸಗಿ ಸಂಸ್ಥೆಗಳು, ಸಂಘ–ಸಂಸ್ಥೆಗಳೂ ಸಾಮೂಹಿಕ ಯೋಗ ಕಾರ್ಯಕ್ರಮವನ್ನು ಆಯೋಜಿಸಿವೆ.

## ಸರಿಯಾದ ಯೋಗಕ್ಕಾಗಿ ಆ್ಯಪ್




ಯೋಗದ ಬಗ್ಗೆ ಈವರೆಗೆ ಕೇಳದೇ ಇದ್ದವರು ಮತ್ತು ಅದರ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದವರಲ್ಲೂ ಯೋಗದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಭಾರತ ಸರ್ಕಾರದ ಸಹಯೋಗದಲ್ಲಿ ಒಂದು ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.


ಈ ಆ್ಯಪ್‌ನಲ್ಲಿ ಯೋಗಾಸನಗಳ ಬಗ್ಗೆ ಹಲವು ವಿಡಿಯೊಗಳು ಮತ್ತು ಆಡಿಯೊ ಕಡತಗಳು ಲಭ್ಯವಿವೆ. ಯೋಗವನ್ನು ಮೊದಲ ಬಾರಿ ಅಭ್ಯಾಸ ಮಾಡುವವರಿಗೆ ಇವು ಮಾರ್ಗದರ್ಶನ ನೀಡಲಿವೆ. ಜತೆಗೆ, ಈಗಾಗಲೇ ಅಭ್ಯಾಸ ಮಾಡುತ್ತಿರುವವರಿಗೂ ಹಲವು ಮಾಹಿತಿ ನೀಡಲಿವೆ. ಈ ಆ್ಯಪ್ ಅನ್ನು ಕೋಟ್ಯಂತರ ಮಂದಿ ಈಗಾಗಲೇ ಡೌನ್‌ಲೋಡ್ ಮಾಡಿಕೊಂಡು, ಬಳಸುತ್ತಿದ್ದಾರೆ.

## 'ಯೋಗ ನಮ್ಮನ್ನು ಒಗ್ಗೂಡಿಸುತ್ತದೆ'

ಯೋಗ ಎಲ್ಲರನ್ನೂ ಒಗ್ಗೂಡಿಸುತ್ತದೆ. ಅದು ದೇಹ, ಮನಸ್ಸು, ಮಾನವತೆ, ಪ್ರಕೃತಿ ಮತ್ತು ಜಗತ್ತಿನ ಕೋಟ್ಯಂತರ ಜನರನ್ನು ಒಗ್ಗೂಡಿಸುತ್ತದೆ. ಯೋಗವು ಶಕ್ತಿ, ಸೌಹಾರ್ದ ಮತ್ತು ಶಾಂತಿಯ ಆಕರ. ಅಪಾಯಕಾರಿಯಾಗಿರುವ ಮತ್ತು ವಿಭಜನೆಯಾಗಿರುವ ಈ ಜಗತ್ತಿನಲ್ಲಿ ಯೋಗದಂತಹ ಪ್ರಾಚೀನ ಅಭ್ಯಾಸಗಳು ಅತ್ಯಂತ ಅಮೂಲ್ಯವಾದುದು. ಯೋಗವು ಶಾಂತಿಯನ್ನು ನೀಡುತ್ತದೆ. ಇದು ಮಾನಸಿಕ ಸ್ವಾಸ್ಥ್ಯವನ್ನು ಹೆಚ್ಚಿಸುತ್ತದೆ. ನಮ್ಮ ವ್ಯತ್ಯಾಸಗಳ ಹೊರತಾಗಿಯೂ ನಾವೆಲ್ಲರೂ ಮನುಷ್ಯರು ಎಂಬ ಸತ್ಯವನ್ನು ಅರ್ಥಮಾಡಿಸುತ್ತದೆ.

ಈ ಅಂತರರಾಷ್ಟ್ರೀಯ ಯೋಗ ದಿನದ ನೆಪದಲ್ಲಿ ನಾವು ಒಗ್ಗಟ್ಟನ್ನು ಅಪ್ಪಿಕೊಳ್ಳೋಣ. ಉತ್ತಮ, ಸೌಹಾರ್ದಯುತ ಜಗತ್ತನ್ನು ಕಟ್ಟೋಣ.

**ಆಂಟೊನಿಯೊ ಗುಟೆರಸ್**
ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ



## 'ಯೋಗ ಪ್ಯಾಷನ್ ಆಗಬೇಕು, ಫ್ಯಾಶನ್ ಅಲ್ಲ'

ಯೋಗ ಎಂದರೆ ಕೂಡುವುದು. ಅದು ಅಧ್ಯಾತ್ಮದ ದೃಷ್ಟಿಯಿಂದ ದೇಹ, ಮನಸ್ಸು ಮತ್ತು ಆತ್ಮಗಳ ಬೆಸುಗೆ. ಪ್ರಸ್ತುತ ಕುಟುಂಬಗಳು ಛಿದ್ರಗೊಂಡು ಚಿಕ್ಕದಾಗುತ್ತಿರುವ ಸಂದರ್ಭದಲ್ಲಿ ಯೋಗ ಮತ್ತೆ ಜನರನ್ನು ಒಟ್ಟುಗೂಡಿಸುವ ಪ್ರಕ್ರಿಯೆ. ಯೋಗವೊಂದು ಪರಿಹಾರ. ಅದು ಪರಿವಾರವನ್ನು ಒಂದುಗೂಡಿಸುತ್ತದೆ.

ಭಾರತದ ಅಧ್ಯಾತ್ಮಕ್ಕೆ ವಿಶ್ವವೇ ಇಂದು ತಲೆಬಾಗಿ ನಿಂತಿದೆ. ಜೂನ್ 21, ವಿಶ್ವದ 177 ದೇಶಗಳು ಸೂರ್ಯನೆಡೆಗೆ ಮುಖ ಮಾಡಿ ಅಂತರರಾಷ್ಟ್ರೀಯ ಯೋಗದಿನವನ್ನು ಆಚರಿಸುತ್ತಿರುವುದು ನಮ್ಮ ದೇಶಕ್ಕೆ ಸಂದ ಗೌರವ. ಯೋಗ ಮತ್ತು ಆಯುರ್ವೇದ ದರ್ಶನಗಳು ನಮ್ಮ ದೇಶದ ಬಹು ಮೂಲ್ಯ ಸಂಪತ್ತು. ಯೋಗವೊಂದು ವರವಿದ್ಯೆ. ಅಣುವಿನಿಂದ ಅನಂತದವರೆಗೆ, ಭಾವದಿಂದ ಅನುಭಾವದವರೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ಕರೆದೊಯ್ಯುವ, ಜೀವವನ್ನೇ ಶಿವನನ್ನಾಗಿಸುವ ಮಹಾಮಾರ್ಗವೇ ಯೋಗ ಪ್ರಕ್ರಿಯೆ. ವ್ಯಷ್ಠಿ ಮತ್ತು ಸಮಷ್ಠಿ ಪ್ರಜ್ಞೆಯ ಸಾಧನ. ವೃತ್ತಿ, ಪ್ರವೃತ್ತಿ, ನಿವೃತ್ತಿ ಮತ್ತು ನಿಷ್ಪತ್ತಿಯೆಡೆಗೆ ಕೊಂಡು ಹೋಗುವುದೇ ಯೋಗ ಮಾರ್ಗ.


ಈ ಒಂಬತ್ತನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಧ್ಯೇಯ ವಾಕ್ಯ 'ವಸುದೈವ ಕುಟುಂಬಕಂ' ಅಂದರೆ ವಿಶ್ವವೇ ಒಂದು ಪರಿವಾರ. ಅದನ್ನು ಒಂದಾಗಿಸುವುದು ಯೋಗ.

ಜಗತ್ತಿನ ಯಾವುದೇ ಮೂಲೆಯಲ್ಲಿ ಯೋಗ ಶಿಬಿರ ನಡೆಯಲಿ ಸಾವಿರಾರು ಜನರು ಬರುತ್ತಾರೆ, ಒಟ್ಟಿಗೆ ಯೋಗಾಭ್ಯಾಸ ಮಾಡುತ್ತಾರೆ, ನಾವೆಲ್ಲಾ ಒಂದೇ ಯೋಗ ಪರಿವಾರದವರು ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ. ಹಾಗಾಗಿ 'ವಸುದೈವ ಕುಟುಂಬಕಂ' ಎನ್ನುವ ಧ್ಯೇಯ ವಾಕ್ಯವನ್ನು ಸಾಕಾರಗೊಳಿಸಲು ಯೋಗಕ್ಕಿಂತ ಅನ್ಯ ಮಾರ್ಗವಿಲ್ಲ.

ಇಂದು ಜಗತ್ತನ್ನು ಕಾಡುತ್ತಿರುವುದು ಒಂಟಿತನ. ಯೋಗವು ಒಂಟಿತನವನ್ನು ಓಡಿಸಿ ಏಕಾಂಗಿತನವನ್ನು ಹೇಳಿಕೊಡುತ್ತದೆ. ಅಂದರೆ ಒಂಟಿತನದಿಂದ ಏಕಾಂಗಿತನಕ್ಕೆ ಸಾಗುವುದು. ಒಂಟಿತನ ನಕಾರಾತ್ಮಕವಾಗಿದ್ದರೆ ಏಕಾಂಗಿತನ ಸಕಾರಾತ್ಮಕ. ಏಕಾಂಗಿತನವನ್ನು ನೀಗಿಕೊಳ್ಳಲು, ಅಂತರಂಗವನ್ನು ಅರಿತುಕೊಳ್ಳಲು ಯೋಗದ ಶಿಸ್ತು ಅತಿ ಮುಖ್ಯ.

ಇಂದು ಧ್ಯಾನ ಎನ್ನುವುದು ಫ್ಯಾಶನ್ ಆಗಿದೆ - ಪ್ಯಾಷನ್ ಅಲ್ಲ. ಯೋಗವು 'ಪ್ಯಾಷನ್' ಆದಾಗ ಅದು ನಿಮ್ಮನ್ನು ಎಲ್ಲದರೊಂದಿಗೆ ಜೋಡಿಸುತ್ತದೆ.

**ಶ್ವಾಸಗುರು ಶ್ರೀ ವಚನಾನಂದ ಸ್ವಾಮೀಜಿ**



## ಸಿನಿ ಬಿಟ್ಸ್

### ಪ್ಯಾನ್ ಇಂಡಿಯಾ ಲೋಕಕ್ಕೆ ಡೈನಾಮಿಕ್ ಪ್ರಿನ್ಸ್

**ಡೈನಾಮಿಕ್** ಪ್ರಿನ್ಸ್ ಪ್ರಜ್ವಲ್ ದೇವರಾಜ್ ಪ್ಯಾನ್ ಇಂಡಿಯಾ ಲೋಕಕ್ಕೆ ಹೆಜ್ಜೆ ಇಡಲು ಸಜ್ಜಾಗಿದ್ದಾರೆ. ಈಗಾಗಲೇ ಲವ್, ಆ್ಯಕ್ಷನ್, ಫ್ಯಾಮಿಲಿ ಸೆಂಟಿಮೆಂಟ್ ಸಿನಿಮಾಗಳಲ್ಲಿ ನಟಿಸಿ ಮಿಂಚಿರುವ ಪ್ರಜ್ವಲ್, ಇದೇ ಮೊದಲ ಬಾರಿಗೆ ಬಿಗ್‌ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಪ್ಯಾನ್ ಇಂಡಿಯಾ ಚಿತ್ರವೊಂದರಲ್ಲಿ ನಟಿಸುತ್ತಿದ್ದಾರೆ.

ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಪ್ರಜ್ವಲ್ ನಟನೆಯ ಹೊಸ ಚಿತ್ರದ ಹೆಸರು 'ಜಾತರ'. ಪ್ರೀತಿ ಹಾಗೂ ಕೌಟುಂಬಿಕ ಕಥಾಹಂದರದ ಈ ಚಿತ್ರದಲ್ಲಿ ಪ್ರಜ್ವಲ್ ಈವರೆಗೆ ನಿರ್ವಹಿಸಿರದ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಈಗಾಗಲೇ ತೆಲುಗಿನಲ್ಲಿ ಹಿಟ್ ಚಿತ್ರಗಳನ್ನು ನಿರ್ದೇಶನ ಮಾಡಿರುವ ಉದಯ ನಂದನವನಂ ಅವರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಕನ್ನಡದಲ್ಲಿ 'ಜಾತರೆ' ಎಂಬ ಶೀರ್ಷಿಕೆಯಡಿ ಈ ಸಿನಿಮಾ ತೆರೆಕಾಣಲಿದೆ.




ಹೈದರಾಬಾದ್ ಮೂಲದ ಹೆಸರಾಂತ ವರ್ಧಮಾನ್ ಫಿಲ್ಮ್ಸ್ ಹಾಗೂ ಲೋಟಸ್ ಎಂಟರ್‌ಟೇನ್‌ಮೆಂಟ್ಸ್‌ನ ಮೂಲಕ ಗೋವರ್ಧನ್ ರೆಡ್ಡಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆ ಅನಾವರಣ ಕಾರ್ಯಕ್ರಮ ಸಹಕಾರ ನಗರದ ನಿರ್ಮಾಪಕರ ಕಚೇರಿಯಲ್ಲಿ ನಡೆಯಿತು.

ಆಗಸ್ಟ್‌ನಲ್ಲಿ ಚಿತ್ರದ ಚಿತ್ರೀಕರಣ ಪ್ರಾರಂಭಿಸಿ, ಮುಂದಿನ 2024ರ ಸಂಕ್ರಾಂತಿ ವೇಳೆಗೆ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆ ಚಿತ್ರತಂಡಕ್ಕಿದೆ.

ಭೀಮ್ಸ್ ಸೆಸಿರೋಲಿಯೋ ಅವರ ಸಂಗೀತ, ಸಾಯಿಶ್ರೀರಾಂ ಅವರ ಛಾಯಾಚಿತ್ರಗ್ರಹಣ, ಬಿ.ವಾಸುದೇವರೆಡ್ಡಿ ಅವರ ಕಥೆ, ಮಾಸ್ತಿ ಅವರ ಸಂಭಾಷಣೆ ಈ ಚಿತ್ರಕ್ಕಿದೆ. ಅಲ್ಲದೆ ಚಿತ್ರದ ನಾಯಕಿ, ಉಳಿದ ಪಾತ್ರವರ್ಗ ಹಾಗೂ ತಾಂತ್ರಿಕರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂದಿದೆ ಚಿತ್ರತಂಡ.

### ಗಿನ್ನಿಸ್ ದಾಖಲೆಗಾಗಿ ಚಿತ್ರ

**ಗಿನ್ನಿಸ್ ದಾಖಲೆ** ನಿರ್ಮಿಸಲಿಕ್ಕಾಗಿಯೇ ಕನ್ನಡದಲ್ಲೊಂದು ಚಿತ್ರ ಸೆಟ್ಟೇರಿದೆ! ಒಂದು ತಿಂಗಳಲ್ಲಿ ಚಿತ್ರೀಕರಣ ಸೇರಿದಂತೆ ಚಿತ್ರದ ಎಲ್ಲ ಪ್ರಕ್ರಿಯೆ ಮುಗಿಸಿ ತೆರೆಗೆ ಬಂದು ದಾಖಲೆ ನಿರ್ಮಿಸುವ ಗುರಿ ಚಿತ್ರತಂಡದ್ದು. ಹನುಮಂತರಾಜು, ಲತಾ ರಾಗ ನಿರ್ಮಾಣದ 'ದೇವರ ಆಟ ಬಲ್ಲವರಾರು' ಹೀಗೆ ಗಿನ್ನಿಸ್ ದಾಖಲೆ ಗುರಿಯಾಗಿಸಿಕೊಂಡು ಸೆಟ್ಟೇರಿರುವ ಚಿತ್ರ. ಈ ಹಿಂದೆ 'ಫಿರಂಗಿ ಪುರ' ಚಿತ್ರ ನಿರ್ದೇಶಿಸಿದ್ದ ಜನಾರ್ದನ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಚೆನ್ನೈನ ರಾಷ್ಟ್ರ ಪ್ರಶಸ್ತಿ ವಿಜೇತ ಕಲಾ ನಿರ್ದೇಶಕ ಬಾಲಚಂದ್ರನ್ ಹಾಗೂ ತಂಡದವರು ಚಿತ್ರಕ್ಕಾಗಿ ಮಡಿಕೇರಿಯಲ್ಲಿ ಬೃಹತ್ ಸೆಟ್ ನಿರ್ಮಿಸಿದ್ದು, 180ಕ್ಕೂ ಹೆಚ್ಚು ಜನ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ಜೂನ್ 23ರಿಂದ ಚಿತ್ರೀಕರಣ ಪ್ರಾರಂಭಗೊಳ್ಳಲಿದ್ದು, ಜುಲೈ 25ಕ್ಕೆ ಚಿತ್ರವನ್ನು ತೆರೆಗೆ ತರುತ್ತಿದ್ದೇವೆ. ನಮ್ಮ ಕಾರ್ಯವೈಖರಿ ವೀಕ್ಷಿಸಲು ಆರು ಜನ ತೀರ್ಪುಗಾರರು ಚಿತ್ರೀಕರಣ ಸ್ಥಳದಲ್ಲೇ ಇರುತ್ತಾರೆ' ಎಂದು ನಿರ್ದೇಶಕರು ಹೇಳಿದ್ದಾರೆ.

ಅರ್ಜುನ್ ರಮೇಶ್, ಸಿಂಧೂ ಲೋಕನಾಥ್, ವರ್ಷಾ ವಿಶ್ವನಾಥ್, ಸಂಪತ್ ರಾಮ್ ಮೊದಲಾದವರು ನಟಿಸುತ್ತಿದ್ದಾರೆ. ಶ್ಯಾನ್ ಎಲ್. ರಾಜ್ ಸಂಗೀತ ಚಿತ್ರಕ್ಕಿದೆ.




ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಒಡಿಶಾದ ಬಾಲೇಶ್ವರದಲ್ಲಿ ಈಚೆಗೆ ಸಂಭವಿಸಿದ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು ಅವಘಡಕ್ಕೆ ಸಂಬಂಧಿಸಿದಂತೆ ಕಿರಿಯ ಎಂಜಿನಿಯರ್ ಅಮೀರ್ ಖಾನ್‌ನನ್ನು ಸಿಬಿಐ ಪ್ರಶ್ನಿಸಿತ್ತು. ರೈಲ್ವೆ ಸಿಗ್ನಲ್ ವ್ಯವಸ್ಥೆಯನ್ನು ಮಾರ್ಪಡಿಸಿದ್ದ ಆರೋಪ ಹೊತ್ತಿರುವ ಆತ ಈಗ ತಲೆಮರೆಸಿಕೊಂಡಿದ್ದಾನೆ. ಆತ ಇದ್ದ ಬಾಡಿಗೆ ಮನೆಯನ್ನು ಸಿಬಿಐ ಈಗ ಮೊಹರು ಮಾಡಿದೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕೆಲವು ಸುದ್ದಿ ತಾಣಗಳೂ ಈ ಬಗ್ಗೆ ವರದಿ ಪ್ರಕಟಿಸಿವೆ. ಆತನ ಪತ್ತೆಗಾಗಿ ತಂಡ ರಚಿಸಲಾಗಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ. ಆದರೆ, ಇದು ಸಂಪೂರ್ಣ ಸುಳ್ಳು ಸುದ್ದಿ.

ಸಿಗ್ನಲಿಂಗ್ ವಿಭಾಗದ ಕಿರಿಯ ಎಂಜಿನಿಯರ್ ಅಮೀರ್ ಖಾನ್ ತಲೆಮರೆಸಿಕೊಂಡಿದ್ದಾನೆ ಎಂಬ ಸುದ್ದಿ ಬಂದ ಬೆನ್ನಲ್ಲೇ ಆಗ್ನೇಯ ರೈಲ್ವೆ ವಿಭಾಗದ ವಕ್ತಾರರು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. 'ಅಮೀರ್ ಖಾನ್ ತಲೆಮರೆಸಿಕೊಂಡಿದ್ದಾರೆ ಎಂಬುದು ಸುಳ್ಳು ಸುದ್ದಿ. ಸಿಗ್ನಲಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಐವರು ಸಿಬ್ಬಂದಿಯನ್ನು ಸಿಬಿಐ ಈಚೆಗೆ ವಿಚಾರಣೆಗೆ ಒಳಪಡಿಸಿತ್ತು. ಆ ಎಲ್ಲಾ ಐದೂ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಅವರಲ್ಲಿ ಒಬ್ಬರು ತಲೆಮರೆಸಿಕೊಂಡಿದ್ದಾರೆ ಎಂಬುದಕ್ಕೆ ಯಾವುದೇ ಆಧಾರವಿಲ್ಲ' ಎಂದು ಆಗ್ನೇಯ ರೈಲ್ವೆ ವಕ್ತಾರರು ಮಾಹಿತಿ ನೀಡಿದ್ದಾರೆ. ಅಮೀರ್ ಖಾನ್ ತಲೆತಪ್ಪಿಸಿಕೊಂಡಿದ್ದಾರೆ ಮತ್ತು ಅವರ ಮನೆಯನ್ನು ಮೊಹರು ಮಾಡಲಾಗಿದೆ ಎಂಬುದಕ್ಕೆ ಎಲ್ಲಿಯೂ ಅಧಿಕೃತ ಮಾಹಿತಿ ಲಭ್ಯವಿಲ್ಲ. ಜತೆಗೆ ಅಂತಹ ಸುದ್ದಿ ಹರಡಿರುವ ಜಾಲತಾಣಗಳು, ಈ ಹಿಂದೆಯೂ ಹಲವು ಬಾರಿ ಸುಳ್ಳು ಸುದ್ದಿ ಹರಡಿದ್ದವು.

## ಗುಂಡಣ್ಣ




## ಬೆರಗಿನ ಬೆಳಕು
ಗುರುರಾಜ ಕರಜಗಿ

### ಕರ್ಮಯೋಗಿ ಲಿಂಕನ್

ಸಾಮಾನ್ಯರೊಳ್ ಪುಟ್ಟಿ, ಸಾಮಾನ್ಯರೊಳ್ ಬೆಳೆದು |
ಭೂಮಿಪತಿ ಪಟ್ಟವನು ಜನತನಗೆ ಕಟ್ಟಲ್ ||
ಸಾಮರ್ಥ್ಯದಿಂದವರನಾಳ್ದ ಲಿಂಕನನಂತೆ |
ಸ್ವಾಮಿ ಲೋಕಕೆ ಯೋಗಿ – ಮಂಕುತಿಮ್ಮ || **910** ||

**ಪದ-ಅರ್ಥ:** ಪುಟ್ಟ = ಹುಟ್ಟಿ, ಭೂಮಿಪತಿಪಟ್ಟವನು = ಭೂಮಿಪತಿ(ರಾಷ್ಟ್ರಪತಿ) + ಪಟ್ಟವನು, ಸಾಮರ್ಥ್ಯದಿಂದವರನಾಳ್ದ = ಸಾಮರ್ಥ್ಯದಿಂದ + ಅವರನು + ಆಳ್ದ(ಆಳಿದ)

**ವಾಚ್ಯಾರ್ಥ:** ಸಾಮಾನ್ಯರಲ್ಲಿ ಹುಟ್ಟಿ, ಸಾಮಾನ್ಯರಲ್ಲಿಯೇ ಬೆಳೆದು, ಜನರು ರಾಷ್ಟ್ರಪತಿ ಪಟ್ಟವನ್ನು ಕಟ್ಟಿದಾಗ ಅದನ್ನು ಸಾಮರ್ಥ್ಯದಿಂದ ಆಳಿದ ಲಿಂಕನ್ ಲೋಕಕ್ಕೆ ಒಬ್ಬ ಯೋಗಿ ಇದ್ದಂತೆ. ಅವನೇ ಸ್ವಾಮಿ.

ವಿವರಣೆ: ಅಮೇರಿಕೆಯ ಹದಿನಾರನೇ ಅಧ್ಯಕ್ಷ ಅಬ್ರಾಹಂ ಲಿಂಕನ್‌ರವರ ಜೀವನ ಗಾಥೆ, ಒಂದು ದಂತಕಥೆ ಇದ್ದಂತೆ. ತುಂಬ ಬಡತನದಲ್ಲಿ ಹುಟ್ಟಿ, ಅತ್ಯಂತ ಸಾಮಾನ್ಯವಾದ ಪರಿಸರದಲ್ಲಿ ಬೆಳೆದು, ವ್ಯವಸ್ಥಿತವಾದ ಶಿಕ್ಷಣವಿಲ್ಲದೆ, ಸ್ವಂತ ಪರಿಶ್ರಮದಿಂದ ಓದಿಕೊಂಡು ಲಾಯರ್ ಆಗಿ, ಸಾಮಾಜಿಕ ಹೋರಾಟಗಾರನಾಗಿ ಬೆಳೆದದ್ದು ಒಂದು ಪವಾಡ ಸದೃಶ ಜೈತ್ರಯಾತ್ರೆ. ಅವರ ಜೀವನ ಅನೇಕ ತರುಣರಿಗೆ ಒಂದು ಮಾದರಿ. ಅವರಿಗೆ ಯಾವುದೂ ಸುಲಭವಾಗಿ ದಕ್ಕಲಿಲ್ಲ. ಪ್ರತಿಬಾರಿ ಸೋಲು ಮುಖಕ್ಕೆಅಪ್ಪಳಿಸುತ್ತಿತ್ತು. ಆದರೆ ಆ ಪ್ರತಿಯೊಂದು ಸೋಲು ಅವರನ್ನು ಕುಗ್ಗಿಸುವ ಬದಲು ಮತ್ತೊಂದು ಹೋರಾಟಕ್ಕೆ ಪ್ರೇರೇಪಿಸುತ್ತಿತ್ತು. ಹೀಗೆ ಛಲಬಿಡದೆ ಮುನ್ನುಗ್ಗಿದ ಲಿಂಕನ್ ಕೊನೆಗೆ ಅಮೇರಿಕೆಯ ರಾಷ್ಟ್ರಪತಿಯಾಗಿ ಆಯ್ಕೆಯಾಗಿ, ಆ ದೇಶದ ಅತ್ಯಂತ ಯಶಸ್ವೀ ಹಾಗೂ ಪ್ರಬುದ್ಧ ರಾಷ್ಟ್ರಪತಿಗಳಲ್ಲಿ ಒಬ್ಬರಾದರು. ಅವರ ಅಧಿಕಾರಾವಧಿಯ ಪ್ರತಿಯೊಂದು ದಿನವೂ ಪರೀಕ್ಷಾಕಾಲ. ಅಮೇರಿಕೆ ಆಗ ಅಂತ:ಕಲಹದಿಂದ ಬೇಯುತ್ತಿತ್ತು. ದಿನನಿತ್ಯವೂ ಯುದ್ಧದ ಘಟನೆಗಳು ಅವರನ್ನು ಗಾಸಿಮಾಡುತ್ತಿದ್ದವು. ಇಷ್ಟಾದರೂ ತಾವು ಮನದಲ್ಲಿ ತೀರ್ಮಾನಿಸಿಕೊಂಡಿದ್ದಂತೆ, ಶತಮಾನಗಳಿಂದ ಬಂದಿದ್ದ, ನಿಗ್ರೋ ಗುಲಾಮರ ಗುಲಾಮಗಿರಿಯನ್ನು ತೆಗೆದುಹಾಕುವ ಕಾಯದೆಯನ್ನು ಮಾಡಿಯೇ ಬಿಟ್ಟು ಇತಿಹಾಸದಲ್ಲಿ ಅಮರರಾದರು. ಕಗ್ಗ ಮೊದಲಿನ ಮೂರು ಸಾಲುಗಳಲ್ಲಿ ಅಬ್ರಾಹಂ ಲಿಂಕನ್‌ನವರ ಜೀವನಗಾಥೆಯನ್ನು ಹೊಗಳುತ್ತದೆ. ಅವರ ಕಾರ್ಯ ಒಬ್ಬ ಯೋಗಿಯ ಕಾರ್ಯಕ್ಕೇನೂ ಕಡಿಮೆಯಲ್ಲ ಎಂಬುದನ್ನು ಸೂಚಿಸುತ್ತದೆ. ಯಾರು ಯೋಗಿ? ಅವನ ಲಕ್ಷಣಗಳೇನು? ಯೋಗಿಯಾದವನು ದು:ಖ-ಸುಖ, ಅಪಮಾನ- ಮಾನ ಇಂಥ ದ್ವಂದ್ವಗಳಲ್ಲಿ ಅಥವಾ ಯಾವುದೇ ಅನುಕೂಲವಾದ ಅಥವಾ ಪ್ರತಿಕೂಲವಾದ ಸಂದರ್ಭಗಳಲ್ಲಿ ವಿಕಾರಕ್ಕೆ ಒಳಗಾಗಿ ಆತುರದ ನಿರ್ಣಯ ತೆಗೆದುಕೊಳ್ಳುವುದಿಲ್ಲ. ಯಾರನ್ನೂ ದ್ವೇಷಿಸುವುದಿಲ್ಲ. ಹೀಗಿದ್ದವನು ಪ್ರಪಂಚದಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ಆತ ಕೊಡುವುದರಲ್ಲಿಯೇ ನಿರತನಾಗಿರುವುದರಿಂದ ಅವನೇ ಯಜಮಾನ, ಸ್ವಾಮಿ. ಕಗ್ಗ ಹೇಳುತ್ತದೆ, ಅಬ್ರಾಹಂ ಲಿಂಕನ್‌ರವರಂಥ ಕರ್ಮಯೋಗಿಗಳು ಸದಾಕಾಲ ಸಮತ್ವದಿಂದಿದ್ದು, ಪಡೆಯುವುದಕ್ಕಿಂತ ನೀಡುವುದನ್ನೇ ಮನೋಧರ್ಮವನ್ನಾಗಿ ಮಾಡಿಕೊಂಡದ್ದರಿಂದ, ಅವರೂ ಯೋಗಿಗಳೇ. ಆದ್ದರಿಂದ ಅವರು ಲೋಕಕ್ಕೆ ಸ್ವಾಮಿ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜೂನ್ 21, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಆಷಾಢ ಶುದ್ಧ ತೃತೀಯ ಗಂ. 15-10, ನಕ್ಷತ್ರ: ಪುಷ್ಯ ಗಂ. 25-21 ಯೋಗ: ವ್ಯಾಘಾತ 26-34, ಕರಣ: ಗರ ಗಂ. 15-10, ಮಿಥುನ ಮಾಸದ 06 ನೇ ದಿನ, ಮಳೆನಕ್ಷತ್ರ: ಮೃಗಶಿರ 4.ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-08 ಸೂರ್ಯಾಸ್ತ : 06-56, ಮುಸ್ಲಿಂ ದಿನಾಂಕ : 02 ಜುಲ್‌ಹಿಜಾ
ದಿನ ವಿಶೇಷ : ದಕ್ಷಿಣಾಯಣ ದಿನ
ಅದೃಷ್ಟ ಸಂಖ್ಯೆ : 8, 9

**ಮೇಷ:** ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆಗೆ ಅನುಕೂಲ. ಕೋರ್ಟು ವ್ಯವಹಾರಗಳ ಓಡಾಟ ತಪ್ಪಲಿದೆ. ಬೆಂಕಿಯಿಂದ ಅನಾಹುತ ಸಂಭವಿಸಬಹುದು, ಜಾಗ್ರತರಾಗಿರಿ. ದ್ವಿಚಕ್ರ ವಾಹನ ಮಾರಾಟಗಾರರಿಗೆ ಲಾಭವಿದೆ.

**ವೃಷಭ:** ಮಾರುಕಟ್ಟೆಯ ಬದಲಾವಣೆ ಅನುಕೂಲಕ್ಕೆ ತಕ್ಕಂತೆ ಇರುವುದು. ಸತ್ಕಾರ್ಯಗಳಲ್ಲಿ ಬಂಧುಗಳ ಸಕ್ರಿಯ ಪಾತ್ರವಿದ್ದು ಸಹಕರಿಸುವರು. ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ರಕ್ತದ ಶುದ್ಧತೆ ಬಗ್ಗೆ ಗಮನವಿಡಿ.

**ಮಿಥುನ:** ರಬ್ಬರ್ ಅಥವಾ ಪ್ಲಾಸ್ಟಿಕ್ ವ್ಯವಹಾರದಲ್ಲಿರುವವರು ಉತ್ತಮ ಲಾಭ ಹೊಂದುವಿರಿ. ದೂರದ ಪ್ರಯಾಣಗಳು ಅನುಕೂಲಕರವಾಗಿರುವುದು. ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವ ಸಂಭವವಿದೆ.

ಕರ್ಕಾಟಕ: ಹೊಸ ಮನೆಯ ನಿರ್ಮಾಣ ಕಾರ್ಯಗಳು ಚುರುಕುಗತಿಯಲ್ಲಿ ಸಾಗುವುದು. ಪ್ರಯಾಣದಲ್ಲಿನ ಒಂಟಿತನ ಸಮಾನ ಮನಸ್ಕರ ಭೇಟಿಯಿಂದಾಗಿ ನಿವಾರಣೆಯಾಗುವುದು. ವಿದ್ಯಾರ್ಥಿಗಳಿಗೆ ಶುಭದಿನವಾಗಿರುವುದು.

**ಸಿಂಹ:** ಧ್ಯಾನ ಮತ್ತು ಯೋಗದತ್ತ ಗಮನ ಹರಿಸುವಿರಿ. ಕಾನೂನು ವಿಷಯದಲ್ಲಿ ನಂಬಿಕಸ್ಥ ಹಾಗು ತಿಳಿವಳಿಕೆಯುಳ್ಳ ವ್ಯಕ್ತಿಯಿಂದ ಸಲಹೆ ಪಡೆದುಕೊಳ್ಳುವಿರಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರಯತ್ನ ಅಗತ್ಯವೆನಿಸಲಿದೆ.

**ಕನ್ಯಾ:** ಹಲವು ದಿನಗಳಿಂದ ನೀವು ನಿರೀಕ್ಷಿಸುತ್ತಿದ್ದಂಥ ದೃಷ್ಟಿಯಲ್ಲಿ ವ್ಯವಹಾರಗಳಲ್ಲಿ ನುರಿತವರ ಸಲಹೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಯಶಸ್ಸು ಹಿರಿಯರ ಮನಸ್ಸಿಗೆ ನೆಮ್ಮದಿ ಹಾಗೂ ಸಂತೋಷವನ್ನು ತರುತ್ತದೆ.

**ತುಲಾ:** ಶ್ರಮಜೀವಿಗಳಾದ ನಿಮಗೆ ಗುರು-ಹಿರಿಯರ ಆಶೀರ್ವಾದವಿದ್ದರೆ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಅಪೇಕ್ಷಿಸಬಹುದು. ಪ್ರಸ್ತುತ ರಾಜಕೀಯ ವಿದ್ಯಮಾನಗಳಿಂದ ಲಾಭವಾಗಲಿದೆ ಆದರೆ ಹಿತ-ಶತ್ರುಗಳ ಬಗ್ಗೆ ಎಚ್ಚರ ವಹಿಸಿ.ವೃಶ್ಚಿಕ:

ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ನಿಮ್ಮ ಸ್ನೇಹಿತರು ಅಥವಾ ಸಹೋದ್ಯೋಗಿಗಳು ತಪ್ಪಿಸುವರು. ಇತರರಿಗೆ ಕೊಟ್ಟ ಹಣ ಇಂದು ಹಿಂದಿರುಗಿ ಬರುವ ಸೂಚನೆ ಇದೆ.

**ಧನು:** ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿ. ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಮಾಡಿದ ತಪ್ಪಿನಿಂದಾಗಿ ನಷ್ಟವನ್ನು ಅನುಭವಿಸಬೇಕಾಗುವುದು.

**ಮಕರ:** ಇನ್ನೊಬ್ಬರ ಭಾವನೆಗಳಿಗೆ ಧಕ್ಕೆ ತರುವ ಬದಲು, ಬೆಲೆಕೊಡುವ ಮನಸ್ಥಿತಿ ಬೆಳೆಸಿಕೊಳ್ಳಿರಿ. ಕೌಟುಂಬಿಕ ವಾಗಿ ನಡೆದುಕೊಂಡು ಬಂದಂಥ ದೇವತಾ ಅಥವಾ ದೈವ ಕಾರ್ಯವನ್ನು ಹಮ್ಮಿಕೊಳ್ಳುವ ತೀರ್ಮಾನಆಗುವುದು.


**ಕುಂಭ:** ವಿಶೇಷ ತೀರ್ಮಾನಗಳನ್ನು ಮಡದಿಯಲ್ಲಿ ಕೇಳಿ ತೀರ್ಮಾನಿಸಿ. ಚಿತ್ರಕಲೆಯಲ್ಲಿರುವ ಉತ್ಸಾಹ ವೃದ್ಧಿಯಾಗುವುದು. ನಿರೀಕ್ಷಿಸಿದ ಕಾರ್ಯಗಳು ಅವಿಘ್ನವಾಗಿ ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು.

**ಮೀನ:** ರಪ್ತು ವ್ಯಾಪಾರಗಳಲ್ಲಿ ತಲೆ ತಗ್ಗಿಸುವ ಪರಿಸ್ಥಿತಿ ಬಾರದೇ ಇರುವ ರೀತಿಯಲ್ಲಿ ವ್ಯವಹರಿಸಿ. ವದಂತಿಗಳಿಗೆ ಕಿವಿಗೊಡದೆ ಕೆಲಸ ಮುಂದುವರೆಸಿಕೊಂಡು ಹೋಗಿ. ಅವಿವಾಹಿತರಿಗೆ ಕಂಕಣಬಲ ಕೂಡಿಬರಲಿದೆ.

## ಪದಬಂಧ 5356
– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಬಿಂದು ರೂಪದ ವರ್ಣ (4)
3.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
5.ಬೆಪ್ಪುತಕ್ಕಡಿ ಹಿಡಿದಿರುವ ತ್ರಾಸು! (3)
6.ಒನಪು ತೋರಿದಾಗ ಬಂದಿರುವ ಸ್ಮರಣೆ (3)
8.ಬದಿಯಲ್ಲೇ ಇರುವ ಜೈನ ದೇವಾಲಯ (3)
9.ಇದೇ ಎಲ್ಲವೂ! (3)
10.ಸೂಕರ ಇಲ್ಲಿಗೆ ಬಂದಿದೆಯಲ್ಲಾ? (3)
12.ಪದ ಹೇಳಿ ಪಡೆದುಕೊಂಡಿರುವ ಡಿಗ್ರಿ (3)
14.ಮರಣವೇ ಇಲ್ಲದವನು (4)
15.ಕತ್ತು ಬಗ್ಗಿಸಿ ಹಾಕಿದ ರುಜು (4)

**ಮೇಲಿಂದ ಕೆಳಕ್ಕೆ**
1.ಇದು ಕನ್ನಡಿಗನ ಪ್ಯಾಲೇಸು! (4)
2.ರಜದಲ್ಲಿ ಖರೀದಿಸಿದ ಬೆಳ್ಳಿ! (3)
3.ಜಟ್ಟಿಕಾಳಗ ಇತ್ಯಾದಿಗಳನ್ನು ಅಭ್ಯಾಸ ಮಾಡುವ ಸ್ಥಳ (3)
4.ನೂರು ಕಾಲುಳ್ಳ ಹುಳು (4)
7.ಪುಕ್ಕ ಕೀಳುತ್ತಿರುವ ಅಂಜುಬುರುಕ! (3)
8.ಈತ ದುಡ್ಡಿಲ್ಲದವನು (3)
9.ಎಡಗೈಯಿಂದಲೂ ಬಾಣಬಿಡುವವನು (4)
11.ಹತ್ತು ಎನ್ನುತ್ತಲೇ ಹೂಡಿದ ಸಂಚು! (4)
12.ಹಾಡಿನ ಆರಂಭದ ಸಾಲು (3)
13.ಈ ವಿಧವಾಗಿ ನಡೆದ ಚರ್ಚೆ! (3)



### 5355ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪ್ರಗಲ್ಭವಚನ 4.ರತ್ನಪಡಿ
5.ವಾಚಕ 7.ಸ್ಥಾವರ
10.ಉಬ್ಧಕ 12. ಗಡವ
13.ಬಾಲರವಿ
15.ಪ್ರಜಾಪ್ರತಿನಿಧಿ

**ಮೇಲಿಂದ ಕೆಳಕ್ಕೆ:**
1.ಪ್ರತಿವಾದಿ 2.ನರ
3.ಮಡಿವಂತ 6.ಕಮಂಡಲು
7.ಸ್ಥಾಪಕ 8.ರಣರಂಗ
9.ನರಿಬಾಲ 11.ತವನಿಧಿ
14.ವಿಪ್ರ

## ಸುಡೊಕು 5742


| | | | | | | | | |
|---|---|---|---|---|---|---|---|---|
| | 6 | | | | 8 | | | 5 |
| 1 | | 3 | | 6 | | 8 | 9 | 4 |
| | 8 | | 5 | | | | | |
| | 9 | | | 7 | | | 5 | |
| | | 5 | 9 | | 3 | 4 | 7 | |
| 7 | | | | 1 | | | | 9 |
| | 7 | | 8 | | 1 | | 4 | |
| 4 | | 9 | | | | 5 | | 7 |
| | 3 | | 4 | | 7 | | 1 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5741 ಸುಡೊಕು

| | | | | | | | | |
|---|---|---|---|---|---|---|---|---|
| 5 | 2 | 6 | 9 | 4 | 1 | 8 | 3 | 7 |
| 4 | 7 | 8 | 3 | 2 | 6 | 5 | 9 | 1 |
| 3 | 9 | 1 | 5 | 7 | 8 | 6 | 2 | 4 |
| 9 | 5 | 4 | 7 | 1 | 2 | 3 | 6 | 8 |
| 1 | 6 | 7 | 8 | 9 | 3 | 4 | 5 | 2 |
| 2 | 8 | 3 | 6 | 5 | 4 | 1 | 7 | 9 |
| 7 | 3 | 9 | 4 | 8 | 5 | 2 | 1 | 6 |
| 8 | 1 | 5 | 2 | 6 | 9 | 7 | 4 | 3 |
| 6 | 4 | 2 | 1 | 3 | 7 | 9 | 8 | 5 |

**ಷೇರುಪೇಟೆ ವಹಿವಾಟು** 159




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 18755 |
| ಇಂದಿನ ಅಂತ್ಯ | 18816 |
| ▲ | 61 |
| ದಿನದ ಕನಿಷ್ಠ | 18839 |

**ರಾಮನಗರ ರೇಷ್ಮೆಗೂಡು ಧಾರಣೆ**



| | |
|---|---|
| ಮಿಶ್ರತಳಿ (ಸಿ.ಬಿ) | ₹233-489 |
| ದ್ವಿತಳಿ (ಬಿ.ವಿ) | ₹261-636 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹600 |
| 12 ಮೊಟ್ಟೆಗೆ | ₹80 |
| ಮೈಸೂರು | |
| 100 ಮೊಟ್ಟೆಗೆ | ₹603 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)



| | |
|---|---|
| ಶೇಂಗಾ (ರಿಫೈನ್ಡ್) | ₹1670(1680) |
| ಸೋಯಾ (ರಿಫೈನ್ಡ್) | ₹950(960) |
| ಸೂರ್ಯಕಾಂತಿ (ರಿಫೈನ್ಡ್) | ₹960(960) |
| ಪಾಮೋಲಿನ್ | ₹855(859) |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)



| | |
|---|---|
| ದಪ್ಪ | ₹1300-1500 |
| ಮಧ್ಯಮ | ₹1000-1300 |
| ಸಣ್ಣ | ₹500-1000 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)



| | |
|---|---|
| ಆರ್‌ಎಸ್‌ಎಸ್-4 | ₹151 |
| ಆರ್‌ಎಸ್‌ಎಸ್-5 | ₹146 |
| ಗುಡ್ ಲಾಟ್ | ₹126.50 |

**ಕೊಬ್ಬರಿ ಧಾರಣೆ**



| | |
|---|---|
| ಅರಸೀಕೆರೆ | ₹8120-8400 |
| ಕೆ.ಆರ್.ಪೇಟೆ (ಇತರ) | ₹7900-7900 |
| ಪುತ್ತೂರು (ಇತರ) | ₹4500-7300 |

## ಸ್ವಾಮಿನಾಥನ್ ಆರ್‌ಬಿಐ ಡೆಪ್ಯುಟಿ ಗವರ್ನರ್

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸ್ವಾಮಿನಾಥನ್ ಜಾನಕಿರಾಮನ್ ಅವರನ್ನು ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಆಗಿ ನೇಮಕ ಮಾಡಿದೆ.

ಅಧಿಕಾರ ಸ್ವೀಕರಿಸಿದ ದಿನದಿಂದ ಮೂರು ವರ್ಷಗಳ ವರೆಗೆ ಅಥವಾ ಮುಂದಿನ ಆದೇಶದವರೆಗೆ ಅವರು ಈ ಹುದ್ದೆಯಲ್ಲಿ ಇರುತ್ತಾರೆ. ಆರ್‌ಬಿಐ ಕಾಯ್ದೆ 1934ರ ಅನ್ವಯ ಕೇಂದ್ರೀಯ ಬ್ಯಾಂಕ್‌ನಲ್ಲಿ ನಾಲ್ಕು ಮಂದಿ ಡೆಪ್ಯುಟಿ ಗವರ್ನರ್‌ಗಳು ಇರುತ್ತಾರೆ. ಡೆಪ್ಯುಟಿ ಗವರ್ನರ್‌ಗೆ ತಿಂಗಳಿಗೆ ₹2.25 ಲಕ್ಷ ವೇತನ ಹಾಗೂ ಇತರ ಭತ್ಯೆಗಳನ್ನು ನೀಡಲಾಗುತ್ತದೆ.

### ಬೇಡಿಕೆಯು ಶೇಕಡ 10ರಷ್ಟು ಹೆಚ್ಚಾಗುವ ನಿರೀಕ್ಷೆ: ಕ್ರಿಸಿಲ್

# ಸಿಮೆಂಟ್ ಬೆಲೆ ಶೇ 3ರಷ್ಟು ಇಳಿಕೆ?

ಮುಂಬೈ (ಪಿಟಿಐ): ಸಿಮೆಂಟ್ ತಯಾರಿಕಾ ಕಂಪನಿಗಳು ಈ ವರ್ಷದಲ್ಲಿ ಸಿಮೆಂಟ್ ಬೆಲೆಯನ್ನು ಶೇಕಡ 3ರವರೆಗೆ ಇಳಿಕೆ ಮಾಡುವ ಸಾಧ್ಯತೆ ಇದೆ. ಮಾರುಕಟ್ಟೆಯಲ್ಲಿ ಸಿಮೆಂಟ್‌ಗೆ ಬೇಡಿಕೆಯು ಆರೋಗ್ಯಕರ ಮಟ್ಟದಲ್ಲಿ ಉಳಿಯುತ್ತದೆಯಾದರೂ, ಕಂಪನಿಗಳ ನಡುವೆ ಸ್ಪರ್ಧೆ ಬಿರುಸು ಪಡೆದಿರುವ ಕಾರಣ ಅವು ಬೆಲೆ ಇಳಿಕೆಗೆ ಮುಂದಾಗುವ ಸಾಧ್ಯತೆ ಇದೆ.

ಸಿಮೆಂಟ್ ತಯಾರಿಕಾ ಕಂಪನಿಗಳು ಕಳೆದ ನಾಲ್ಕು ವರ್ಷಗಳಲ್ಲಿ ಶೇ 4ರಷ್ಟು ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ದಾಖಲಿಸಿದ್ದವು.



'ಸಿಮೆಂಟ್ ತಯಾರಿಕೆಗೆ ಅಗತ್ಯವಿರುವ ವಸ್ತುಗಳ ಬೆಲೆ ತಗ್ಗುತ್ತಿರುವುದು ಕೂಡ ಸಿಮೆಂಟ್ ಮಾರಾಟ ಬೆಲೆ ಇಳಿಕೆಗೆ ನೆರವಾಗಲಿದೆ' ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆ ಸಿದ್ಧಪಡಿಸಿರುವ ವರದಿ ಹೇಳಿದೆ.

ಸಿಮೆಂಟ್ ಬೆಲೆಯು ಕಳೆದ ಆರ್ಥಿಕ ವರ್ಷದಲ್ಲಿ ಪ್ರತಿ 50 ಕೆ.ಜಿ. ಚೀಲಕ್ಕೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹391ಕ್ಕೆ ಏರಿಕೆ ಆಗಿತ್ತು. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಎದುರಾದ ಸಮಸ್ಯೆಗಳು, ಅಗತ್ಯ ವಸ್ತುಗಳ ಬೆಲೆಯಲ್ಲಿ ಆದ ಏರಿಕೆ, ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮವಾಗಿ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿತ್ತು ಎಂದು ವರದಿಯು ಹೇಳಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಸಿಮೆಂಟ್ ಬೆಲೆಯು ₹388ಕ್ಕೆ ಇಳಿಕೆಯಾಗಿದೆ. ಹಲವು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಎಂಬಂತೆ ಸಿಮೆಂಟ್ ತಯಾರಿಕಾ ಕಂಪನಿಗಳು ಮುಂಗಾರು ಪೂರ್ವದಲ್ಲಿ (ಏಪ್ರಿಲ್ ಮತ್ತು ಮೇ ತಿಂಗಳಲ್ಲಿ) ಸಿಮೆಂಟ್ ಬೆಲೆಯನ್ನು ಹೆಚ್ಚು ಮಾಡಿಲ್ಲ. ಬೇಡಿಕೆಯು ಸ್ಥಿರವಾಗಿದ್ದರೂ ಬೆಲೆ ಹೆಚ್ಚಳ ಮಾಡದೆ ಇರುವುದು ಕಂಪನಿಗಳ ನಡುವಿನ ಸ್ಪರ್ಧೆಯನ್ನು ಸೂಚಿಸುತ್ತದೆ ಎಂದು ವರದಿ ವಿವರಿಸಿದೆ.

ಸಿಮೆಂಟ್ ಬೇಡಿಕೆಯು 2023–24ರಲ್ಲಿ, ಹಿಂದಿನ ವರ್ಷದ ಮಟ್ಟಕ್ಕೆ ಹೋಲಿಸಿದರೆ ಶೇ 8ರಿಂದ ಶೇ 10ರಷ್ಟು ಹೆಚ್ಚು ಇರಬಹುದು ಎಂದು ಕ್ರಿಸಿಲ್ ಸಂಸ್ಥೆಯ ವರದಿಯಲ್ಲಿ ಅಂದಾಜು ಮಾಡಲಾಗಿದೆ

## ಟಿಟಿಕೆ ಪ್ರೆಸ್ಟೀಜ್ ಹೊಸ ಉತ್ಪನ್ನ ಬಿಡುಗಡೆ



ಟಿಟಿಕೆ ಪ್ರೆಸ್ಟೀಜ್‌ನ ಹೊಸ ಪ್ರೆಶರ್ ಕುಕ್ಕರ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಟಿಕೆ ಪ್ರೆಸ್ಟೀಜ್ ಕಂಪನಿಯು ಹಾರ್ಡ್ ಅನೋಡೈಜ್ಡ್ 'ಸ್ವಚ್ಛ್' ಪ್ರೆಶರ್ ಕುಕ್ಕರ್ ಮತ್ತು ನಕ್ಷತ್ರ ಹಾರ್ಡ್ ಅನೋಡೈಜ್ಡ್ ಡ್ಯುಯೊ ಸ್ವಚ್ಛ್ ಪ್ರೆಶರ್ ಕುಕರ್ ಎನ್ನುವ ಎರಡು ಹೊಸ ಕುಕ್ಕರ್‌ಗಳನ್ನು ಬಿಡುಗಡೆ ಮಾಡಿದೆ.

ನಕ್ಷತ್ರ ಸ್ವಚ್ಛ್ 2 ಲೀಟರ್ ಮಾದರಿಯ ಬೆಲೆ ₹1850. ಪಾಪ್ಯುಲರ್ ಸ್ವಚ್ಛ್ 2 ಲೀಟರ್ ಮಾದರಿಯ ಬೆಲೆ ₹1,750 ಎಂದು ಪ್ರಕಟಣೆ ತಿಳಿಸಿದೆ.

ಎರಡೂ ಮಾದರಿಗಳ ಪ್ರೆಶರ್ ಕುಕ್ಕರ್‌ಗಳು ವಿಶಿಷ್ಟ ವಿನ್ಯಾಸದ ಆಳವಾದ ಮುಚ್ಚಳ ಹೊಂದಿವೆ. ಇವು ಪ್ರತಿಸ್ಪರ್ಧಿ ಮಾದರಿಗಳಿಗಿಂತ ಭಿನ್ನವಾಗಿವೆ.

ಅಡುಗೆ ಮಾಡುವಾಗ ಪದಾರ್ಥಗಳು ಸೋರುವುದನ್ನು ನಿಯಂತ್ರಿಸಿ, ಅಡುಗೆಮನೆ ಗಲೀಜಾಗುವುದನ್ನು ತಡೆಯುತ್ತವೆ. ಅಡುಗೆಮನೆಯ ಸುರಕ್ಷತೆಯನ್ನು ಇವು ಖಾತರಿಪಡಿಸುತ್ತವೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ



## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 300-350 |
| ನಡುಗೋಲು | 450-500 |
| ರಾಶಿ | 500-550 |
| ರಾಶಿ ಉತ್ತಮ | 750-800 |
| ಜರಡಿ | 1000 - 1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-900 |
| ಹಸಿರು ಉತ್ತಮ | 1000-1100 |
| ಹಸಿರು ಅತಿ ಉತ್ತಮ | 1600-1650 |
| ಕಾಳು ಮೆಣಸು - | 480 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-40500 |
| ಹಳತು | 48000-53000 |
| **ಕಾರ್ಕಳ** | |
| ಹೊಸತು | 30000-41000 |
| ಹಳತು | 40000-50500 |
| **ಪುತ್ತೂರು** | |
| ಕೋಕ | 11000-25000 |
| ಹೊಸತು | 33500-41000 |
| **ಸಾಗರ** | |
| ಬಿಳಿಗೋಟು | 31509-33729 |
| ಚಾಲಿ | 37099-39529 |
| ಕೋಕ | 21199-36837 |
| ಕೆಂಪುಗೋಟು | 30099-37599 |
| ರಾಶಿ | 41899-52399 |
| ಸಿಪ್ಪೆಗೋಟು | 8219-22033 |
| **ಶಿವಮೊಗ್ಗ** | |
| ಗೊರಬಲು | 18009-40100 |
| ರಾಶಿ | 35000-53899 |
| ಸರಕು | 52399-86400 |
| **ಸಿದ್ದಾಪುರ** | |
| ಬಿಳಿಗೋಟು | 30100-33599 |
| ಚಾಲಿ | 36399-39809 |
| ಕೋಕ | 29299-32899 |
| ಹಳೆಚಾಲಿ | 37929-39069 |
| ಕೆಂಪುಗೋಟು | 33019–33699 |
| ರಾಶಿ | 46869-50799 |
| ತಟ್ಟಿಬೆಟ್ಟೆ | 40279-46099 |
| **ಶಿರಸಿ** | |
| ಬೆಟ್ಟೆ | 40589-48899 |
| ಬಿಳಿಗೋಟು | 27209-35460 |
| ಚಾಲಿ | 35599-40099 |
| ಕೆಂಪುಗೋಟು | 33461-37121 |
| ರಾಶಿ | 46518-51209 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| ಮೂಡಿಗೆರೆ | ಹಾಸನ | | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15300 | 15350 | 15325 | - |
| ಎಸಿ | 7980 | 8100 | 7700 | |
| ಆರ್‌ಪಿ | 10800 | 10900 | 10850 | ಲಂಡನ್ |
| ಆರ್‌ಸಿ | 6360 | 254 | 6225 | 2833 ಡಾಲರ್ಸ್ |

## ಸಾಜಿದ್ ಮಿರ್‌ಗೆ ಜಾಗತಿಕ ಉಗ್ರನ ಪಟ್ಟಕ್ಕೆ ಚೀನಾ ತಡೆ

ವಿಶ್ವಸಂಸ್ಥೆ (ಪಿಟಿಐ): ಮುಂಬೈನ 26/11 ಭಯೋತ್ಪಾದಕ ದಾಳಿಯ ಹೊಣೆ ಹೊತ್ತಿರುವ ಪಾಕಿಸ್ತಾನ ಮೂಲದ ಲಷ್ಕರ್- ಎ- ತಯಬಾ ಸಂಘಟನೆಯ ಉಗ್ರ ಸಾಜಿದ್ ಮಿರ್‌ನನ್ನು ಜಾಗತಿಕ ಭಯೋತ್ಪಾದಕನೆಂದು ಘೋಷಿಸಲು ಭಾರತ ಮತ್ತು ಅಮೆರಿಕ ವಿಶ್ವಸಂಸ್ಥೆಯಲ್ಲಿ ಸಲ್ಲಿಸಿದ್ದ ಪ್ರಸ್ತಾವನೆಗೆ ಚೀನಾ ಮತ್ತೊಮ್ಮೆ ತಡೆಯೊಡ್ಡಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಲ್ ಖೈದಾ ನಿರ್ಬಂಧ ಸಮಿತಿಯ ಅಡಿಯಲ್ಲಿ ಭಯೋತ್ಪಾದಕ ಮಿರ್‌ನನ್ನು ಜಾಗತಿಕ ಭಯೋತ್ಪಾದಕನೆಂದು ಘೋಷಿಸಿ, ಕಪ್ಪುಪಟ್ಟಿಗೆ ಸೇರಿಸಲು ಅಮೆರಿಕ ಮತ್ತು ಭಾರತ ರೂಪಿಸಿದ್ದ ಜಂಟಿ ಪ್ರಸ್ತಾವಕ್ಕೆ ಚೀನಾ ಮಂಗಳವಾರ ತಡೆಯೊಡ್ಡಿದೆ.

ಇಂತಹ ಪ್ರಸ್ತಾವಕ್ಕೆ ಚೀನಾ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲೂ ತಡೆಯೊಡ್ಡಿತ್ತು. ಮುಂಬೈ ದಾಳಿಯಲ್ಲಿ ಭಾರತಕ್ಕೆ ಬೇಕಾಗಿರುವ ಉಗ್ರ ಸಾಜಿದ್ ಮಿರ್ ಬಗ್ಗೆ ಸುಳಿವು ನೀಡುವವರಿಗೆ ಭಾರತ ₹41 ಕೋಟಿ ಬಹುಮಾನ ಘೋಷಿಸಿದೆ.

**ಮುಂಬೈ ಧಾರಣೆ**

**ಶೇಂಗಾ**

20-6-2023

| | |
|---|---|
| ಜಾವಾ 70/80(ಹೊಸ) | 11350-11400 |
| ಜಾವಾ 80/90(ಹೊಸ) | 10750-10800 |
| ದಪ್ಪ ಮಧ್ಯಪ್ರದೇಶ(ಹೊಸ) | 11200-11300 |
| ದಪ್ಪ ಗುಜರಾತ್(ಹೊಸ) | 12100-12200 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1680(1690) |
| ಒಂದು ವಾರದ ಡೆಲಿವರಿ | 1675(1685) |
| ಸೋಯಾ ಕಚ್ಚಾ | 890(900) |
| ಪಾಮ್ ವಾರದ ಡೆಲಿವರಿ | 853(857) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 865(880) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
58950 (59000)
ಬೆಳ್ಳಿ ಕೆ.ಜಿ 71900 (72350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಪವನ್ ಕುಮಾರ್ ಪೊಲೀಸ್ ಪಾಟೀಲ್**

• **ಪ್ರಶ್ನೆ: ನಾನು ಆನ್‌ಲೈನ್ ಪ್ಲಾಟ್‌ಫಾರಂವೊಂದರಲ್ಲಿ ಬಹುಮಾನ ಗೆದ್ದಿದ್ದು, ಬಹುಮಾನದ ಮೊತ್ತದಲ್ಲಿ ಶೇಕಡ 30ರಷ್ಟು ತೆರಿಗೆ ಕಡಿತವಾಗಿ, ಉಳಿದ ಮೊತ್ತ ನನಗೆ ಸಿಕ್ಕಿದೆ. ಈ ಮೊತ್ತವನ್ನು ನಾನು ನನ್ನ ತಂದೆಯ ಖಾತೆಗೆ ವರ್ಗಾಯಿಸಬೇಕೆಂದು ಯೋಚಿಸಿರುವೆ. ಅದಕ್ಕೂ ತೆರಿಗೆ ಪಾವತಿ ಮಾಡಬೇಕೇ? ಈ ಹಣವನ್ನು ಹೇಗೆ ಬಳಸಬೇಕು?**

**ಉತ್ತರ:** ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194ಬಿಎ ಅನ್ವಯ ಯಾವುದೇ ಆನ್‌ಲೈನ್ ಆಟ, ರಸಪ್ರಶ್ನೆ ಕಾರ್ಯಕ್ರಮ, ಬೆಟ್ಟಿಂಗ್ ಇತ್ಯಾದಿಗಳಿಂದ ₹10 ಸಾವಿರಕ್ಕಿಂತ ಹೆಚ್ಚಿನ ಮೊತ್ತ ಆದಾಯವಾಗಿ ಬಂದರೆ, ಅಂತಹ ಮೊತ್ತಕ್ಕೆ ತೆರಿಗೆ ಕಡಿತ ಮಾಡಲಾಗುತ್ತದೆ. ಈ ತೆರಿಗೆ ಕಡಿತವು ವಿಶೇಷ ದರವಾದ ಶೇ 30ರ ಮಟ್ಟದಲ್ಲಿ ಇರುತ್ತದೆ. ಈ ತೆರಿಗೆ ದರವು ಆಟದಲ್ಲಿ ವಿಜೇತನಾದ ವ್ಯಕ್ತಿಯ ವೈಯಕ್ತಿಕ ತೆರಿಗೆ ದರಕ್ಕೂ ನೇರ ಸಂಬಂಧ ಇಲ್ಲ. ಉದಾಹರಣೆಗೆ, ತೆರಿಗೆದಾರ ತನ್ನ ವೇತನದ ಆದಾಯಕ್ಕೆ ಯಾವುದೇ ದರದ ಅಡಿ ತೆರಿಗೆಗೆ ಒಳಪಟ್ಟರೂ, ಮೇಲೆ ಹೇಳಿರುವ ಆದಾಯ ಗಳಿಸಿದ ಸಂದರ್ಭದಲ್ಲಿ ಅಂತಹ ಆದಾಯಕ್ಕೆ ಶೇ 30ರ ಪ್ರತ್ಯೇಕ ತೆರಿಗೆ ದರ ಅನ್ವಯವಾಗುತ್ತದೆ. ಇಂತಹ ಪಾವತಿ ಮಾಡುವ ಮುನ್ನ ಬಹುಮಾನದ ವಿತರಕರು ತೆರಿಗೆ ಕಡಿತಗೊಳಿಸಬೇಕು. ಅಂತಹ ಆದಾಯಕ್ಕೆ ಯಾವುದೇ ವಿನಾಯಿತಿಗಳು (ಸೆಕ್ಷನ್ 80ಸಿ ಅಥವಾ 80 ಡಿ ಇತ್ಯಾದಿ) ಸಿಗುವುದಿಲ್ಲ.

ಇತ್ತೀಚಿನ ಪ್ರಕಟಣೆಯ ಪ್ರಕಾರ, ಆನ್‌ಲೈನ್ ಆಟದಲ್ಲಿ ಗೆಲ್ಲುವ ಮೂಲಕ ಗಳಿಸಿದ ಪ್ರತಿ ರೂಪಾಯಿಯ ಮೇಲೂ ಟಿಡಿಎಸ್ ಕಡಿತಗೊಳಿಸಬೇಕು. ಆನ್‌ಲೈನ್ ಆಟ ನಿರ್ವಹಿಸುವ ಕಂಪನಿಗಳು ಈ ಕೆಲಸ ಮಾಡಬೇಕು. ಈ ನಿಯಮವು ಈ ವರ್ಷದ ಏಪ್ರಿಲ್ 1ರಿಂದ ಆರಂಭವಾಗಿದೆ. ನಿಮ್ಮ ವಿಚಾರದಲ್ಲಿ ಈ ಕಡಿತ ಸರಿಯಾಗಿದೆ. ಇದು ನಿಮ್ಮ ಆದಾಯದ ಭಾಗವೇ ಆಗಿದೆ.

ನೀವು ಈ ಮೊತ್ತವನ್ನು ನಿಮ್ಮ ತಂದೆಯವರ ಖಾತೆಗೆ ವರ್ಗಾಯಿಸುವ ಬಗ್ಗೆ ಕೇಳಿದ್ದೀರಿ. ಸಮೀಪದ ಬಂಧುಗಳಾದ ತಂದೆ-ತಾಯಿ, ಮಕ್ಕಳು, ಗಂಡ-ಹೆಂಡತಿ, ಸಹೋದರ-ಸಹೋದರಿ ಇತ್ಯಾದಿ ವ್ಯಕ್ತಿಗಳೊಳಗಿನ ಹಣಕಾಸು ವ್ಯವಹಾರಕ್ಕೆ ಕೆಲವು ವಿನಾಯಿತಿಗಳಿವೆ. ಹೀಗಾಗಿ ಅಂತಹ ಆರ್ಥಿಕ ವ್ಯವಹಾರ 'ಉಡುಗೊರೆ'ಯ ರೂಪದಲ್ಲಿ ಇರಬೇಕು. ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 56(2)ರ ನಿಬಂಧನೆಗಳ ಪ್ರಕಾರ ಇವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಹೀಗಾಗಿ ಉಡುಗೊರೆಯಾಗಿ ವರ್ಗಾಯಿಸುವ ಇಂತಹ ಮೊತ್ತಕ್ಕೆ ತೆರಿಗೆ ಇರುವುದಿಲ್ಲ.

ನಿಮ್ಮ ಹೂಡಿಕೆ ನಿರ್ಧಾರದ ಬಗ್ಗೆ ಹೇಳುವುದಾದರೆ, ಅದು ನೀವು ತೆಗೆದುಕೊಳ್ಳಬಹುದಾದ ರಿಸ್ಕ್ ಮೇಲೆ ಅವಲಂಬಿತವಾಗಿದೆ. ಒಂದಷ್ಟು ಮೊತ್ತವನ್ನು ನಿಶ್ಚಿತ ಆದಾಯ ನೀಡುವ ಹೂಡಿಕೆಯಲ್ಲಿ, ನಿಮ್ಮ ತಂದೆಯವರ ಹೆಸರಲ್ಲಿ ಖಾತೆ ತೆರೆದು ಅವರ ವಯೋಮಾನಕ್ಕೆ ಸೂಕ್ತವಾದ ಅಂಚೆ ಠೇವಣಿಗಳಲ್ಲಿ, ಉತ್ತಮ ಮ್ಯೂಚುವಲ್ ಫಂಡ್‌ಗಳಲ್ಲಿ, ಷೇರು, ಇಟಿಎಫ್, ಚಿನ್ನದ ಬಾಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಪ್ರತಿ ಹೂಡಿಕೆ ಉತ್ಪನ್ನದ ವೈಶಿಷ್ಟ್ಯ, ಆದಾಯ, ಅಪಾಯ ವಿಭಿನ್ನವಾಗಿರುತ್ತದೆ ಎಂಬುದನ್ನು ಅರಿತು ಹೂಡಿಕೆ ಮಾಡಿ.

**ಚಂದ್ರಕಾಂತ್ ಕಾಮತ್, ಬೆಂಗಳೂರು**

• **ಪ್ರಶ್ನೆ: ನನ್ನಲ್ಲಿ ಎರಡು-ಮೂರು ಕ್ರೆಡಿಟ್ ಕಾರ್ಡ್‌ಗಳು ಇವೆ. ಬೇರೆ ಬೇರೆ ಬ್ಯಾಂಕುಗಳ ಕಾರ್ಡ್ ಇವಾಗಿದ್ದು ಪರ್ಯಾಯವಾಗಿ ಬಳಸುತ್ತಿರುತ್ತೇನೆ. ಕಾರ್ಡ್ ಪ್ರೊಟೆಕ್ಷನ್ ಇನ್ಶೂರೆನ್ಸ್ ಯೋಜನೆ ಖರೀದಿಸುವ ಬಗ್ಗೆ ಅನೇಕ ಎಸ್ಎಂಎಸ್ ಹಾಗೂ ಕರೆಗಳು ನನಗೆ ಬರುತ್ತಿರುತ್ತವೆ. ನಿಜವಾಗಿ ಇದರಿಂದ ಏನಾದರೂ ಪ್ರಯೋಜನ ಇದೆಯೇ?**

**ಉತ್ತರ:** ಕ್ರೆಡಿಟ್ ಕಾರ್ಡ್‌ಗಳು, ಡೆಬಿಟ್ ಕಾರ್ಡ್‌ಗಳು, ಲಾಯಲ್ಟಿ ಮತ್ತು ಸದಸ್ಯತ್ವ ಕಾರ್ಡ್‌ಗಳು ಇಂದು ಬಹಳ ಸಾಮಾನ್ಯವಾಗಿವೆ. ಪ್ರತಿ ವ್ಯಕ್ತಿಯ ಕೈಯಲ್ಲಿ ಇರುವ ಹಣಕಾಸಿನ ಉತ್ಪನ್ನಗಳು ಇವು. ಇವು ಪ್ರತಿ ವ್ಯಕ್ತಿಗೂ ವೈಯಕ್ತಿಕ ಹಣಕಾಸಿನ ವಿಚಾರದಲ್ಲಿ ದಿನವೂ ನೆರವಿಗೆ ಬರುತ್ತವೆ. ಬಳಸಲು ಮತ್ತು ಇಟ್ಟುಕೊಳ್ಳಲು ಇವು ಸರಳವಾದರೂ, ನಮ್ಮ ಒತ್ತಡದ ಬದುಕಿನಲ್ಲಿ, ಪ್ರಯಾಣ ಸಂದರ್ಭದಲ್ಲಿ ಇಂತಹ ಕಾರ್ಡ್‌ಗಳನ್ನು ಕಳೆದುಕೊಳ್ಳುವ ಅಪಾಯವಿದೆ. ಇವಲ್ಲದೆ ನಮ್ಮ ಪಾವತಿ ವಿಧಾನಗಳಲ್ಲಿ ಕೆಲವು ಅಪಾಯಗಳನ್ನು ಅಲ್ಲಗಳೆಯುವಂತಿಲ್ಲ. ನಮ್ಮ ವಾಲೆಟ್ ಕಳೆದುಹೋದರೆ, ಕಾರ್ಡ್‌ಗಳ ದುರುಪಯೋಗ ಆಗುವ ಅಪಾಯ ಅಧಿಕ.

ಕಾರ್ಡ್ ಪ್ರೊಟೆಕ್ಷನ್ ಇನ್ಶೂರೆನ್ಸ್ ಯೋಜನೆ ಖರೀದಿಸುವ ಮೊದಲು, ಅದರ ಇತಿಮಿತಿಗಳನ್ನು ತಿಳಿಯಬೇಕು. ಹೆಚ್ಚಿನ ಜೀವ ವಿಮಾ ಸೌಲಭ್ಯಕ್ಕೆ ಕೆಲವು ಪರಿಸ್ಥಿತಿಗಳಲ್ಲಿ ಅದೇ ಬಗೆಯ ಯಾವುದೇ ಕಾರ್ಡ್ ಕಳೆದುಹೋದರೆ, ಕಳ್ಳತನವಾದರೆ ಅಥವಾ ವಂಚನೆಗೆ ಗುರಿಯಾದಾಗ ಕಾರ್ಡ್ ವಿಮೆ ಪಡೆದ ಗ್ರಾಹಕರು ಕೆಲವು ಪರಿಹಾರಗಳಿಗೆ ಒಳಪಡುವ ನಷ್ಟಭರ್ತಿಗೆ ಅರ್ಹರಾಗುತ್ತಾರೆ. ವಿಮಾ ಯೋಜನೆಯು ನಿಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಮಾತ್ರವಲ್ಲದೆ ಡೆಬಿಟ್ ಕಾರ್ಡ್‌ಗಳು, ರಿಟೇಲ್ ಅಂಗಡಿಗಳ ಸದಸ್ಯತ್ವ ಕಾರ್ಡ್‌ಗಳು, ಲಾಯಲ್ಟಿ ಕಾರ್ಡ್‌ಗಳಂತಹ ಎಲ್ಲ ಬಗೆಯ ಪ್ಲಾಸ್ಟಿಕ್ ಹಣವನ್ನು ಒಳಗೊಂಡಿರುತ್ತದೆ ಎಂದು ಖಾತರಿಪಡಿಸಿಕೊಳ್ಳಿ.

ಇಂತಹ ವಿಮಾ ಉತ್ಪನ್ನ ಪಡೆಯುವ ಮೊದಲು ಅದರ ಪ್ರೀಮಿಯಂ, ಅದು ಒಳಗೊಳ್ಳುವ ಸೌಲಭ್ಯ, ವಿಮಾ ವ್ಯಾಪ್ತಿಯಿಂದ ಹೊರತಾಗಿರುವುದರ ವಿವರ ಇತ್ಯಾದಿ ಮಾಹಿತಿಯನ್ನು ಅರ್ಥ ಮಾಡಿಕೊಳ್ಳಿ. ವಿಮಾ ಸೌಲಭ್ಯ ಕ್ರೆಡಿಟ್ ಕಾರ್ಡ್‌ಗಳಿರುವ ಪೂರ್ಣ ಮಿತಿಯನ್ನು ಒಳಗೊಳ್ಳುತ್ತದೆಯೇ ಎಂಬುದನ್ನು ತಿಳಿಯಿರಿ.

ನಿಮ್ಮ ಕಾರ್ಡ್ ಕಳೆದುಹೋದಾಗ ಅಥವಾ ಯಾವುದೋ ಆನ್‌ಲೈನ್ ಜಾಲದ ವ್ಯವಹಾರದಲ್ಲಿ ವಂಚನೆಗೊಳಗಾದರೆ ಆಗುವ ನಷ್ಟವನ್ನು ವಿಮೆಯು ಭರಿಸಬೇಕಿರುವುದು ಮುಖ್ಯ. ನಿಮ್ಮ ವಿಚಾರದಲ್ಲಿ ಯಾವುದೇ ಸಂದರ್ಭದಲ್ಲಿ ನಿಮಗೆ ಅಂತಹ ಅಪಾಯ ಎದುರಾಗುವ ಭೀತಿ ಇದ್ದರೆ, ನಿಮ್ಮ ಕಾರ್ಡ್ ಬಳಕೆ ಮಿತಿ ಹೆಚ್ಚಿದ್ದರೆ, ಈ ವಿಮೆಯನ್ನು ಖಂಡಿತ ಪಡೆಯಿರಿ. ಆದರೆ ಇವತ್ತಿನ ಸೈಬರ್ ವಂಚನೆಗಳನ್ನು ನೋಡಿದರೆ, ನಿಮ್ಮ ಕಾರ್ಡ್‌ಗಳ ಆರ್ಥಿಕ ವಹಿವಾಟಿನ ಮಿತಿಯನ್ನು ಆನ್‌ಲೈನ್ ಮೂಲಕ ನೀವೇ ನಿಮ್ಮ ಅಗತ್ಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಹುದು. ಈ ಮೂಲಕ ಹಣಕಾಸಿನ ಅನಿರೀಕ್ಷಿತ ಅಪಾಯಗಳಿಗೆ ಬಹುಮಟ್ಟಿಗೆ ತಡೆಯೊಡ್ಡಬಹುದು.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
**ವಿಳಾಸ:** ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
**ಇ-ಮೇಲ್:** businessdesk@prajavani.co.in



# ಭಾರತ–ಅಮೆರಿಕ ಬಾಂಧವ್ಯಕ್ಕೆ ಮತ್ತಷ್ಟು ಬಲ

### ನಾಲ್ಕು ದಿನ ಮೋದಿ ಪ್ರವಾಸ • ಜೋ ಬೈಡನ್ ಜೊತೆ ದ್ವಿಪಕ್ಷೀಯ ಚರ್ಚೆ

ನ್ಯೂಯಾರ್ಕ್ (ಪಿಟಿಐ): ಪ್ರಧಾನಿ ಮೋದಿ ಅವರ ಬಹುನಿರೀಕ್ಷಿತ ಅಮೆರಿಕ ಪ್ರವಾಸ ಆರಂಭವಾಗಿದ್ದು, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಗುರಿಯೊಂದಿಗೆ ಅಧ್ಯಕ್ಷ ಜೋ ಬೈಡನ್ ಜೊತೆ ಮಾತುಕತೆ ಸೇರಿ ವಿವಿಧ ಸಭೆಗಳು ನಡೆಯಲಿವೆ.

ಭೇಟಿಯು ಸಹಜವಾಗಿಯೇ ಹಲವು ನಿರೀಕ್ಷೆಗಳನ್ನು ಮೂಡಿಸಿದೆ. ಭಾರತ-ಅಮೆರಿಕ 'ಸಹಜ ಮೈತ್ರಿ' ರಾಷ್ಟ್ರಗಳಾಗಿದ್ದು, ಭೇಟಿಯಿಂದ ಇನ್ನಷ್ಟು ಬಲಗೊಳ್ಳಲಿದೆ ಎಂದು ಕಾರ್ಪೊರೇಟ್ ವಲಯ ಮತ್ತು ಅಮೆರಿಕ-ಭಾರತ ಕಾರ್ಯತಂತ್ರ ಪಾಲುದಾರಿಕೆ ವೇದಿಕೆ (ಯುಎಸ್‌ಐಪಿಎಫ್) ವಿಶ್ವಾಸ ವ್ಯಕ್ತಪಡಿಸಿವೆ.

ಮೊದಲ ದಿನ ಬುಧವಾರ (ಜೂನ್ 21) ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆ ಕೇಂದ್ರ ಕಚೇರಿಯಲ್ಲಿ ನಡೆಯುವ ಅಂತರರಾಷ್ಟ್ರೀಯ ಯೋಗ ದಿನದ ನೇತೃತ್ವವನ್ನು ಮೋದಿ ವಹಿಸುವರು. 100ಕ್ಕೂ ಹೆಚ್ಚು ರಾಷ್ಟ್ರಗಳ ಪ್ರತಿನಿಧಿಗಳು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ.

ಎರಡನೇ ದಿನ ಗುರುವಾರ ವಾಷಿಂಗ್ಟನ್ ಡಿ.ಸಿ.ಯಲ್ಲಿ ಅಧ್ಯಕ್ಷ ಜೋ ಬೈಡನ್ ಮತ್ತು ಅವರ ಪತ್ನಿ ಜಿಲ್ ಬೈಡನ್ ದಂಪತಿಯು ಔತಣಕೂಟ ಏರ್ಪಡಿಸಿದ್ದು, ಅದೇ ದಿನ ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮೋದಿ ಭಾಷಣ ಮಾಡಲಿದ್ದಾರೆ. 23ರಂದು ವಾಷಿಂಗ್ಟನ್‌ನ ರೊನಾಲ್ಡ್ ರೇಗನ್ ಕಟ್ಟಡದ ಸಂಕೀರ್ಣವೊಂದರಲ್ಲಿ ಭಾರತ ಮೂಲದ ಆಯ್ದ ಪ್ರಮುಖರ ಸಮಾವೇಶ ಉದ್ದೇಶಿಸಿ ಭಾಷಣ ಮಾಡುವರು.

'ಭಾರತ –ಅಮೆರಿಕ ಸಹಜ ಪಾಲುದಾರ ರಾಷ್ಟ್ರಗಳು. ಹಿರಿಯ ಮತ್ತು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳು. ಇಲ್ಲಿರುವ ಭಾರತ ಮೂಲದ ದೊಡ್ಡ ಸಮುದಾಯವು ಭಾರತ, ಅಮೆರಿಕ ಎರಡನ್ನೂ ಮನೆ ಎಂದೇ ಭಾವಿಸಲಿವೆ. ನೆಲದ ಕಾನೂನಿಗೆ ನಮ್ಮ ಬದ್ಧತೆ. ಮೋದಿ ಭೇಟಿಯು ಎರಡೂ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ಮತ್ತೊಂದು ಹಂತಕ್ಕೆ ಒಯ್ಯಲಿದೆ' ಎಂದು ಯುಎಸ್‌ಐಪಿಎಫ್ ನಿರ್ದೇಶಕರಾದ ರೆಂಜಿನ್ ಹೇಳಿದರು.

'ಡಿಜಿಟಲ್ ಇಂಡಿಯಾ ಮತ್ತು ಈ ಮೂಲಕ ಸೌಲಭ್ಯಗಳನ್ನು ದೇಶದ ಪ್ರತಿಯೊಬ್ಬ ನಾಗರಿಕನಿಗೆ ಹೇಗೆ ತಲುಪಿಸಬಹುದು ಎಂಬುದಕ್ಕೆ ಮೋದಿ ವಿಶ್ವದ ಹಲವು ರಾಷ್ಟ್ರಗಳಿಗೆ ಮಾದರಿಯಾಗಿದ್ದಾರೆ' ಎಂದು ಯುಎಸ್‌ಐಪಿಎಫ್ ಅಧ್ಯಕ್ಷ ಜಾನ್ ಚೇಂಬರ್ಸ್ ಹೇಳಿದರು.

### ಮುಂಬೈ ದಾಳಿ: ಹುತಾತ್ಮರಿಗೆ ವಿಶ್ವಸಂಸ್ಥೆ ಗೌರವ

ವಿಶ್ವಸಂಸ್ಥೆ (ಪಿಟಿಐ): ಮುಂಬೈನಲ್ಲಿ ನಡೆದಿದ್ದ 26/11ರ ಭಯೋತ್ಪಾದಕರ ದಾಳಿ ಸೇರಿದಂತೆ ಭಯೋತ್ಪಾದಕರಿಗೆ ಬಲಿಯಾದವರ ಗೌರವಾರ್ಥ ವಿಶ್ವಸಂಸ್ಥೆಯು ಮಂಗಳವಾರ ಗೌರವ ಸಲ್ಲಿಸಿದೆ.

ಇದೇ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಕೇಂದ್ರ ಕಚೇರಿ ಆವರಣದಲ್ಲಿ ಇರುವ ಮಹಾತ್ಮಗಾಂಧಿ ಪ್ರತಿಮೆ ಹಿಂಭಾಗದ ಸ್ಥಳದಲ್ಲಿ ಸೋಮವಾರ ಸಸಿಯನ್ನು ನೆಡಲಾಯಿತು.

ವಿಶ್ವಸಂಸ್ಥೆಯ ಮೂರನೇ ಭಯೋತ್ಪಾದನಾ ವಿರೋಧಿ ಸಪ್ತಾಹ ಕಾರ್ಯಕ್ರಮವೂ ಇದರೊಂದಿಗೆ ಆರಂಭವಾಯಿತು. ಯೋಗ ದಿನಾಚರಣೆಯಲ್ಲಿ ಭಾಗವಹಿಸಲಿರುವ ಪ್ರಧಾನಿ ಮೋದಿ ಭೇಟಿಗೆ ಮುನ್ನಾದಿನಂದು ಈ ಕಾರ್ಯಕ್ರಮ ನಡೆದಿದೆ.

**ಥಾಣೆದಾರ್‌ಗೆ ಪ್ರಧಾನಿ ಕರೆತರುವ ಗೌರವ:** ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ 22ರಂದು ಮೋದಿ ಭಾಷಣ ಮಾಡಲಿದ್ದು ಅವರನ್ನು ಸಂಸತ್ತಿಗೆ ಕರೆತರುವ ಗೌರವವು ಭಾರತ ಮೂಲದ ಅಮೆರಿಕದ ಸಂಸದ ಥಾಣೆದಾರ್ ಅವರಿಗೆ ಒಲಿದಿದೆ. ಅದೇ ದಿನ ಶ್ವೇತಭವನದಲ್ಲಿ ಪ್ರಧಾನಿಗೆ ಆಯೋಜಿಸಿರುವ ಔತಣಕೂಟಕ್ಕೂ ಅವರಿಗೆ ಆಹ್ವಾನ ನೀಡಲಾಗಿದೆ.

ಅಮೆರಿಕ ಸಂಸತ್ತನ್ನು ಉದ್ದೇಶಿಸಿ ಪ್ರಧಾನಿ ಮೋದಿ ಅವರು ಭಾಷಣ ಮಾಡಲಿರುವುದು ಇದು ಎರಡನೇ ಬಾರಿ. ಈ ಮೊದಲು ಅವರು 2016ರಲ್ಲಿ ಮಾತನಾಡಿದ್ದರು.

### ಎಲಾನ್ ಮಸ್ಕ್ ಸೇರಿ ಹಲವರ ಜೊತೆ ಭೇಟಿ

ಅಮೆರಿಕ ಪ್ರವಾಸದ ಮೊದಲ ದಿನವಾದ ಬುಧವಾರವೇ ಪ್ರಧಾನಿ ಮೋದಿ ಟ್ವಿಟ್ಟರ್ ಸಂಸ್ಥೆಯ ಮಾಲೀಕ ಎಲಾನ್ ಮಸ್ಕ್, ಖಭೌತ ವಿಜ್ಞಾನಿ ನೀಲ್ ಡಿ'ಗ್ರೇಸ್ ಟೈಸನ್ ಸೇರಿದಂತೆ ಎರಡು ಡಜನ್‌ಗೂ ಅಧಿಕ ವಿವಿಧ ಕ್ಷೇತ್ರಗಳ ಉದ್ಯಮಿಗಳು, ಪ್ರಮುಖರನ್ನು ಭೇಟಿಯಾಗುವರು.

ನೊಬೆಲ್ ಪ್ರಶಸ್ತಿ ಪುರಸ್ಕೃತ, ಆರ್ಥಿಕ ತಜ್ಞರಾದ ಪಾಲ್ ರೋಮರ್, ಲೇಖಕ ನಿಕೋಲಾಸ್ ನಾಸಿಂ ತಲೆಬ್, ಹೂಡಿಕೆದಾರ ರೇ ಡಲಿಯೊ, ಫಾಲು ಶಾ, ಜೆಫ್ ಸ್ಮಿತ್, ಮೈಖೇಲ್ ಫ್ರೊಮನ್, ಡೇನಿಯಲ್ ರಸ್ಸೆಲ್, ಎಬ್ರಿಜ್ ಕಾಲ್ಬಿ, ಪೀಟರ್ ಅಗ್ರೆ, ಚಂದ್ರಿಕಾ ಟಂಡನ್ ಅವರು ಮೋದಿ ಭೇಟಿಯಾಗುವ ಪ್ರಮುಖರಲ್ಲಿ ಸೇರಿದ್ದಾರೆ.

ಉತ್ತಮ ಸೌಹಾರ್ದ ಸಾಧನೆ, ಅಮೆರಿಕದಲ್ಲಿನ ಅಭಿವೃದ್ಧಿ ಕುರಿತು ಜಾಗೃತಿ, ಭಾರತದಲ್ಲಿ ಕಾರ್ಯ-ಚಟುವಟಿಕೆಯನ್ನು ಹೊಂದಲು ಈ ಪ್ರಮುಖರನ್ನು ಆಹ್ವಾನಿಸುವುದು ಭೇಟಿಯ ಉದ್ದೇಶವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

### ಭಾರತದಲ್ಲಿ ಚೀತಾ ಮರು ಪರಿಚಯಿಸಲು ಕೈಜೋಡಿಸಿದ್ದ ಉದ್ಯಮಿ

# ಕಾಣೆಯಾದ ಜಲಾಂತರ್ಗಾಮಿಯಲ್ಲಿ ಹ್ಯಾಮಿಶ್



ಲಂಡನ್ (ಪಿಟಿಐ): ಟೈಟಾನಿಕ್ ಹಡಗಿನ ಅವಶೇಷಗಳ ವೀಕ್ಷಣೆಗೆ ಹೋಗಿ ಅಟ್ಲಾಂಟಿಕ್ ಸಾಗರದೊಳಗೆ ನಾಪತ್ತೆಯಾದ ಟೈಟನ್ ಜಲಾಂತರ್ಗಾಮಿಯೊಳಗಿರುವ ಐವರು ಪ್ರವಾಸಿಗರಲ್ಲಿ, ಭಾರತದಲ್ಲಿ ಚೀತಾಗಳನ್ನು ಮರು ಪರಿಚಯಿಸುವ ಯೋಜನೆಗೆ ಕೈಜೋಡಿಸಿದ್ದ ಬ್ರಿಟನ್ ಉದ್ಯಮಿ ಹ್ಯಾಮಿಶ್ ಹಾರ್ಡಿಂಗ್ ಕೂಡ ಇರುವ ಮಾಹಿತಿ ದೊರೆತಿದೆ.

ನಮೀಬಿಯಾದ ಎಂಟು ಚೀತಾಗಳನ್ನು ಭಾರತಕ್ಕೆ ತಂದು ಮರು ಪರಿಚಯಿಸಿದ ಚೀತಾ ಯೋಜನೆಯಲ್ಲಿ ಹಾರ್ಡಿಂಗ್ ಕೂಡ ಪ್ರಮುಖ ಪಾತ್ರ ವಹಿಸಿದ್ದರು.

ಟೈಟಾನಿಕ್ ಹಡಗಿನ ಅವಶೇಷಗಳ ವೀಕ್ಷಣೆಗೆ ತೆರಳಿದ್ದ ಅಮೆರಿಕದ ಓಷನ್‌ಗೇಟ್ ಎಕ್ಸ್‌ಪೆಡಿಷನ್ಸ್ ಕಂಪನಿಯ ಜಲಾಂತರ್ಗಾಮಿಯಲ್ಲಿ ಒಬ್ಬ ಪೈಲಟ್ ಜತೆಗೆ ಪಾಕ್ ಮೂಲದ ಬ್ರಿಟನ್ ಉದ್ಯಮಿ ಶಾಹಜಾದಾ ದಾವೂದ್, ಅವರ 19 ವರ್ಷದ ಪುತ್ರ ಸುಲೇಮಾನ್, ಸಾಗರ ಅನ್ವೇಷಕ, ಫ್ರಾನ್ಸ್‌ನ ಪೌಲ್ ಹೆನ್ರಿ ನರ್ಗಿಯೊಲೆಟ್ ಕೂಡ ಇದ್ದಾರೆ ಎಂದು ಬಿಬಿಸಿ ವರದಿ ಮಾಡಿದೆ.

ಜಲಾಂತರ್ಗಾಮಿಯು ಭಾನುವಾರ ಪಯಣ ಆರಂಭಿಸಿದ ನಂತರ ನಿಯಂತ್ರಣ ಕೊಠಡಿಯ ಸಂಪರ್ಕವನ್ನು ಅಟ್ಲಾಂಟಿಕ್ ಸಾಗರದ ಮಧ್ಯೆ ಕಳೆದುಕೊಂಡಿದೆ. ಈ ಜಲಾಂತರ್ಗಾಮಿಯಲ್ಲಿ ಒಟ್ಟು 90 ಗಂಟೆ ಉಸಿರಾಟಕ್ಕೆ ಆಮ್ಲಜನಕ ವ್ಯವಸ್ಥೆ ಇದ್ದು, ರಕ್ಷಣಾ ಕಾರ್ಯ ಚುರುಕುಗೊಳಿಸಲಾಗಿದೆ. ಶೋಧ ಮತ್ತು ರಕ್ಷಣಾ ಕಾರ್ಯದಲ್ಲಿ ಅಮೆರಿಕ, ಕೆನಡಾದ ಹಡಗುಗಳು ಹಾಗೂ ವಿಮಾನಗಳು ತೊಡಗಿವೆ.

### ಮಣಿಪುರ: ಮೈತೇಯಿ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಸ್ಥಾನಮಾನ

# ಹೈಕೋರ್ಟ್‌ಗೆ ಮರುಪರಿಶೀಲನೆ ಅರ್ಜಿ

ಇಂಫಾಲ್(ಪಿಟಿಐ): ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಬೇಕೆಂದು ಸರ್ಕಾರಕ್ಕೆ ಮಾರ್ಚ್ 27ರಂದು ಔಪಚಾರಿಕವಾಗಿ ಶಿಫಾರಸು ಮಾಡಿದ್ದ ಆದೇಶದ ಬದಲಾವಣೆಗೆ ಸಂಬಂಧಿಸಿದಂತೆ ಮಣಿಪುರ ಹೈಕೋರ್ಟ್‌ಕ್ಕೆ ಸೋಮವಾರ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತು ಮೈತೇಯಿ ಬುಡಕಟ್ಟು ಒಕ್ಕೂಟ(ಎಂಟಿಯು) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎಂ.ವಿ. ಮುರುಳೀಧರನ್, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ವಿವರಣೆ ಕೋರಿ ನೋಟಿಸ್ ಜಾರಿಗೊಳಿಸಿದರು. ಬಳಿಕ ಜುಲೈ 5ಕ್ಕೆ ವಿಚಾರಣೆಯನ್ನು ಮುಂದೂಡಿದರು.

'ಆದೇಶ ಲಭಿಸಿದ ನಾಲ್ಕು ವಾರದೊಳಗೆ ಮೈತೇಯಿ ಜನರಿಗೆ ಪರಿಶಿಷ್ಟ ಪಂಗಡದ ಸ್ಥಾನಮಾನ ಕಲ್ಪಿಸಬೇಕು' ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅವರೇ ಮಾರ್ಚ್‌ನಲ್ಲಿ ಆದೇಶಿಸಿದ್ದರು.

2013ರಿಂದಲೂ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸುವಂತೆ ಮೈತೇಯಿ ಸಮುದಾಯದವರು ಕೇಂದ್ರಕ್ಕೆ ಒತ್ತಾಯಿಸುತ್ತಿದ್ದಾರೆ. ಹಾಗಾಗಿ, ಅವರ ಈ ಮನವಿ ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಆದರೆ, ರಾಜ್ಯಕ್ಕೆ ಈ ವಿಶೇಷಾಧಿಕಾರ ಇಲ್ಲ. ಈ ಬಗ್ಗೆ ಕೇಂದ್ರವೇ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಹೈಕೋರ್ಟ್ ಹೇಳಿದೆ.

'ಯಾವುದೇ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಗೊಳಿಸುವುದು ಮತ್ತು ತೆಗೆದುಹಾಕುವ ವಿಶೇಷಾಧಿಕಾರವು ಸಂಸತ್ ಮತ್ತು ರಾಷ್ಟ್ರಪತಿಗಷ್ಟೇ ಇದೆ. ಈ ಕುರಿತು ಸುಪ್ರೀಂ ಕೋರ್ಟ್ ಕೂಡ ಸ್ಪಷ್ಟಪಡಿಸಿದೆ. ಹಾಗಾಗಿ, ಹೈಕೋರ್ಟ್‌ನ ಆದೇಶ ಪಾಲಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಿಲ್ಲ. ನಾವು ಈ ಆದೇಶದಲ್ಲಿ ಕೆಲವು ಮಾರ್ಪಾಡುಗಳನ್ನು ಬಯಸಿದ್ದೇವೆ' ಎಂದು ಎಂಟಿಯು ಪರ ವಕೀಲ ಅಜೋಯ್ ಪೆಬಮ್ ತಿಳಿಸಿದರು.

'ಏಕಪೀಠ ನೀಡಿದ್ದ ಆದೇಶವನ್ನು ಪರಿಷ್ಕರಿಸಲು ಕೋರಿದ್ದೇವೆ. ತನಗೆ ಸೇರ್ಪಡೆಗೊಳಿಸುವ ಅಧಿಕಾರ ಇಲ್ಲವೆಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ತನ್ನ ಅಭಿಪ್ರಾಯ ತಿಳಿಸಲಿದೆ ಎಂದು ನಿರೀಕ್ಷಿಸಿದ್ದೇವೆ' ಎಂದರು.

## ಕುಕಿಗಳಿಗೆ ಸೇನಾ ಭದ್ರತೆ: 'ಸುಪ್ರೀಂ' ನಿರಾಕರಣೆ



ನವದೆಹಲಿ(ಪಿಟಿಐ): ಕುಕಿ ಬುಡಕಟ್ಟು ಜನರಿಗೆ ಸೇನಾ ಭದ್ರತೆ ನೀಡುವಂತೆ ಕೋರಿ ಮಣಿಪುರ ಬುಡಕಟ್ಟು ವೇದಿಕೆ ಸಲ್ಲಿಸಿದ್ದ ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎಂ.ಎಂ. ಸುಂದರೇಶ್ ಅವರಿದ್ದ ರಜಾ ಕಾಲದ ವಿಭಾಗೀಯ ಪೀಠವು, 'ನ್ಯಾಯಾಲಯವು ಮಧ್ಯಪ್ರವೇಶಿಸಿದರೆ ರಾಜ್ಯದಲ್ಲಿ ಮತ್ತಷ್ಟು ಸಮಸ್ಯೆಗಳು ಸೃಷ್ಟಿಯಾಗಲಿವೆ' ಎಂದು ಅಭಿಪ್ರಾಯಪಟ್ಟಿತು.

'ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಈ ಸಮಸ್ಯೆಯನ್ನು ಅಲ್ಲಿನ ಸರ್ಕಾರ ಬಗೆಹರಿಸಲಿದೆ. ಸುಪ್ರೀಂ ಕೋರ್ಟ್ ಪ್ರತಿಯೊಬ್ಬರಿಗೂ ರಕ್ಷಣೆ ನೀಡುವಂತೆ ಆದೇಶಿಸಲು ಸಾಧ್ಯವೇ?' ಎಂದು ಪ್ರಶ್ನಿಸಿದ ಪೀಠವು, 'ಕುಕಿಗಳಿಗೆ ರಕ್ಷಣೆ ನೀಡುವಂತೆ ಸೇನೆ ಅಥವಾ ಕೇಂದ್ರದ ರಕ್ಷಣಾ ಪಡೆಗಳಿಗೆ ಕೋರ್ಟ್ ಆದೇಶಿಸುವ ಅಗತ್ಯವಿಲ್ಲ' ಎಂದು ಹೇಳಿತು.

ಎನ್‌ಜಿಒ ಪರ ಹಾಜರಿದ್ದ ಹಿರಿಯ ವಕೀಲ ಕಾಲಿನ್ ಗೊನ್ಸಾಲ್ವ್ಸ್, 'ಮಣಿಪುರದಲ್ಲಿ 70 ಮಂದಿ ಬುಡಕಟ್ಟು ಜನರು ಮೃತಪಟ್ಟಿದ್ದಾರೆ' ಎಂದು ಹೇಳಿದರು.

'ಈ ಅಂಕಿಅಂಶಗಳನ್ನು ನಿಮಗೆ ಎಲ್ಲಿಂದ ಲಭಿಸಿದವು? ಎಂದು ಪ್ರಶ್ನಿಸಿದ ಪೀಠವು, ವಿಚಾರಣೆಯನ್ನು ಜುಲೈ 3ಕ್ಕೆ ಮುಂದೂಡಿತು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಹಿಂಸಾಚಾರ ಪೀಡಿತ ನೆಲದಲ್ಲಿ ಶಾಂತಿ ಪುನರ್ ಸ್ಥಾಪನೆಗೆ ರಕ್ಷಣಾ ಪಡೆಗಳು ನಿರತವಾಗಿವೆ' ಎಂದು ಪೀಠದ ಗಮನಕ್ಕೆ ತಂದರು.

## ದಿನದ ಬೆಳವಣಿಗೆ

- ನಿಷೇಧಿತ ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್‌ಗೆ (ಯುಎನ್‌ಎಲ್‌ಎಫ್) ಸೇರಿದ ನಾಲ್ವರು ಶಂಕಿತ ಬಂಡುಕೋರರನ್ನು ಥೌಬಲ್ ಜಿಲ್ಲೆಯಲ್ಲಿ ಬಂಧಿಸಿ, ಫಿರಂಗಿ, ಬಾಂಬ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನೆ ಹೇಳಿದೆ
- ಇಂಫಾಲ್‌ನಲ್ಲಿ ಮಂಗಳವಾರ ನಡೆಯಬೇಕಿದ್ದ ಜಗನ್ನಾಥ ದೇವರು, ದೇವಿ ಸುಭದ್ರ ಹಾಗೂ ಬಲಭದ್ರ ದೇವರ ವಾರ್ಷಿಕ ರಥಯಾತ್ರೆಯನ್ನು ಹಿಂಸಾಚಾರದ ಕಾರಣ ರದ್ದುಪಡಿಸಿದ್ದಾಗಿ ಬ್ರಹ್ಮ ಸಭಾ ಮುಖಂಡ ನವಕುಮಾರ್ ಶರ್ಮ ತಿಳಿಸಿದ್ದಾರೆ.
- ಮಣಿಪುರದಲ್ಲಿನ ಹಿಂಸಾಚಾರ ಕುರಿತು ನಾಗಾಲ್ಯಾಂಡ್ ಮುಖ್ಯಮಂತ್ರಿ ನೇಫ್ಯೂ ರಿಯೊ ಕಳವಳ ವ್ಯಕ್ತಪಡಿಸಿದ್ದಾರೆ.

# 'ಮಣಿಪುರ: ಮೋದಿಗೆ ತಾತ್ಸಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಳೆದ ಹಲವು ದಿನಗಳಿಂದ ನಡೆಯುತ್ತಿರುವ ಹಿಂಸಾಚಾರ, ಜನರ ಸಾವು–ನೋವಿನಿಂದ ಮಣಿಪುರ ನಲುಗಿದೆ. ಸಾವಿರಾರು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ವಿದ್ಯಮಾನಗಳ ಬಗ್ಗೆ ಪ್ರಧಾನಿ ಮಾತ್ರ 'ಅಸಡ್ಡೆಯಿಂದ ಕೂಡಿದ ಮೌನ' ತಾಳಿದ್ದಾರೆ. ಇದು ಮಣಿಪುರದ ಜನರ ಬಗ್ಗೆ ಮೋದಿ ಅವರಲ್ಲಿರುವ ಉದಾಸೀನತೆಯನ್ನು ಸ್ಪಷ್ಟವಾಗಿ ಹೇಳುತ್ತದೆ...'

ಮಣಿಪುರ ವಿದ್ಯಮಾನಕ್ಕೆ ಸಂಬಂಧಿಸಿ 10 ವಿರೋಧ ಪಕ್ಷಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮಾಡಿರುವ ಆರೋಪಗಳಿವು.

ಮಣಿಪುರದಲ್ಲಿನ ಹಿಂಸಾಚಾರ ಕುರಿತ ಮನವಿ ಪತ್ರವನ್ನು ವಿರೋಧ ಪಕ್ಷಗಳ ನಾಯಕರು ಮಂಗಳವಾರ ಬಿಡುಗಡೆ ಮಾಡಿದರು.

'ಮಣಿಪುರದಲ್ಲಿನ ಹಿಂಸಾಚಾರ ಕುರಿತ ಈ ಮನವಿಪತ್ರವನ್ನು ಅಮೆರಿಕ ಮತ್ತು ಈಜಿಪ್ಟ್ ಪ್ರವಾಸಕ್ಕೆ ತೆರಳುವ ಮುನ್ನವೇ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಿಸಲು ಮುಂದಾಗಿದ್ದೆವು. ಆದರೆ, ಪ್ರಧಾನಿಯ ಭೇಟಿಗೆ ಅವಕಾಶ ನೀಡದ ಕಾರಣ ಈ ಮನವಿಪತ್ರವನ್ನು ಬಿಡುಗಡೆ ಮಾಡಿದ್ದೇವೆ' ಎಂದು ಹೇಳಿದರು.

ಕಾಂಗ್ರೆಸ್, ಎಎಪಿ, ಟಿಎಂಸಿ, ಜೆಡಿಯು, ಸಿಪಿಎಂ, ಸಿಪಿಐ, ಶಿವಸೇನಾ (ಯುಬಿಟಿ), ಎನ್‌ಸಿಪಿ, ಆರ್‌ಎಸ್‌ಪಿ ಹಾಗೂ ಫಾರ್ವರ್ಡ್ ಬ್ಲಾಕ್ ನಾಯಕರು ಈ ಮನವಿಪತ್ರಕ್ಕೆ ಸಹಿ ಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಹಾಗೂ ಮಣಿಪುರ ಮಾಜಿ ಮುಖ್ಯಮಂತ್ರಿ ಇಬೋಬಿ ಸಿಂಗ್, 'ಪ್ರಧಾನಿ ಅವರ ಭೇಟಿಗಾಗಿ ನಾವು ಜೂನ್ 10ರಿಂದ ಕಾಯುತ್ತಿದ್ದೆವು. ನಮಗೆ ಅವರು 10 ನಿಮಿಷ ಸಮಯ ಕೊಡಬಹುದು ಎಂಬ ನಿರೀಕ್ಷೆ ಹೊಂದಿದ್ದೆವು' ಎಂದು ಹೇಳಿದರು.

'ನಾವು ಸಣ್ಣ ರಾಜ್ಯಕ್ಕೆ ಸೇರಿದವರಾಗಿದ್ದು, ಏನೋ ಬೇಡಲು ಬಂದಿದ್ದಾರೆ ಎಂದು ಅವರು ಭಾವಿಸಿದ್ದಿರಬಹುದು. ಆದರೆ, ನಾವು ಭಿಕ್ಷುಕರಲ್ಲ. ಏನನ್ನೋ ಬೇಡುವುದಕ್ಕಾಗಿ ನಾವು ಇಲ್ಲಿಗೆ ಬಂದಿಲ್ಲ' ಎಂದು ಸಿಂಗ್ ಅವರು ಹೇಳಿದರು.

'ಮಣಿಪುರವನ್ನು ಭಾರತದ ಒಂದು ಭಾಗ ಎಂಬುದಾಗಿ ಅವರು ತಿಳಿದುಕೊಂಡಿದ್ದರೆ, ಆ ರಾಜ್ಯದಲ್ಲಿನ ಹಿಂಸಾಚಾರವನ್ನು ರಾಷ್ಟ್ರೀಯ ಸಮಸ್ಯೆ ಎಂಬುದಾಗಿ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'ಮೇ 3ರಿಂದ ಮಣಿಪುರ ಹೊತ್ತಿ ಉರಿಯುತ್ತಿದೆ. ಹಿಂಸಾಚಾರ ತಡೆಗಟ್ಟುವಲ್ಲಿ ಡಬಲ್ ಎಂಜಿನ್ ಸರ್ಕಾರ ಅಸಮರ್ಥ ಎಂಬುದನ್ನು ಇದು ತೋರಿಸುತ್ತದೆ. ಮಾಹಿತಿ ಕೊರತೆಯೇ ಹಿಂಸಾಚಾರಕ್ಕೆ ಕಾರಣ ಎಂಬುದನ್ನು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ. ಹೀಗಾಗಿ ಈ ವಿಷಯದಲ್ಲಿ ಮೋದಿ ನೇತೃತ್ವದ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

### ಪತ್ರದಲ್ಲಿನ ಪ್ರಮುಖ ಅಂಶಗಳು

- ಕುಕಿ ಬುಡಕಟ್ಟು ಸಮುದಾಯಕ್ಕೆ ಪ್ರತ್ಯೇಕ ಆಡಳಿತ ವ್ಯವಸ್ಥೆ ಕಲ್ಪಿಸಬೇಕು ಎಂಬ 10 ಮಂದಿ ಕುಕಿ ಶಾಸಕರ ಬೇಡಿಕೆಗೆ ವಿರೋಧ
- ಮಣಿಪುರದ ಪ್ರತಿಯೊಂದು ಸಮುದಾಯದ ಅಹವಾಲು ಆಲಿಸಿ, ಪರಿಹಾರ ನೀಡಬೇಕು
- ತಕ್ಷಣವೇ ಎಲ್ಲ ಸಶಸ್ತ್ರ ಗುಂಪುಗಳು ಆಯುಧಗಳನ್ನು ತೊರೆಯುವಂತೆ ಕ್ರಮ ತೆಗೆದುಕೊಳ್ಳಬೇಕು
- ಈಗ ಘೋಷಿಸಿರುವ ₹ 101.75 ಕೋಟಿ ಮೊತ್ತದ ಪ್ಯಾಕೇಜ್ ಸಾಕಾಗುವುದಿಲ್ಲ. ಸಂತ್ರಸ್ತರ ಪುನರ್ವಸತಿ ಮತ್ತು ಜೀವನೋಪಾಯಕ್ಕಾಗಿ ಸೂಕ್ತ ಪ್ಯಾಕೇಜ್ ಘೋಷಿಸಬೇಕು

# 'ಇನ್ನು 3–4 ದಿನದಲ್ಲಿ ಮುಂಗಾರು ಚುರುಕು'

ಮುಂಬೈ/ನವದೆಹಲಿ (ರಾಯಿಟರ್ಸ್): ಮುಂಗಾರು ಮಾರುತವು ಮುಂದಿನ ಮೂರು–ನಾಲ್ಕು ದಿನಗಳಲ್ಲಿ ಚುರುಕುಗೊಳ್ಳಲಿದೆ. ದೇಶದ ದಕ್ಷಿಣ, ಕೇಂದ್ರ, ಪಶ್ಚಿಮದ ವಿವಿಧ ರಾಜ್ಯಗಳಲ್ಲಿ ಭತ್ತ, ಸೋಯಾಬೀನ್, ಹತ್ತಿ, ಕಬ್ಬು ಕೃಷಿ ವಲಯವನ್ನು ಆವರಿಸುವ ಸಂಭವವಿದೆ.

ಕೃಷಿ ಚಟುವಟಿಕೆಯ ಪ್ರಮುಖ ಮೂಲಾಧಾರವಾಗಿರುವ ಮುಂಗಾರು, ಕೃಷಿಯ ಶೇ 70ರಷ್ಟು ನೀರಿನ ಅಗತ್ಯವನ್ನು ಈಡೇರಿಸಲಿದೆ. ಜಲಾಶಯಗಳ ಭರ್ತಿಗೂ ಕಾರಣವಾಗಲಿದೆ. ಮುಖ್ಯವಾಗಿ ಬೇಸಿಗೆಯ ಪ್ರತಿಕೂಲ ಪರಿಣಾಮದಿಂದಲೂ ಬಿಡುಗಡೆ ನೀಡಲಿದೆ.

ವಾಡಿಕೆಯಂತೆ ಮುಂಗಾರು ಮಾರುತವು ಕೇರಳ ರಾಜ್ಯವನ್ನು ಜೂನ್ 1ರಂದು ಪ್ರವೇಶಿಸಿ, ಜೂನ್ ಮೊದಲಾರ್ಧದ ವೇಳೆಗೆ ದಕ್ಷಿಣದ ಅರ್ಧಭಾಗವನ್ನು ಆವರಿಸಿಕೊಳ್ಳುತ್ತಿತ್ತು. ಈ ಬಾರಿ ಬಿಪೊರ್‌ಜಾಯ್ ಚಂಡಮಾರುತದಿಂದಾಗಿ ಮುಂಗಾರು ಪ್ರವೇಶವೇ ವಿಳಂಬವಾಗಿದೆ.

'ಪರಿಸ್ಥಿತಿ ಈಗ ಅನುಕೂಲಕರವಾಗಿದೆ. ಮುಂಗಾರು ಮಾರುತ ಪ್ರಬಲವಾಗುತ್ತಿದೆ. ಕ್ರಮೇಣ ಕೇಂದ್ರ ಭಾಗದ ರಾಜ್ಯಗಳು ಪಶ್ಚಿಮದ ರಾಜ್ಯಗಳನ್ನು ಆವರಿಸಲಿದೆ' ಎಂದು ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ದೇಶದ ಕೇಂದ್ರ ಭಾಗದ ರಾಜ್ಯಗಳ ಪ್ರಮುಖ ಬೆಳೆ ಹತ್ತಿ, ಸೋಯಾಬಿನ್, ವಿವಿಧ ಬೇಳೆಕಾಳುಗಳಾಗಿವೆ. ದೇಶದಾದ್ಯಂತ ಈವರೆಗೆ ವಾಡಿಕೆಗಿಂತಲೂ ಶೇ 33ರಷ್ಟು ಕಡಿಮೆ ಮಳೆಯಾಗಿದೆ. ಕೆಲವು ರಾಜ್ಯಗಳಲ್ಲಿ ಮಳೆಯ ಪ್ರಮಾಣ ಶೇ 95ರಷ್ಟು ಕೊರತೆಯಾಗಿದೆ.

'ಲಭ್ಯ ಅಂಕಿ ಅಂಶಗಳ ಪ್ರಕಾರ, ಈ ವಾರ ಮುಂಗಾರು ಮಳೆಯು ಆಶಾದಾಯಕವಾಗಿರಲಿದೆ' ಎಂದು ಐಎಂಡಿ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರಾ ಪ್ರತಿಕ್ರಿಯಿಸಿದರು.

ಎಲ್‌ನಿನೊ ಹವಾಮಾನ ಸ್ಥಿತಿಯಲ್ಲಿಯೂ ಮುಂಗಾರು ಮಾರುತದ ಈ ನಾಲ್ಕು ತಿಂಗಳ ರುತುವಿನಲ್ಲಿ ಸಾಧಾರಣದಿಂದ ಉತ್ತಮ ಪ್ರಮಾಣದ ಮಳೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಪೆಸಿಫಿಕ್ ಸಾಗರದಲ್ಲಿ ಮೂಡಿರುವ ಪ್ರಬಲ ಎಲ್‌ನಿನೊ ಪರಿಣಾಮ ದಕ್ಷಿಣ ಏಷ್ಯಾ, ಭಾರತ ಮತ್ತು ಆಸ್ಟ್ರೇಲಿಯಾದ ಹಲವೆಡೆ ಬರದ ಛಾಯೆ ಕಾಣಿಸಬಹುದು ಎನ್ನಲಾಗಿದೆ.

# 'ಸಂತಾಲಿ ಭಾಷೆಗೆ ಸಾಂವಿಧಾನಿಕ ಮಾನ್ಯತೆ: ಮುರ್ಮು ಪಾತ್ರ ಮಹತ್ವದ್ದು'

ನವದೆಹಲಿ (ಪಿಟಿಐ): 'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಒಡಿಶಾ ಸಚಿವರಾಗಿದ್ದಾಗ ತಮ್ಮ ಮಾತೃ ಭಾಷೆ 'ಸಂತಾಲಿ'ಯನ್ನು 2003ರಲ್ಲಿ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಮನವೊಲಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು' ಎಂದು ಭುವನೇಶ್ವರ ಮೂಲದ ಪತ್ರಕರ್ತ ಸಂದೀಪ್ ಸಾಹು ಅವರು ತಾವು ಬರೆದ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ದ್ರೌಪದಿ ಮುರ್ಮು ಅವರು ಮಂಗಳವಾರದಂದು ತಮ್ಮ 65ನೇ ವಸಂತಕ್ಕೆ ಕಾಲಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ, ಸಂದೀಪ್ ಅವರು ಬರೆದ ಮುರ್ಮು ಅವರ ಜೀವನಚರಿತ್ರೆ 'ಮೇಡಂ ಪ್ರೆಸಿಡೆಂಟ್: ದಿ ಬಯೋಗ್ರಫಿ ಆಫ್ ದ್ರೌಪದಿ ಮುರ್ಮು' ಎಂಬ ಪುಸ್ತಕ ಇತ್ತೀಚೆಗೆ ಬಿಡುಗಡೆಯಾಗಿದೆ. ಪುಸ್ತಕದಲ್ಲಿ ಸಂದೀಪ್ ಈ ಘಟನೆ ಕುರಿತು ವಿವರಿಸಿದ್ದಾರೆ.

'2000ದಿಂದ 2004ರವರೆಗೆ ಒಡಿಶಾದ ಬಿಜೆಡಿ–ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಸಚಿವೆಯಾಗಿದ್ದ ಮುರ್ಮು ಅವರು ವಾಜಪೇಯಿ ಅವರೊಂದಿಗೆ ಚರ್ಚೆ ನಡೆಸಿ, ಸಂತಾಲಿ ಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸುವಲ್ಲಿ ಸಫಲರಾದರು' ಎಂದು ಪುಸ್ತಕದಲ್ಲಿ ವಿವರಿಸಲಾಗಿದೆ.

ಮುರ್ಮು ಅವರು ಎಂ.ಎ. ಖಾರವೇಲಾ ಸ್ವೇನ್ ಹಾಗೂ ತಮ್ಮ ಆಪ್ತ ಕಾರ್ಯದರ್ಶಿಯೊಡನೆ ವಾಜಪೇಯಿ ಅವರನ್ನು ಭೇಟಿಯಾಗಿ, ಅವರಿಗೆ ಪರಿಮಳ್ ಚಂದ್ರ ಮಿತ್ರಾ ಅವರು ಬರೆದ 'ಸಂತಾಲಿ: ದಿ ಬೇಸ್ ಆಫ್ ವರ್ಲ್ಡ್ ಲ್ಯಾಂಗ್ವೇಜಸ್' ಪುಸ್ತಕವನ್ನು ಉಡುಗೊರೆಯಾಗಿ ನೀಡಿದ್ದನ್ನೂ ನಮೂದಿಸಲಾಗಿದೆ.

ಆರು ತಿಂಗಳ ಬಳಿಕ 'ಸಂತಾಲಿ'ಯು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರ್ಪಡೆಯಾಯಿತು. 2011ರ ಗಣತಿಯ ಪ್ರಕಾರ ಒಡಿಶಾ, ಪಶ್ಚಿಮ ಬಂಗಾಳ, ತ್ರಿಪುರಾ, ಮಿಜೋರಾಂ, ಝಾರ್ಖಂಡ್, ಬಿಹಾರ್‌ಗಳಲ್ಲಿ 70 ಲಕ್ಷಕ್ಕಿಂತ ಹೆಚ್ಚು ಜನರು 'ಸಂತಾಲಿ' ಮಾತನಾಡುತ್ತಾರೆ.

### ಮುರ್ಮುಗೆ ಶುಭಕೋರಿದ ಗಣ್ಯರು

ಪ್ರಧಾನಿ ನರೇಂದ್ರ ಮೋದಿ ಅವರು ದ್ರೌಪದಿ ಮುರ್ಮು ಅವರಿಗೆ ಜನ್ಮದಿನದ ಶುಭಾಶಯ ಕೋರಿದ್ದಾರೆ.

'ರಾಷ್ಟ್ರಪತಿ ಅವರಿಗೆ ಜನ್ಮದಿನದ ಶುಭಾಶಯಗಳು. ನಮ್ಮ ಜನರ ಕಲ್ಯಾಣಕ್ಕಾಗಿ ಬುದ್ಧಿವಂತಿಕೆಯ, ಘನತೆಯ ದಾರಿದೀಪ ಮುರ್ಮು ಅವರಾಗಿದ್ದಾರೆ. ಅವರ ಬದ್ಧತೆ ನಮಗೆ ಯಾವಾಗಲೂ ಸ್ಫೂರ್ತಿ' ಎಂದು ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಬೌದ್ಧ ಧರ್ಮಗುರು ದಲೈಲಾಮಾ, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಹಾಗೂ ಇತರರು ಮುರ್ಮು ಅವರಿಗೆ ಶುಭಾಶಯ ಕೋರಿದ್ದಾರೆ.

# ಬಾಂಬೆ ಐಐಟಿಗೆ ₹315 ಕೋಟಿ ದೇಣಿಗೆ ನೀಡಿದ ನಿಲೇಕಣಿ



ಮುಂಬೈ (ಪಿಟಿಐ): ಇನ್ಫೊಸಿಸ್ ಸಹ ಸಂಸ್ಥಾಪಕ ಹಾಗೂ ಅಧ್ಯಕ್ಷ ನಂದನ್ ನಿಲೇಕಣಿ ಅವರು ಬಾಂಬೆ ಐಐಟಿಗೆ ₹315 ಕೋಟಿ ದೇಣಿಗೆ ನೀಡಿದ್ದಾರೆ. ಈ ಹಿಂದೆ ನೀಡಿರುವ ₹85 ಕೋಟಿ ದೇಣಿಗೆಯನ್ನೂ ಸೇರಿಸಿದರೆ ಅತಿ ಹೆಚ್ಚು ದೇಣಿಗೆ ನೀಡಿರುವ ಹಳೆಯ ವಿದ್ಯಾರ್ಥಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ನಂದನ್ ಅವರು ಯುಐಡಿಎಐನ ಸ್ಥಾಪಕ ಅಧ್ಯಕ್ಷರೂ ಹೌದು. ಒಟ್ಟು ₹400 ಕೋಟಿ ದೇಣಿಗೆ ನೀಡಿರುವ ನಂದನ್ ಅವರು, ಬಾಂಬೆ ಐಐಟಿ ಅವರ ಜೀವನದ ಮಹತ್ವದ ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ. ತಮ್ಮ 50 ವರ್ಷಗಳ ಒಡನಾಟದ ಈ ಸಂದರ್ಭದಲ್ಲಿ ಮತ್ತೆ ದೇಣಿಗೆ ನೀಡುರುವುದಾಗಿ ಹೇಳಿದ್ದಾರೆ. ಈ ಹಣವು ಸಂಸ್ಥೆಯಲ್ಲಿ ಜಾಗತಿಕ ಮಟ್ಟದ ಮೂಲಸೌಕರ್ಯಗಳನ್ನು ನೀಡುವಂತಾಗುತ್ತದೆ, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸಂಶೋಧನೆಗೆ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸುತ್ತದೆ. ಸುಸ್ಥಿರವಾದ ಸುಧಾರಣೆ ಮತ್ತು ಗಮನೀಯ ಬದಲಾವಣೆಗೆ ಇದು ಸಹಾಯವಾಗಲಿದೆ ಎಂಬ ಆಶಯವನ್ನು ಐಐಟಿ ಬಾಂಬೆಯ ನಿರ್ದೇಶಕ ಪ್ರೊ. ಸುಭಾಸಿಸ್ ಚೌಧರಿ ವ್ಯಕ್ತಪಡಿಸಿದರು.

'ಬಾಂಬೆ ಐಐಟಿ ನನ್ನ ಜೀವನ ರೂಪಿಸಿದ ಮೈಲಿಗಲ್ಲು. ಈ ಸಂಸ್ಥೆಯೇ ನನ್ನ ಪ್ರಯಾಣಕ್ಕೆ ಬುನಾದಿ ಹಾಕಿದ್ದು. ಈ ಗೌರವಾನ್ವಿತ ಸಂಸ್ಥೆಯು 50 ವರ್ಷದಿಂದ ನನ್ನ ಜೊತೆಗಿದೆ. ಅದಕ್ಕಾಗಿ ಈ ಸಂಸ್ಥೆಗೆ ನಾನು ಋಣಿಯಾಗಿದ್ದೇನೆ ಮತ್ತು ಇದರ ಭವಿಷ್ಯಕ್ಕಾಗಿ ದೇಣಿಗೆ ನೀಡಲು ಸಿದ್ಧನಾಗಿದ್ದೇನೆ. ನನಗೆ ಉತ್ತಮ ಜೀವನ ಕೊಟ್ಟ ಸ್ಥಳಕ್ಕೆ ಸಮರ್ಪಿಸುತ್ತಿರುವ ಕೊಡುಗೆ ಹಾಗೂ ನಾಳಿನ ಜಗತ್ತನ್ನು ರೂಪಿಸುವ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಬದ್ಧತೆ ಇದಾಗಿದೆ' ಎಂದು ನಿಲೇಕಣಿ ಅವರು ಹೇಳಿದರು.

'ಸಂಸ್ಥೆಯನ್ನು ಗಮನಾರ್ಹವಾಗಿ ಅಭಿವೃದ್ಧಿಪಡಿಸಲು ಹಾಗೂ ಜಾಗತಿಕ ನಾಯಕತ್ವದತ್ತ ದೃಢವಾಗಿ ಮುನ್ನಡೆಸಲು ದೇಣಿಗೆ ಸಹಾಯಕಾರಿ' ಎಂದು ಸುಭಾಸಿಸ್ ಚೌಧುರಿ ತಿಳಿಸಿದರು.

# ಪ್ರಧಾನಿ ಅಮೆರಿಕ ಪ್ರವಾಸ ಶುರು

ಒಂದನೇ ಪುಟದಿಂದ

ಶಾಂತಿಯಿದ್ದರೆ ಬಾಂಧವ್ಯ ವೃದ್ಧಿ: ಅಮೆರಿಕ ಪ್ರವಾಸಕ್ಕೆ ತೆರಳುವ ಮುನ್ನ 'ದ ವಾಲ್ ಸ್ಟ್ರೀಟ್' ನಿಯತಕಾಲಿಕಕ್ಕೆ ಅವರು ಸಂದರ್ಶನ ನೀಡಿದ್ದು, 'ಭಾರತ ಮತ್ತು ಅಮೆರಿಕ ನಡುವಿನ ಬಾಂಧವ್ಯ ಹಿಂದಿಗಿಂತಲೂ ಈಗ ಹೆಚ್ಚು ಸದೃಢವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತ ಮತ್ತು ಚೀನಾ ಬಾಂಧವ್ಯ ಕುರಿತಂತೆ ಅವರು, 'ಉಭಯ ದೇಶಗಳ ನಡುವೆ ಸಹಜ ದ್ವಿಪಕ್ಷೀಯ ಮೈತ್ರಿ ಮೂಡಲು ಗಡಿ ಭಾಗದಲ್ಲಿ ಶಾಂತಿ ಮತ್ತು ನೆಮ್ಮದಿಯ ವಾತಾವರಣ ಮೂಡುವುದು ಅಗತ್ಯ' ಎಂದು ನಿಲುವು ಸ್ಪಷ್ಟಪಡಿಸಿದ್ದಾರೆ.

ಭಾರತ–ಚೀನಾ ಗಡಿಯ ಗಾಲ್ವಾನ್ ಕಣಿವೆಯಲ್ಲಿ ಚೀನಾ ಮತ್ತು ಭಾರತ ಯೋಧರ ನಡುವೆ ಸಂಘರ್ಷ, ಹಿಂಸಾಕೃತ್ಯ ನಡೆದ ಘಟನೆಗೆ ಮೂರು ವರ್ಷಗಳಾದ (ಜೂನ್ 15, 2020) ಸಂದರ್ಭದಲ್ಲಿ ಪ್ರಧಾನಿಯ ಈ ಹೇಳಿಕೆ ಹೊರಬಿದ್ದಿದೆ.

ಎತ್ತರದ ಸ್ಥಾನಕ್ಕೆ ಭಾರತ ಅರ್ಹ: 'ಜಾಗತಿಕ ವೇದಿಕೆಯಲ್ಲಿ ಇನ್ನೂ ಎತ್ತರದ, ಆಯಕಟ್ಟಿನ ಮತ್ತು ವಿಸ್ತೃತ ನೆಲೆಗಟ್ಟಿನ ಪಾತ್ರ ನಿಭಾಯಿಸಲು ಭಾರತ ಅರ್ಹವಾದ ರಾಷ್ಟ್ರವಾಗಿದೆ' ಎಂದು ಪ್ರಧಾನಿ ಪ್ರತಿಪಾದಿಸಿದ್ದಾರೆ.

'ಭಾರತವು ಯಾವುದೇ ದೇಶದ ಗಡಿಯನ್ನು 'ಮೋಸದಿಂದ ಅತಿಕ್ರಮಿಸುತ್ತಿಲ್ಲ'. ಆದರೆ, ಜಾಗತಿಕವಾಗಿ ತನ್ನ ಹಕ್ಕಿನ ಸ್ಥಾನವನ್ನು ಪಡೆಯಲು ಯತ್ನಿಸುತ್ತಿದೆ' ಎಂದು ಅವರು ಹೇಳಿದ್ದಾರೆ.

**'ಉಕ್ರೇನ್ ಬಿಕ್ಕಟ್ಟು-ಭಾರತ ತಟಸ್ಥವಲ್ಲ'**

**ನವದೆಹಲಿ (ಪಿಟಿಐ):** 'ಉಕ್ರೇನ್ ಬಿಕ್ಕಟ್ಟು ಕುರಿತು ಭಾರತ ತಟಸ್ಥ ಧೋರಣೆ ತಳೆದಿದೆ ಎನ್ನುತ್ತಾರೆ ಕೆಲವರು. ಆದರೆ, ನಾವು ತಟಸ್ಥವಾಗಿಲ್ಲ. ಶಾಂತಿ ಸ್ಥಾಪನೆಯ ಪರವಾಗಿದ್ದೇವೆ' ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು.

'ಎಲ್ಲ ರಾಷ್ಟ್ರಗಳು ಅಂತರರಾಷ್ಟ್ರೀಯ ಕಾನೂನು, ದೇಶಗಳ ಸೌರ್ವಭೌಮತೆಯನ್ನು ಗೌರವಿಸಬೇಕಿದೆ. ಭಾರತವು ಏನು ಮಾಡಬಹುದೊ ಅದೆಲ್ಲವನ್ನೂ ಮಾಡುತ್ತದೆ. ಶಾಂತಿ, ಸ್ಥಿರತೆ ಸ್ಥಾಪನೆ ಹಾಗೂ ಬಿಕ್ಕಟ್ಟು ಶಮನಗೊಳಿಸಲು ಭಾರತ ಪ್ರಾಮಾಣಿಕ ಯತ್ನವನ್ನು ಮಾಡಲಿದೆ' ಎಂದರು.

'ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳಿಂದಲೇ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕು' ಎಂದು ಅವರು ಅಭಿಪ್ರಾಯಪಟ್ಟರು.

ಉಕ್ರೇನ್ ವಿರುದ್ಧದ ಸಂಘರ್ಷ ನಡೆಸುತ್ತಿರುವ ರಷ್ಯಾ ವಿರುದ್ಧವಾಗಿ ಅಮೆರಿಕ ಮತ್ತು ಇತರೆ ಪಾಶ್ಚಿಮಾತ್ಯ ದೇಶಗಳ ಜೊತೆಗೂಡಲು ಭಾರತ ನಿರಾಕರಿಸಿತ್ತು. ಭಾರತ ರಷ್ಯಾದ ಜೊತೆ ದಶಕಗಳಿಂದ ಬಾಂಧವ್ಯ ಹೊಂದಿದ್ದು, ಸೇನಾ ಪರಿಕರ, ತಂತ್ರಜ್ಞಾನಗಳಿಗೆ ರಷ್ಯಾ ಅನ್ನು ಅವಲಂಬಿಸಿದೆ.



ಅಂತರರಾಷ್ಟ್ರೀಯ ನಿರಾಶ್ರಿತರ ದಿನಾಚರಣೆ ಅಂಗವಾಗಿ ಜಮ್ಮುವಿನಲ್ಲಿ ಮಂಗಳವಾರ ಎಸ್‌ಒಎಸ್ ಇಂಟರ್‌ನ್ಯಾಷನಲ್ ಸಂಘಟನೆಯ ಸದಸ್ಯರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

# ಪಾಕ್ ಧ್ವಜ ಸುಟ್ಟ ನಿರಾಶ್ರಿತರು

ಜಮ್ಮು (ಪಿಟಿಐ): ಪುನರ್ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಪಾಕ್ ಆಕ್ರಮಿತ ಜಮ್ಮು ಮತ್ತು ಕಾಶ್ಮೀರದ ನಿವಾಸಿಗಳು ಅಂತರರಾಷ್ಟ್ರೀಯ ನಿರಾಶ್ರಿತರ ದಿನವಾದ ಮಂಗಳವಾರದಂದು ಪಾಕಿಸ್ತಾನದ ವಿರುದ್ಧ ಇಲ್ಲಿ ಪ್ರತಿಭಟನೆ ನಡೆಸಿದರು.

ಎಸ್‌ಒಎಸ್ ಇಂಟರ್‌ನ್ಯಾಷನಲ್ ಸಂಘಟನೆಯ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಪಾಕಿಸ್ತಾನದ ರಾಷ್ಟ್ರಧ್ವಜ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಹಲವು ವರ್ಷಗಳಿಂದ ಈ ಪ್ರದೇಶದಲ್ಲಿ 18 ಲಕ್ಷ ನಿರಾಶ್ರಿತರು ವಾಸಿಸುತ್ತಿದ್ದಾರೆ. ಅವರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಪಾಕಿಸ್ತಾನ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ದೂರಿದರು.

ಸಂಘಟನೆಯ ಮುಖ್ಯಸ್ಥ ರಾಜೀವ್ ಚುನ್ನಿ ಮಾತನಾಡಿ, 'ಪಾಕಿಸ್ತಾನ ಆಕ್ರಮಿತ ಪ್ರದೇಶದ ನಿರಾಶ್ರಿತರು ಇಂದಿಗೂ ಪುನರ್ವಸತಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. 2014ರ ಅಕ್ಟೋಬರ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಸಚಿವ ಸಂಪುಟ ಸಭೆಯಲ್ಲಿ ಪ್ಯಾಕೇಜ್ ಘೋಷಿಸಿತ್ತು. ತ್ವರಿತವಾಗಿ ಇದನ್ನು ಅನುಷ್ಠಾನಗೊಳಿಸಬೇಕು' ಎಂದು ಆಗ್ರಹಿಸಿದರು.

ಕಣಿವೆ ಪ್ರದೇಶದಲ್ಲಿ ನೆಲೆಸಿರುವ ಜನರಿಗೆ ವೃತ್ತಿಪರ ಕಾಲೇಜುಗಳಲ್ಲಿ ಪ್ರತ್ಯೇಕ ಸೀಟುಗಳನ್ನು ಮೀಸಲಿಡಬೇಕು. ಸರ್ಕಾರಿ ಹುದ್ದೆಗಳಲ್ಲೂ ಕೋಟಾ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

## ಸಂಕ್ಷಿಪ್ತ ಸುದ್ದಿ

### ಭದ್ರತಾ ಮಂಡಳಿಗೆ ಭಾರತ ಸೇರಿಸಿ: ಹೆಲೆನ್ ಕ್ಲಾರ್ಕ್



ಹೆಲೆನ್ ಕ್ಲಾರ್ಕ್

ನವದೆಹಲಿ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ನೀಡಬೇಕೆನ್ನುವ ಭಾರತದ ಬೇಡಿಕೆಗೆ ಬೆಂಬಲ ಸೂಚಿಸಿರುವ ನ್ಯೂಜಿಲೆಂಡ್‌ನ ಮಾಜಿ ಪ್ರಧಾನಿ ಹೆಲೆನ್ ಕ್ಲಾರ್ಕ್, ಈ ಮಂಡಳಿಯನ್ನು ವಿಸ್ತರಿಸುವ ಅಗತ್ಯ ಇದೆ ಎಂದು ಮಂಗಳವಾರ ಪ್ರತಿಪಾದಿಸಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಭಾರತವು ಜಗತ್ತಿನಲ್ಲೇ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದೆ ಮತ್ತು ಪ್ರಮುಖ ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಶಕ್ತಿಯಾಗಿದೆ ಎಂದು ಅವರು ಹೇಳಿದ್ದಾರೆ.

### ಎನ್‌ಸಿಪಿಯಿಂದ 'ವಿಶ್ವಾಸದ್ರೋಹ ದಿನ' ಆಚರಣೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಅವರ ಬಣದ ಕೆಲ ಶಾಸಕರ ಬಂಡಾಯ ನಡೆದು ಒಂದು ವರ್ಷ ಕಳೆದಿದೆ. ಹಾಗಾಗಿ ಈ ದಿನವನ್ನು ಎನ್‌ಸಿಪಿ ಮುಖಂಡರು ಹಾಗೂ ಕಾರ್ಯಕರ್ತರು ಮಂಗಳವಾರ ಮುಂಬೈ ಸೇರಿದಂತೆ ರಾಜ್ಯದ ಇತರ ಭಾಗಗಳಲ್ಲಿ 'ವಿಶ್ವಾಸದ್ರೋಹ ದಿನ'ವಾಗಿ ಪರಿಗಣಿಸಿ (ಗದ್ದರ್ ದಿನ್) ಪ್ರತಿಭಟನೆ ನಡೆಸಿದರು.

ಎನ್‌ಸಿಪಿಯ ಕಾರ್ಯಾಧ್ಯಕ್ಷೆ ಹಾಗೂ ಸಂಸದೆ ಸುಪ್ರಿಯಾ ಸುಳೆ ನೇತೃತ್ವದಲ್ಲಿ ಮುಂಬೈನಲ್ಲಿ ಪ್ರತಿಭಟನೆ ನಡೆಸಿದ ಪಕ್ಷದ ಕಾರ್ಯಕರ್ತರು, 'ಶಿವಸೇನಾದ ಬಂಡಾಯ ಶಾಸಕರು ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಏರಲು ಹಣ ಪಡೆದಿದ್ದಾರೆ' ಎಂದು ಆರೋಪಿಸಿ ಸಾಂಕೇತಿಕವಾಗಿ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಿದರು.

### 'ನಿತೀಶ್ ಸಭೆಯಲ್ಲಿ ಪಾಲ್ಗೊಳ್ಳುವೆ'



ಎಂ.ಕೆ. ಸ್ಟಾಲಿನ್

ತಿರುವರೂರ್ (ತಮಿಳುನಾಡು) (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇದೇ 23ರಂದು ಪಟ್ನಾದಲ್ಲಿ ಹಮ್ಮಿಕೊಂಡಿರುವ ಬಿಜೆಪಿಯೇತರ ಪಕ್ಷಗಳ ಸಭೆಯಲ್ಲಿ ಪಾಲ್ಗೊಳ್ಳುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮಂಗಳವಾರ ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ದಿ. ಎಂ. ಕರುಣಾನಿಧಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಇಲ್ಲಿ 'ಕಲೈನಾರ್ ಕೂಟಂ' ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಕೈ ಬಲಪಡಿಸುವುದಾಗಿಯೂ ತಿಳಿಸಿದ್ದಾರೆ.

ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

**ಸ್ಟಾಲಿನ್ ದ್ವಿಮುಖ ನೀತಿ:** ಚೆನ್ನೈ (ಪಿಟಿಐ): 'ಸಂಪುಟ ಸಚಿವ ವಿ.ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿರುವ ವಿಷಯದಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ 'ದ್ವಿಮುಖ ನಿಲುವು' ತಳೆದಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟೀಕಿಸಿದ್ದಾರೆ.

ಇ.ಡಿಯು ಉದ್ಯೋಗಕ್ಕಾಗಿ ಹಣ ಪಡೆದ ಹಗರಣದಲ್ಲಿ ಸೆಂಥಿಲ್ ಅವರನ್ನು ಬಂಧಿಸಿದೆ. ಆದರೆ, ಮುಖ್ಯಮಂತ್ರಿ ಕೇಂದ್ರ ತನಿಖಾ ಸಂಸ್ಥೆಯ ಕಾರ್ಯವೈಖರಿಯನ್ನೇ ಪ್ರಶ್ನಿಸುತ್ತಿದ್ದಾರೆ ಎಂದರು.

### 'ಮದರಸಾಗಳಲ್ಲಿ ಯೋಗ ದಿನಾಚರಣೆ'

ಲಖನೌ(ಪಿಟಿಐ): 'ರಾಜ್ಯದಲ್ಲಿರುವ ಎಲ್ಲ ಮಾನ್ಯತೆ ಪಡೆದ ಮದರಸಾಗಳಲ್ಲಿ ಬುಧವಾರ ಯೋಗ ದಿನ ಆಚರಣೆಗಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ' ಎಂದು ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಚೇರಮನ್ ಇಫ್ತಿಕಾರ್ ಅಹ್ಮದ್ ಜಾವೇದ್ ತಿಳಿಸಿದ್ದಾರೆ.

ರಾಜ್ಯದಲ್ಲಿರುವ ಅನುದಾನಿತ ಮತ್ತು ಅನುದಾನರಹಿತ ಮದರಸಾಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಿಸುವಂತೆ ಸರ್ಕಾರ ಈಚೆಗೆ ಸೂಚಿಸಿತ್ತು. ಉತ್ತರ ಪ್ರದೇಶದಲ್ಲಿ 16,531 ಮದರಸಾಗಳಿದ್ದು, 558 ಮದರಸಾಗಳು ಸರ್ಕಾರದ ಅನುದಾನ ಪಡೆಯುತ್ತಿವೆ.



## ರಥೋತ್ಸವ ಸಂಭ್ರಮ

ಒಡಿಶಾದ ಪುರಿಯಲ್ಲಿ ಮಂಗಳವಾರ ನಡೆದ ಜಗನ್ನಾಥ ರಥೋತ್ಸವದಲ್ಲಿ ನೆರೆದಿದ್ದ ಜನಸ್ತೋಮ —ಪಿಟಿಐ ಚಿತ್ರ

### ₹ 15 ಕೋಟಿ ಮೌಲ್ಯದ ಹೆರಾಯಿನ್ ವಶ

ಶಿಲ್ಲಾಂಗ್ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹ 15 ಕೋಟಿ ಮೌಲ್ಯದ ಮಾದಕ ವಸ್ತುಗಳ ಕಳ್ಳಸಾಗಣೆಯಲ್ಲಿ ತೊಡಗಿದ್ದ 9 ಮಂದಿಯನ್ನು ಮೇಘಾಲಯದ ಪೂರ್ವ ಜೈನ್ತಿಯಾ ಹಿಲ್ಸ್ ಜಿಲ್ಲೆಯಲ್ಲಿ ಮಂಗಳವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಕಂಠೀರವ ಕ್ರೀಡಾಂಗಣದಲ್ಲಿ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಇಂದು ಚಾಲನೆ

# ಭಾರತಕ್ಕೆ ಪಾಕಿಸ್ತಾನ ಸವಾಲು

• ಮಹಮ್ಮದ್ ನೂಮಾನ್


ಭಾರತ ತಂಡದ ನಾಯಕ ಸುನಿಲ್ ಚೆಟ್ರಿ ಮಂಗಳವಾರ ಅಭ್ಯಾಸ ನಡೆಸಿದರು —ಪಿಟಿಐ ಚಿತ್ರ

**ಬೆಂಗಳೂರು:** ಕ್ರೀಡೆ ಯಾವುದೇ ಇರಲಿ, ಭಾರತ– ಪಾಕಿಸ್ತಾನ ನಡುವಣ ಹಣಾಹಣಿ ಉಂಟುಮಾಡುವ ರೋಚಕತೆಯೇ ಅಪಾರ. ಉಭಯ ದೇಶಗಳ ಕ್ರೀಡಾಪ್ರೇಮಿಗಳಲ್ಲಿ ಸಂಚಲನಕ್ಕೆ ಕಾರಣವಾಗುತ್ತದೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆಯಲಿರುವ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭಾರತ–ಪಾಕ್ ಎದುರಾಗಲಿದ್ದು, ಅಭಿಮಾನಿಗಳಲ್ಲಿ ಕುತೂಹಲ ಗರಿಗೆದರಿದೆ.

ಭುವನೇಶ್ವರದಲ್ಲಿ ಭಾನುವಾರ ಕೊನೆಗೊಂಡಿದ್ದ ಇಂಟರ್‌ಕಾಂಟಿನೆಂಟಲ್ ಕಪ್ ಟೂರ್ನಿಯನ್ನು ಗೆದ್ದ ಆತ್ಮವಿಶ್ವಾಸದಲ್ಲಿರುವ ಸುನಿಲ್ ಚೆಟ್ರಿ ಬಳಗ, ಶುಭಾರಂಭದ ನಿರೀಕ್ಷೆಯಲ್ಲಿದೆ. ಪಾಕಿಸ್ತಾನ ತಂಡ ಬುಧವಾರ ಬೆಳಿಗ್ಗೆ ಬೆಂಗಳೂರು ತಲುಪಲಿದೆ ಎಂದು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಮೂಲಗಳು ತಿಳಿಸಿವೆ. ವೀಸಾ ಸಮಸ್ಯೆಯ ಕಾರಣ ತಂಡದ ಪ್ರಯಾಣ ವಿಳಂಬವಾಗಿದೆ.

ಸ್ಯಾಫ್ ಟೂರ್ನಿಯಲ್ಲಿ ಭಾರತ ತಂಡವು ಹಾಲಿ ಚಾಂಪಿಯನ್ ಆಗಿದೆ. 2021 ರಲ್ಲಿ ಮಾಲ್ಡೀವ್ಸ್‌ನಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ 3–0 ರಲ್ಲಿ ನೇಪಾಳ ತಂಡವನ್ನು ಮಣಿಸಿತ್ತು. ಭಾರತ ತಂಡ ಐದು ವರ್ಷಗಳ ಬಿಡುವಿನ ಬಳಿಕ ಉದ್ಯಾನನಗರಿಯಲ್ಲಿ ಅಂತರರಾಷ್ಟ್ರೀಯ ಪಂದ್ಯ ಆಡುತ್ತಿದ್ದು, ಕ್ರೀಡಾಂಗಣ ಕಿಕ್ಕಿರಿದು ತುಂಬುವ ನಿರೀಕ್ಷೆಯಿದೆ.

**ರ‍್ಯಾಂಕಿಂಗ್ ಮುಖ್ಯವೆನಿಸದು:** ‘ಎ’ ಗುಂಪಿನಲ್ಲಿರುವ ಇತರ ತಂಡಗಳು ಫಿಫಾ ರ‍್ಯಾಂಕಿಂಗ್‌ನಲ್ಲಿ ಭಾರತಕ್ಕಿಂತ ಕೆಳಗಿನ ಸ್ಥಾನದಲ್ಲಿವೆ. ಆದರೆ ‘ರ‍್ಯಾಂಕಿಂಗ್ ಇಲ್ಲಿ ಮುಖ್ಯವಾಗುವುದಿಲ್ಲ. ಎಲ್ಲ ಎದುರಾಳಿಗಳನ್ನು ಗೌರವದಿಂದ ಕಾಣುತ್ತೇವೆ’ ಎಂದು ಭಾರತ ತಂಡ ಕೋಚ್ ಇಗೊರ್ ಸ್ಟಿಮ್ಯಾಚ್ ಹೇಳಿದ್ದಾರೆ.

‘ರ‍್ಯಾಂಕಿಂಗ್‌ನಲ್ಲಿ ನಮಗಿಂತ ಕೆಳಗಿನ ಸ್ಥಾನದಲ್ಲಿದ್ದಾರೆ ಎಂಬ ಕಾರಣ ಪಾಕಿಸ್ತಾನ ತಂಡವನ್ನು ಲಘುವಾಗಿ ಪರಿಗಣಿಸುವುದಿಲ್ಲ. ಅಚ್ಚರಿಯ ಫಲಿತಾಂಶ ನೀಡಬಲ್ಲ ಸಾಮರ್ಥ್ಯ ಅವರಿಗಿದೆ. ವಿದೇಶದ ಲೀಗ್‌ಗಳಲ್ಲಿ ಆಡುವ 5–6 ಆಟಗಾರರು ಪಾಕ್ ತಂಡದಲ್ಲಿದ್ದಾರೆ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

‘ಮಾರಿಷಸ್‌ನಲ್ಲಿ ನಡೆದ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ಪಾಕ್ ತಂಡ ಆಡಿದ ಪಂದ್ಯಗಳನ್ನು ನೋಡಿದ್ದೇನೆ. ಅವರು ಯಾವುದೇ ಪಂದ್ಯ ಗೆಲ್ಲದಿದ್ದರೂ, ಕೆನ್ಯಾ ಒಳಗೊಂಡಂತೆ ಎಲ್ಲ ಎದುರಾಳಿಗಳಿಗೆ ತಕ್ಕ ಪೈಪೋಟಿ ಒಡ್ಡಿದ್ದರು’ ಎಂದರು.

‘ಇಂಟರ್‌ಕಾಂಟಿನೆಂಟಲ್ ಕಪ್ ಗೆದ್ದದ್ದರಿಂದ ನಮ್ಮ ಆಟಗಾರರ ಹುಮ್ಮಸ್ಸು ಇಮ್ಮಡಿಸಿರುವುದು ನಿಜ. ಆದರೆ ಇದು ಹೊಸ ಟೂರ್ನಿ, ಭಿನ್ನ ಸವಾಲು ಎದುರಾಗಲಿದೆ’ ಎಂದು ನುಡಿದರು.

ಪೈಪೋಟಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಬಾರಿ ಸ್ಯಾಫ್ ಹೊರಗಿನ ದೇಶಗಳಾದ ಲೆಬನಾನ್ ಮತ್ತು ಕುವೈತ್ ತಂಡಗಳಿಗೆ ಅವಕಾಶ ನೀಡಲಾಗಿದೆ.

ಟೂರ್ನಿಯ ಉದ್ಘಾಟನಾ ಪಂದ್ಯ ಬುಧವಾರ ಮಧ್ಯಾಹ್ನ 3.30ಕ್ಕೆ ನಡೆಯಲಿದ್ದು, ಕುವೈತ್ ಮತ್ತು ನೇಪಾಳ ತಂಡಗಳು ಎದುರಾಗಲಿವೆ.

### ಭಾರತದ ಪಂದ್ಯಗಳು

| ದಿನಾಂಕ | ಪಂದ್ಯ | ಸಮಯ |
|---|---|---|
| ಜೂನ್ 21 | ಭಾರತ Vs ಪಾಕಿಸ್ತಾನ | ರಾತ್ರಿ 7.30 |
| ಜೂನ್ 24 | ಭಾರತ Vs ನೇಪಾಳ | ರಾತ್ರಿ 7.30 |
| ಜೂನ್ 27 | ಭಾರತ Vs ಕುವೈತ್ | ರಾತ್ರಿ 7.30 |

ಸ್ಥಳ: ಕಂಠೀರವ ಕ್ರೀಡಾಂಗಣ

ಲೈವ್: ಫ್ಯಾನ್‌ಕೋಡ್ ಆ್ಯಪ್

### ಪಾಲ್ಗೊಳ್ಳುವ ತಂಡಗಳು (ಫಿಫಾ ರ‍್ಯಾಂಕಿಂಗ್)

‘ಎ’ ಗುಂಪು: ಭಾರತ (101), ಕುವೈತ್ (143), ನೇಪಾಳ (174), ಪಾಕಿಸ್ತಾನ (195)

‘ಬಿ’ ಗುಂಪು: ಬಾಂಗ್ಲಾದೇಶ (192), ಭೂತಾನ್ (185), ಲೆಬನಾನ್ (99), ಮಾಲ್ಡೀವ್ಸ್ (154)

### ಎಂಟು ಬಾರಿ ಚಾಂಪಿಯನ್

ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಎಂಟು ಬಾರಿ ಟ್ರೋಫಿ ಜಯಿಸಿದ್ದು, ಯಶಸ್ವಿ ತಂಡ ಎನಿಸಿಕೊಂಡಿದೆ. ಇದುವರೆಗೆ ಒಟ್ಟು 13 ಆವೃತ್ತಿಗಳು ನಡೆದಿವೆ. ಮಾಲ್ಡೀವ್ಸ್ ಎರಡು ಬಾರಿ ಚಾಂಪಿಯನ್ ಆಗಿದೆ. ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ಶ್ರೀಲಂಕಾ ತಂಡಗಳು ತಲಾ ಒಮ್ಮೆ ಪ್ರಶಸ್ತಿ ಗೆದ್ದುಕೊಂಡಿವೆ. ಪಾಕಿಸ್ತಾನ ಒಮ್ಮೆಯೂ ಫೈನಲ್ ಪ್ರವೇಶಿಸಿಲ್ಲ. 1997ರ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದ್ದು ತಂಡದ ಉತ್ತಮ ಪ್ರದರ್ಶನ ಎನಿಸಿದೆ.

# ಆಸ್ಟ್ರೇಲಿಯಾಗೆ ರೋಚಕ ಜಯ

## ಆ್ಯಷಸ್: ಮಿಂಚಿದ ಕಮಿನ್ಸ್, ಉಸ್ಮಾನ್; ಇಂಗ್ಲೆಂಡ್‌ಗೆ ನಿರಾಸೆ


ಆಸ್ಟ್ರೇಲಿಯಾ ತಂಡ ನಾಯಕ ಪ್ಯಾಟ್ ಕಮಿನ್ಸ್ ಗೆಲುವಿನ ಸಂಭ್ರಮ —ಎಎಫ್‌ಪಿ ಚಿತ್ರ

**ಬರ್ಮಿಂಗ್‌ಹ್ಯಾಮ್ (ಪಿಟಿಐ):** ನಾಯಕ ಪ್ಯಾಟ್ ಕಮಿನ್ಸ್ ಮತ್ತು ನೇಥನ್ ಲಯನ್ ಅವರ ಛಲದ ಆಟದ ಬಲದಿಂದ ಆಸ್ಟ್ರೇಲಿಯಾ ತಂಡ, ಆ್ಯಷಸ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಎರಡು ವಿಕೆಟ್‌ಗಳ ರೋಚಕ ಜಯ ಸಾಧಿಸಿತು.

ಎಜ್‌ಬಾಸ್ಟನ್‌ನಲ್ಲಿ ನಡೆದ ಪಂದ್ಯದಲ್ಲಿ 281 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ, ಅಂತಿಮ ದಿನವಾದ ಮಂಗಳವಾರ 8 ವಿಕೆಟ್ ಕಳೆದುಕೊಂಡು 282 ರನ್ ಗಳಿಸಿ ಗೆದ್ದು ಬೀಗಿತು.

ಇಂಗ್ಲೆಂಡ್‌ನ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಕಮಿನ್ಸ್ (ಔಟಾಗದೆ 44) ಮತ್ತು ಲಯನ್ (ಔಟಾಗದೆ 16) ಅವರು ಮುರಿಯದ 9ನೇ ವಿಕೆಟ್‌ಗೆ 55 ರನ್ ಸೇರಿಸಿ ಸ್ಮರಣೀಯ ಗೆಲುವಿಗೆ ಕಾರಣರಾದರು.

ಪಂದ್ಯದ ಹೆಚ್ಚಿನ ಅವಧಿಗಳಲ್ಲೂ ಮೇಲುಗೈ ಸಾಧಿಸಿದ್ದ ಬೆನ್ ಸ್ಟೋಕ್ಸ್ ಬಳಗ ಮುಖಭಂಗ ಅನುಭವಿಸಿತು. ಸ್ಟುವರ್ಟ್ ಬ್ರಾಡ್ (64ಕ್ಕೆ3) ಮತ್ತು ಒಲಿ ರಾಬಿನ್ಸನ್ (43ಕ್ಕೆ2) ಅವರ ಬೌಲಿಂಗ್ ಶ್ರಮ ವ್ಯರ್ಥವಾಯಿತು. ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಉಸ್ಮಾನ್ ಖ್ವಾಜಾ (65 ರನ್, 197 ಎ.) ಅವರು ಎರಡನೇ ಇನಿಂಗ್ಸ್‌ನಲ್ಲೂ ಮಿಂಚಿ, ಗೆಲುವಿಗೆ ಕೊಡುಗೆ ನೀಡಿದರು.

ಅಂತಿಮ ದಿನದಾಟದ ಮೊದಲ ಅವಧಿ ಮಳೆಗೆ ಆಹುತಿಯಾಯಿತು. ಆಸ್ಟ್ರೇಲಿಯಾ 3 ವಿಕೆಟ್‌ಗೆ 107 ರನ್‌ಗಳಿಂದ ಆಟ ಮುಂದುವರಿಸಿತ್ತು. ಸೋಮವಾರ ಕ್ರೀಸ್‌ನಲ್ಲಿ ಉಳಿದಿದ್ದ ಸ್ಕಾಟ್ ಬೊಲಾಂಡ್ (20; 40ಎ) ಅವರು ಉಸ್ಮಾನ್ ಜೊತೆಗೆ ಒಂದಿಷ್ಟು ಹೊತ್ತು ಇನಿಂಗ್ಸ್‌ಗೆ ಬಲ ತುಂಬಿಸಲು ಪ್ರಯತ್ನಿಸಿದರು.

ಬೊಲಾಂಡ್ ವಿಕೆಟ್ ಗಳಿಸಿದ ಬ್ರಾಡ್ ಈ ಜೊತೆಯಾಟವನ್ನು ಮುರಿದರು. ಸ್ಪಿನ್ನರ್ ಮೋಯಿನ್ ಅಲಿ ಮತ್ತು ಒಲಿ ರಾಬಿನ್ಸನ್ ಅವರು ಕ್ರಮವಾಗಿ ಟ್ರಾವಿಸ್ ಹೆಡ್ ಮತ್ತು ಕ್ಯಾಮರಾನ್ ಗ್ರೀನ್ ವಿಕೆಟ್‌ಗಳನ್ನು ಕಬಳಿಸಿದರು. ಇದರಿಂದಾಗಿ ಆಸ್ಟ್ರೇಲಿಯಾದ ರನ್ ಗಳಿಕೆಯ ವೇಗ ಕಡಿಮೆಯಾಯಿತು.

ಉಸ್ಮಾನ್ ಏಳನೆಯವರಾಗಿ ಔಟಾದಾಗ ಆಸ್ಟ್ರೇಲಿಯಾದ ಸ್ಕೋರ್ 209. ಗೆಲುವಿಗೆ ಇನ್ನೂ 72 ರನ್‌ಗಳು ಬೇಕಿದ್ದವು. ಈ ಹಂತದಲ್ಲಿ ಇಂಗ್ಲೆಂಡ್ ಜಯದ ಕನಸು ಕಂಡಿತ್ತು. ಆದರೆ ಕಮಿನ್ಸ್ ಅವರು ಆತಿಥೇಯರ ಕನಸನ್ನು ನುಚ್ಚುನೂರು ಮಾಡಿದರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಇಂಗ್ಲೆಂಡ್: 78 ಓವರ್‌ಗಳಲ್ಲಿ 8ಕ್ಕೆ393, ಆಸ್ಟ್ರೇಲಿಯಾ 116.1 ಓವರ್‌ಗಳಲ್ಲಿ 386. ಎರಡನೇ ಇನಿಂಗ್ಸ್: ಇಂಗ್ಲೆಂಡ್: 66.2 ಓವರ್‌ಗಳಲ್ಲಿ 273. ಆಸ್ಟ್ರೇಲಿಯಾ:92.3 ಓವರ್‌ಗಳಲ್ಲಿ 8ಕ್ಕೆ 282 (ಉಸ್ಮಾನ್ ಖ್ವಾಜಾ 65, ಸ್ಕಾಟ್ ಬೊಲಾಂಡ್ 20, ಟ್ರಾವಿಸ್ ಹೆಡ್ 16, ಕ್ಯಾಮರಾನ್ ಗ್ರೀನ್ 28, ಅಲೆಕ್ಸ್ ಕ್ಯಾರಿ 20, ಪ್ಯಾಟ್ ಕಮಿನ್ಸ್ ಔಟಾಗದೆ 44, ನೇಥನ್ ಲಯನ್ ಔಟಾಗದೆ 16, ಸ್ಟುವರ್ಟ್ ಬ್ರಾಡ್ 64ಕ್ಕೆ3) **ಫಲಿತಾಂಶ:** ಆಸ್ಟ್ರೇಲಿಯಾಕ್ಕೆ 2 ವಿಕೆಟ್ ಗೆಲುವು

### ಐದು ದಿನವೂ ಉಸ್ಮಾನ್ ಬ್ಯಾಟಿಂಗ್!

ಆ್ಯಷಸ್ ಸರಣಿಯ ಮೊದಲ ಟೆಸ್ಟ್‌ನಲ್ಲಿ ಮಿಂಚಿದ ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಉಸ್ಮಾನ್ ಖ್ವಾಜಾ ವಿಶಿಷ್ಟ ಸಾಧನೆ ಮಾಡಿದರು.

ಈ ಪಂದ್ಯದ ಐದು ದಿನಗಳಲ್ಲಿಯೂ ಉಸ್ಮಾನ್ ಕ್ರೀಸ್‌ನಲ್ಲಿ ಬ್ಯಾಟಿಂಗ್ ಮಾಡಿದ್ದೇ ಆ ವಿಶೇಷ. ಇಂಗ್ಲೆಂಡ್ ತಂಡವು ಮೊದಲ ದಿನ ಸಂಜೆ ಡಿಕ್ಲೇರ್ ಮಾಡಿಕೊಂಡಿತು. ಆಗ ಕ್ರೀಸ್‌ಗೆ ಬಂದ ಉಸ್ಮಾನ್ ನಾಲ್ಕು ರನ್ ಗಳಿಸಿ ಔಟಾಗದೇ ಉಳಿದರು. ಎರಡನೇ ದಿನವಿಡೀ ಆಡಿದ ಅವರು ಶತಕ (126 ರನ್) ಬಾರಿಸಿ ಅಜೇಯರಾಗುಳಿದರು. ಮೂರನೇ ದಿನ ಬೆಳಿಗ್ಗೆ ತಮ್ಮ ಮೊತ್ತಕ್ಕೆ 15 ರನ್ ಸೇರಿಸಿ ಔಟಾದರು. ನಾಲ್ಕನೇ ದಿನ ಇಂಗ್ಲೆಂಡ್ ತಂಡದ ಎರಡನೇ ಇನಿಂಗ್ಸ್ ಮುಗಿಯಿತು. ಇದರಿಂದಾಗಿ ಆಸ್ಟ್ರೇಲಿಯಾ ಬಳಗವು 281 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿತು. ಈ ಇನಿಂಗ್ಸ್‌ನಲ್ಲಿಯೂ ಉಸ್ಮಾನ್ ಛಲದ ಆಟವಾಡಿದರು. 34 ರನ್ ಗಳಿಸಿ ಕ್ರೀಸ್‌ನಲ್ಲಿ ಉಳಿದರು. ಕೊನೆಯ ದಿನದಾಟದಲ್ಲಿ 31 ರನ್ ಸೇರಿಸಿ ಔಟಾದರು. ಆ ಮೂಲಕ ಐದು ದಿನಗಳಲ್ಲಿ
ಯೂ ಕ್ರೀಸ್‌ನಲ್ಲಿ ಕಾಣಿಸಿಕೊಂಡರು. ಅವರು ಒಟ್ಟು 207 ರನ್ ಸೇರಿಸಿದರು.

## ರೊನಾಲ್ಡೊಗೆ 200ನೇ ಪಂದ್ಯ


ರೊನಾಲ್ಡೊ

**ಲಿಸ್ಬನ್ (ಎಎಫ್‌ಪಿ):** ಪೋರ್ಚುಗಲ್ ಫುಟ್‌ಬಾಲ್ ತಂಡದ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಮತ್ತೊಂದು ದಾಖಲೆಗೆ ಭಾಜನರಾದರು.

ಐಸ್‌ಲ್ಯಾಂಡ್ ವಿರುದ್ಧ ಮಂಗಳವಾರ ತಡರಾತ್ರಿ ನಡೆದ ಯೂರೊ ಕಪ್ ಟೂರ್ನಿಯ ಅರ್ಹತಾ ಪಂದ್ಯ ಅವರಿಗೆ 200ನೇ ಅಂತರರಾಷ್ಟ್ರೀಯ ಪಂದ್ಯ ಎನಿಸಿತು. ಈ ಸಾಧನೆ ಮಾಡಿದ ಮೊದಲ ಆಟಗಾರ ಎಂಬ ಗೌರವ ಅವರಿಗೆ ಲಭಿಸಿತು.

ರೊನಾಲ್ಡೊ ಅವರು ಇದೇ ವರ್ಷದ ಮಾರ್ಚ್‌ನಲ್ಲಿ ಲಿಕ್ಸ್‌ಟೆನ್‌ಸ್ಟೈನ್ ವಿರುದ್ಧದ ಪಂದ್ಯದೊಂದಿಗೆ ಅತಿ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ್ದ ದಾಖಲೆ ತಮ್ಮದಾಗಿಸಿಕೊಂಡಿದ್ದರು. ಆ ಪಂದ್ಯ ಅವರಿಗೆ 197ನೆಯದಾಗಿತ್ತು.

# ವಾಟರ್ ಪೋಲೊ, ಡೈವಿಂಗ್ ಇಂದಿನಿಂದ

## ಮೊದಲ ಸಲ ಪ್ರತ್ಯೇಕ ಸ್ಪರ್ಧೆಗಳ ಆಯೋಜನೆ; ಬೆಂಗಳೂರಿಗೆ ಲಭಿಸಿದ ಅವಕಾಶ

ಪ್ರಜಾವಾಣಿ ವಾರ್ತೆ


ವಾಟರ್ ಪೋಲೊ ಪಂದ್ಯವೊಂದರ ದೃಶ್ಯ

**ಬೆಂಗಳೂರು:** ಮುಂಗಾರು ಮಳೆ ಕಾಲಿಟ್ಟಿರುವ ಉದ್ಯಾನನಗರಿಯಲ್ಲಿ ರಾಷ್ಟ್ರೀಯ ವಾಟರ್ ಪೋಲೊ ಮತ್ತು ಡೈವಿಂಗ್ ಚಾಂಪಿಯನ್‌ಷಿಪ್ ಆಯೋಜಿಸಲು ವೇದಿಕೆ ಸಜ್ಜಾಗಿದೆ.

ಇದೇ ಮೊದಲ ಬಾರಿಗೆ ಈ ಎರಡೂ ಕ್ರೀಡೆಗಳನ್ನು ಪ್ರತ್ಯೇಕವಾಗಿ ನಡೆಸಲಾಗುತ್ತಿದೆ. 75 ವರ್ಷಗಳಿಂದ ಈಜು ಚಾಂಪಿಯನ್‌ಷಿಪ್ ಭಾಗವಾಗಿ ಈ ಎರಡೂ ಕ್ರೀಡೆಗಳು ಆಯೋಜನೆಗೊಳ್ಳುತ್ತಿದ್ದವು. ಬುಧವಾರದಿಂದ ಜೂನ್ 25ರವರೆಗೆ ಬಸವನಗುಡಿ ಈಜು ಕೇಂದ್ರದಲ್ಲಿ ವಾಟರ್ ಪೋಲೊ ನಡೆಯಲಿದೆ. 22 ರಿಂದ 24ರವರೆಗೆ ಜ್ಞಾನಭಾರತಿಯಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ಈಜುಗೊಳದಲ್ಲಿ ಡೈವಿಂಗ್ ಸ್ಪರ್ಧೆಗಳು ಆರಂಭಗೊಳ್ಳಲಿವೆ. ಐದು ದಿನಗಳ ಕಾಲ ನಡೆಯಲಿವೆ. ಬೇರೆ ಬೇರೆ ರಾಜ್ಯಗಳಿಂದ 54 ಡೈವಿಂಗ್ ಪಟುಗಳು ಕಣಕ್ಕಿಳಿಯಲಿದ್ದಾರೆ.

‘ಈಜು ಮತ್ತು ಜಲಕ್ರೀಡೆಗಳಲ್ಲಿ ಕರ್ನಾಟಕವು ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ಇದೇ ಮೊದಲ ಸಲ ಪ್ರತ್ಯೇಕವಾಗಿ ಡೈವಿಂಗ್ ಹಾಗೂ ವಾಟರ್ ಪೋಲೊ ನಡೆಸುವ ಮಹತ್ವದ ಕಾರ್ಯವೂ ರಾಜ್ಯಕ್ಕೆ ಲಭಿಸಿದೆ. ಪುರುಷರ ವಿಭಾಗದಲ್ಲಿ 12 ತಂಡಗಳು ಹಾಗೂ ಮಹಿಳೆಯರ ಒಂಬತ್ತು ತಂಡಗಳು ಸ್ಪರ್ಧಿಸಲಿವೆ’ ಎಂದು ಕರ್ನಾಟಕ ಈಜು ಸಂಸ್ಥೆ (ಕೆಎಸ್‌ಎ) ಅಧ್ಯಕ್ಷ ಗೋಪಾಲ್ ಬಿ. ಹೊಸೂರ್ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಈ ಹಿಂದೆ ಕೇವಲ ಎಂಟು ರಾಜ್ಯಗಳು (ಪ್ರತಿ ವಲಯದಿಂದ 2 ತಂಡಗಳು) ಮಾತ್ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುತ್ತಿದ್ದವು. ಈಗ ಹೆಚ್ಚು ತಂಡಗಳು ಭಾಗವಹಿಸುತ್ತವೆ. ಕರ್ನಾಟಕ, ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಉತ್ತರಪ್ರದೇಶ, ರೈಲ್ವೆಸ್, ಸರ್ವಿಸಸ್ ಮತ್ತು ಪೊಲೀಸ್ ತಂಡಗಳಿವೆ. ಅಸ್ಸಾಂ, ದೆಹಲಿ, ಗುಜರಾತ್, ಹರಿಯಾಣ, ಮಣಿಪುರ, ಪಂಜಾಬ್, ತಮಿಳುನಾಡು ಮತ್ತು ತೆಲಂಗಾಣದಿಂದಲೂ ಸ್ಪರ್ಧಿಗಳು ಕಣದಲ್ಲಿದ್ದಾರೆ’ ಎಂದು ಹೇಳಿದರು.

‘ಈಜು ಸ್ಪರ್ಧೆಗಳೊಂದಿಗೆ ಈ ಎರಡೂ ಕ್ರೀಡೆಗಳು ನಡೆದಾಗ ಹೆಚ್ಚು ಗಮನ ಸೆಳೆಯುತ್ತಿದ್ದಿಲ್ಲ. ಆದರೆ ಆಕರ್ಷಕ ಮತ್ತು ಸಾಹಸಮಯವಾಗಿರುವ ಈ ಕ್ರೀಡೆಗಳಿಗೂ ಪ್ರಾಧಾನ್ಯತೆ ನೀಡಲು ಭಾರತ ಈಜು ಫೆಡರೇಷನ್ ಈ ಕ್ರಮ ಕೈಗೊಂಡಿದೆ. ಕರ್ನಾಟಕದಲ್ಲಿ ಹೆಚ್ಚು ಡೈವಿಂಗ್ ಸೌಲಭ್ಯಗಳಿರುವ ಈಜುಗೊಳಗಳು ಇಲ್ಲ. ಸದ್ಯ ಇರುವ ಸೌಲಭ್ಯಗಳಲ್ಲಿ ಆಯೋಜನೆಗೊಳ್ಳಲಿವೆ. ವಾಟರ್ ಪೋಲೊ ತಾಂತ್ರಿಕ ತಂಡಕ್ಕೆ ಮಯಂಕ್ ಪಟೇಲ್ ಹಾಗೂ ಡೈವಿಂಗ್ ತಾಂತ್ರಿಕ ತಂಡಕ್ಕೆ ಮಯೂರ್ ವ್ಯಾಸ್ ಅವರು ಮುಖ್ಯಸ್ಥರಾಗಿದ್ದಾರೆ. ಒಲಿಂಪಿಕ್ ಕೂಟ ಸೇರಿದಂತೆ ಫಿನಾ ಕೂಟಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಇವರಿಗೆ ಇದೆ’ ಎಂದೂ ತಿಳಿಸಿದರು.

ಕೆಎಸ್‌ಎ ಉಪಾಧ್ಯಕ್ಷ ರಕ್ಷಿತ್ ಎನ್ ಜಗದಾಳೆ, ಸಹಕಾರ್ಯದರ್ಶಿಗಳಾದ ರಮ್ಯಾ ಬಾಲಕೃಷ್ಣ, ಎಸ್. ಸುಂದರೇಶ್, ಟಿ.ಡಿ. ವಿಜಯ ರಾಘವನ್, ರಾಮಾನುಜನ್ ಹಾಜರಿದ್ದರು.

## ಪ್ಯಾರಿಸ್ ಒಲಿಂಪಿಕ್ಸ್ ಕೇಂದ್ರ ಕಚೇರಿಯಲ್ಲಿ ಶೋಧ

**ಪ್ಯಾರಿಸ್ (ರಾಯಿಟರ್ಸ್):** ಪ್ಯಾರಿಸ್ 2024ರ ಒಲಿಂಪಿಕ್ಸ್ ಸಂಘಟನಾ ಸಮಿತಿಯ ಪ್ರಧಾನ ಕಚೇರಿಯ ಮೇಲೆ ಪೊಲೀಸರು ಮಂಗಳವಾರ ಶೋಧ ನಡೆಸಿದರು. ಭ್ರಷ್ಟಾಚಾರ ಆರೋಪಗಳ ತನಿಖೆಯ ಭಾಗವಾಗಿ ಈ ತಪಾಸಣೆ ನಡೆದಿದೆ.

ಸಾರ್ವಜನಿಕ ಹಣ ದುರುಪಯೋಗ, ಸ್ವಜನ ಪಕ್ಷಪಾತ ಆರೋಪಗಳ ಬೆನ್ನಲ್ಲೇ ಈ ಶೋಧ ಕಾರ್ಯ ನಡೆದಿದೆ. ಒಲಿಂಪಿಕ್ಸ್ ಮೂಲಸೌಕರ್ಯ ನಿರ್ಮಾಣದ ಪಾಲುದಾರ ಸಂಸ್ಥೆ ಕಚೇರಿ ಮೇಲೂ ತಪಾಸಣೆ ನಡೆದಿದೆ.

ಒಲಿಂಪಿಕ್ಸ್ ಸಂಘಟನಾ ಸಮಿತಿ ಮಾಡಿಕೊಂಡ ಗುತ್ತಿಗೆ ಒಪ್ಪಂದಗಳಿಗೆ ಸಂಬಂಧಿಸಿ 2017ರಲ್ಲಿ ಪೂರ್ವಭಾವಿ ತನಿಖೆ ನಡೆದಿತ್ತು. ಅದರ ಮುಂದುವರಿದ ಭಾಗವಾಗಿ ಪ್ರಧಾನ ಕಚೇರಿಯ ಮೇಲೆ ಶೋಧ ನಡೆದಿದೆ ಎಂದು ರಾಷ್ಟ್ರೀಯ ಹಣಕಾಸು ಪ್ರಾಸಿಕ್ಯೂಟರ್ ಕಚೇರಿ (ಪಿಎನ್‌ಎಫ್) ತಿಳಿಸಿದೆ.

ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ಸ್‌ಗೆ ಮೂಲಸೌಕರ್ಯ ನಿರ್ಮಾಣದ ಹೊಣೆ ವಹಿಸಿರುವ ಸಾರ್ವಜನಿಕ ಸಂಸ್ಥೆಯ ಕೇಂದ್ರ ಕಚೇರಿ ‘ಸಾಲಿಡಿಯೊ’ ಮೇಲೆಯೂ ದಾಖಲೆಗಳಿಗೆ ಶೋಧ ನಡೆದಿದೆ. ಫ್ರಾನ್ಸ್‌ನ ಭ್ರಷ್ಟಾಚಾರ ನಿಗ್ರಹ ಏಜನ್ಸಿಯು ಲೆಕ್ಕಪತ್ರ ತಪಾಸಣೆಯ ಬಳಿಕ 2022ರಲ್ಲೂ ದಾಳಿ ನಡೆದಿತ್ತು.

‘ಸಂಘಟನಾ ಸಮಿತಿಯ ಕೇಂದ್ರ ಕಚೇರಿಯಲ್ಲಿ ಶೋಧ ನಡೆಯುತ್ತಿದೆ. ತನಿಖಾಧಿಕಾರಿಗಳಿಗೆ ವಿಚಾರಣೆಗೆ ಸಂಪೂರ್ಣ ಸಹಕಾರ ನೀಡುತ್ತಿದ್ದೇವೆ’ ಎಂದು ಪ್ಯಾರಿಸ್ 2024 ಹೇಳಿಕೆಯಲ್ಲಿ ತಿಳಿಸಿದೆ. ಪ್ಯಾರಿಸ್ ಒಲಿಂಪಿಕ್ಸ್ ಮುಂದಿನ ವರ್ಷದ ಜುಲೈ 26 ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ. ಪ್ಯಾರಾ ಲಿಂಪಿಕ್ಸ್ ಆ. 28 ರಿಂದ ಸೆ. 6ರವರೆಗೆ ನಿಗದಿಯಾಗಿದೆ.

### ಎಎಫ್‌ಸಿ ಏಷ್ಯಾ ಕಪ್: ಭಾರತಕ್ಕೆ ಸೋಲು

**ಪಥುಮ್ ಥಾನಿ, ಥಾಯ್ಲೆಂಡ್ (ಪಿಟಿಐ):** ಎಎಫ್‌ಸಿ 17 ವರ್ಷದೊಳಗಿನವರ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ‘ಡಿ’ ಗುಂಪಿನ ತನ್ನ ಎರಡನೇ ಪಂದ್ಯದಲ್ಲಿ ಭಾರತ, 0–1 ರಲ್ಲಿ ಉಜ್ಬೆಕಿಸ್ತಾನ ಎದುರು ಪರಾಭವಗೊಂಡಿತು.

ಭಾರತ ತಂಡದ ಕ್ವಾರ್ಟರ್ ಫೈನಲ್ ಪ್ರವೇಶದ ಸಾಧ್ಯತೆ ಕ್ಷೀಣಿಸಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ಮುಕಮ್ಮದೆಲಿ ರೆಮೊವ್ 82ನೇ ನಿಮಿಷದಲ್ಲಿ ಉಜ್ಬೆಕಿಸ್ತಾನ ಪರ ಗೋಲು ಗಳಿಸಿದರು.

ಭಾರತ ನಾಕೌಟ್ ಪ್ರವೇಶಿಸಬೇಕಾದರೆ, ಶುಕ್ರವಾರ ನಡೆಯಲಿರುವ ಕೊನೆಯ ಲೀಗ್ ಪಂದ್ಯದಲ್ಲಿ ಜಪಾನ್ ವಿರುದ್ಧ ಗೆಲ್ಲಲೇಬೇಕು. ಮಾತ್ರವಲ್ಲ, ಮತ್ತೊಂದು ಪಂದ್ಯದಲ್ಲಿ ಉಜ್ಬೆಕಿಸ್ತಾನ ತಂಡ ವಿಯೆಟ್ನಾಂ ಕೈಯಲ್ಲಿ ಸೋಲಬೇಕು.



## ಏಷ್ಯನ್ ಗೇಮ್ಸ್: ಭಾರತದ ಟೆನಿಸ್ ತಂಡ ಪ್ರಕಟ

# ತಂಡ ಮುನ್ನಡೆಸಲಿರುವ ಬೋಪಣ್ಣ, ಅಂಕಿತಾ


ರೋಹನ್ ಬೋಪಣ್ಣ


ಅಂಕಿತಾ ರೈನಾ

**ನವದೆಹಲಿ (ಪಿಟಿಐ):** ಏಷ್ಯನ್ ಕ್ರೀಡಾಕೂಟಕ್ಕೆ 12 ಸದಸ್ಯರ ತಂಡವನ್ನು ಅಖಿಲ ಭಾರತ ಟೆನಿಸ್ ಸಂಸ್ಥೆ ಮಂಗಳವಾರ ಪ್ರಕಟಿಸಿದೆ. ಡಬಲ್ಸ್ ಪರಿಣತ ರೋಹನ್ ಬೋಪಣ್ಣ ಅವರು ಭಾರತದ ಸವಾಲಿನ ನೇತೃತ್ವ ವಹಿಸುವರು.

ಚೀನಾದ ಹಾಂಗ್‌ಜೌದಲ್ಲಿ ಸೆ. 23 ರಂದು ಈ ಕ್ರೀಡಾಕೂಟ ಆರಂಭವಾಗಲಿದೆ. ಜಕಾರ್ತಾದಲ್ಲಿ ರಾಮಕುಮಾರ್ ರಾಮನಾಥನ್ ಜೊತೆ ಡಬಲ್ಸ್ ಆಡುವ ಮೂಲಕ ಏಷ್ಯನ್ ಗೇಮ್ಸ್‌ಗೆ ಪದಾರ್ಪಣೆ ಮಾಡಿದ್ದ ಸುಮಿತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಅವರು ಸಿಂಗಲ್ಸ್‌ನಲ್ಲಿ ಆಡುವ ಸಾಧ್ಯತೆ ಇದೆ.

43 ವರ್ಷದ ಬೋಪಣ್ಣ ಅವರು ರಾಮಕುಮಾರ್ ರಾಮನಾಥನ್ ಜೊತೆಗೂಡಿ ಡಬಲ್ಸ್‌ನಲ್ಲಿ ಆಡಲಿದ್ದಾರೆ. ತಂಡದಲ್ಲಿರುವ ಇನ್ನಿಬ್ಬರಾದ ಯುಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಈಗಾಗಲೇ ಎಟಿಪಿ ಟೂರ್ನಿಗಳಲ್ಲಿ ಜೊತೆಗಾರರಾಗಿ ಆಡುತ್ತಿದ್ದಾರೆ.

ಜಕಾರ್ತಾದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಅಂಕಿತಾ ಮಹಿಳಾ ತಂಡದ ನೇತೃತ್ವ ವಹಿಸಲಿದ್ದಾರೆ.

2018ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಒಂದು ಚಿನ್ನ, ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿತ್ತು. ಬೋಪಣ್ಣ– ದಿವಿಜ್ ಶರಣ್ ಜೋಡಿ ಚಿನ್ನದ ಪದಕ ಗೆದ್ದರೆ, ಪುರುಷರ ಸಿಂಗಲ್ಸ್‌ನಲ್ಲಿ ಪ್ರಜ್ಞೇಶ್ ಗುಣೇಶ್ವರನ್ ಕಂಚಿನ ಪದಕ ಜಯಿಸಿದ್ದರು.

ಭಾರತ ತಂಡದ ಮಾಜಿ ಆಟಗಾರ ರೋಹಿತ್ ರಾಜಪಾಲ್ ಅವರನ್ನು ಪುರುಷರ ತಂಡದ ನಾಯಕರಾಗಿದ್ದು, ಅಂಕಿತಾ ಮಹಿಳಾ ತಂಡಕ್ಕೆ ನಾಯಕಿ ಆಗಿದ್ದಾರೆ. ಮಹಿಳಾ ತಂಡದಲ್ಲಿರುವ ಸಹಜಾ ಯಮಲಪಲ್ಲಿ ಮತ್ತು ವೈದೇಹಿ ಚೌಧರಿ ಮೊದಲ ಬಾರಿ ಏಷ್ಯನ್ ಗೇಮ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

**ತಂಡ ಹೀಗಿದೆ:** ಪುರುಷರು: ಸುಮಿತ್ ನಗಾಲ್, ಶಶಿಕುಮಾರ್ ಮುಕುಂದ್, ರಾಮಕುಮಾರ್ ರಾಮನಾಥನ್, ಯುಕಿ ಭಾಂಬ್ರಿ, ರೋಹನ್ ಬೋಪಣ್ಣ ಮತ್ತು ಸಾಕೇತ್ ಮೈನೇನಿ.

ಮಹಿಳೆಯರು: ಅಂಕಿತಾ ರೈನಾ, ಕರ್ಮನ್ ಕೌರ್ ತಾಂಡಿ, ರುತುಜಾ ಭೋಸ್ಲೆ, ಸಹಜಾ ಯಮಲಪಲ್ಲಿ, ವೈದೇಹಿ ಚೌಧರಿ, ಪ್ರಾರ್ಥನಾ ತೋಂಬರೆ

## ವಿಶ್ವ ಬ್ಯಾಡ್ಮಿಂಟನ್ ರ‍್ಯಾಂಕಿಂಗ್: 3ನೇ ಸ್ಥಾನಕ್ಕೇರಿದ ಸಾತ್ವಿಕ್– ಚಿರಾಗ್


ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

**ನವದೆಹಲಿ (ಪಿಟಿಐ):** ಇತ್ತೀಚೆಗಷ್ಟೇ ತಮ್ಮ ಚೊಚ್ಚಲ ಸೂಪರ್ 1000 ದರ್ಜೆಯ ಬ್ಯಾಡ್ಮಿಂಟನ್ ಟೂರ್ನಿಯನ್ನು ಗೆದ್ದುಕೊಂಡ ಭಾರತದ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಪ್ರಕಟವಾಗಿರುವ ಬಿಡಬ್ಲ್ಯುಎಫ್ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ ಮೂರನೇ ಸ್ಥಾನಕ್ಕೆ ಏರಿದ್ದಾರೆ.

ಭಾರತದ ಜೋಡಿ, ಇಂಡೊನೇಷ್ಯಾದಲ್ಲಿ ಭಾನುವಾರ ನಡೆದ ವಿಶ್ವ ಟೂರ್ ಸೂಪರ್ 1000 ಟೂರ್ನಿಯ ಫೈನಲ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್, ಮಲೇಷ್ಯಾದ ಆರನ್ ಚಿಯಾ– ಸೊವೂಯಿ ಯಿಕ್ ಜೋಡಿಯನ್ನು ನೇರ ಸೆಟ್‌ಗಳಿಂದ ಸೋಲಿಸಿತ್ತು. ಕಳೆದ ಬಾರಿಯ ಕ್ರಮಾಂಕಪಟ್ಟಿಯಲ್ಲಿ ಭಾರತದ ಆಟಗಾರರು ನಾಲ್ಕನೇ ಸ್ಥಾನದಲ್ಲಿದ್ದರು.

2023ರಲ್ಲಿ ಚಿರಾಗ್ ಶೆಟ್ಟಿ–ರಣಕಿರೆಡ್ಡಿ ಉತ್ತಮ ಯಶಸ್ಸು ಕಾಣುತ್ತಿದ್ದಾರೆ. ಎರಡು ವಿಶ್ವ ಟೂರ್ ಪ್ರಶಸ್ತಿ ಗಳ ಜೊತೆಗೆ ಸ್ವಿಸ್ ಓಪನ್ ಮತ್ತು ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಪುರುಷರ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ ಭಾರತೀಯ ಆಟಗಾರರ ಪೈಕಿ ಎಚ್.ಎಸ್.ಪ್ರಣಯ್ ಮುಂಚೂಣಿಯಲ್ಲಿದ್ದು 9ನೇ ಸ್ಥಾನ ಕಾಪಾಡಿಕೊಂಡಿದ್ದಾರೆ.

ಕಿದಂಬಿ ಶ್ರೀಕಾಂತ್ ಮೂರು ಸ್ಥಾನಗಳಷ್ಟು ಬಡ್ತಿ ಪಡೆದಿದ್ದು, 19ನೇ ಸ್ಥಾನದಲ್ಲಿದ್ದಾರೆ. ಲಕ್ಷ್ಯಸೇನ್ 18ನೇ ಸ್ಥಾನದಲ್ಲಿದ್ದಾರೆ.

ಉದಯೋನ್ಮುಖ ಆಟಗಾರ ಪ್ರಿಯಾಂಶು ರಾಜಾವತ್ ಅವರೂ ಜೀವನಶ್ರೇಷ್ಠ ಸಾಧನೆ ತೋರಿದ್ದು 30ನೇ ಸ್ಥಾನಕ್ಕೇರಿದ್ದಾರೆ. ಈ ಹಿಂದೆ 34ನೇ ಸ್ಥಾನದಲ್ಲಿದ್ದರು.

ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ಮಹಿಳಾ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ ಕುಸಿತ ತಡೆದಿದ್ದು 12ನೇ ಸ್ಥಾನದಲ್ಲಿದ್ದಾರೆ. ಸೈನಾ ನೆಹ್ವಾಲ್ 31ನೇ ಸ್ಥಾನದಲ್ಲಿದ್ದಾರೆ.

## ಕ್ರಿಕೆಟ್: ನಿತಿನ್ ನಾಯ್ಡುಗೆ 12 ವಿಕೆಟ್

**ಬೆಂಗಳೂರು:** ಒಟ್ಟು ಒಂದು ಡಜನ್ ವಿಕೆಟ್ ಗಳಿಸಿದ ಎಡಗೈ ಸ್ಪಿನ್ನರ್ ನಿತಿನ್ ನಾಯ್ಡು (49ಕ್ಕೆ4 ಮತ್ತು 68ಕ್ಕೆ8) ಅವರ ಅಮೋಘ ಬೌಲಿಂಗ್ ಬಲದಿಂದ ಹೆರಾನ್ಸ್ ಕ್ರಿಕೆಟ್ ಕ್ಲಬ್ ತಂಡವು ಎಂ.ಎ.ಟಿ. ಆಚಾರ್ಯ ಶೀಲ್ಡ್‌ಗಾಗಿ ನಡೆಯುತ್ತಿರುವ ಕೆಎಸ್‌ಸಿಎ 1 ಮತ್ತು 2ನೇ ಡಿವಿಷನ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಹೆರಾನ್ಸ್ ತಂಡವು 3 ವಿಕೆಟ್‌ಗಳಿಂದ ಜವಾಹರ್ ಸ್ಪೋರ್ಟ್ಸ್ ಕ್ಲಬ್ (1) ವಿರುದ್ಧ ಗೆದ್ದಿತು. ನಿತಿನ್ ನಾಯ್ಡು ಎರಡೂ ಇನಿಂಗ್ಸ್‌ಗಳಲ್ಲಿ ಮಿಂಚಿದರು. ತಂಡದ ಆರಂಭಿಕ ಬ್ಯಾಟರ್ ವಿನೀತ್ ಮಂಜುನಾಥ್ (154; 177ಎ, 4X21, 6X4) ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದರು.

**ಸಂಕ್ಷಿಪ್ತ ಸ್ಕೋರು:** ಹೆರಾನ್ಸ್ ಸಿಸಿ: ಮೊದಲ ಇನಿಂಗ್ಸ್ 67.2 ಓವರ್‌ಗಳಲ್ಲಿ 299 (ವಿನೀತ್ ಮಂಜುನಾಥ್ 154, ಅರ್ಜುನ್ ಎಸ್.ಪಿ 28, ರೋಹಿತ್ ಗೌಡ 76, ಸೌರಭ್ ಮುತ್ತೂರ್ 91ಕ್ಕೆ7) ಜವಾಹರ್ ಸ್ಪೋರ್ಟ್ಸ್ ಕ್ಲಬ್: 48.2 ಓವರ್‌ಗಳಲ್ಲಿ 174 (ಜಯೇಶ್ ಬಾಬು 30, ಸೌರಭ್ ಮುತ್ತೂರ್ 34, ನಿತಿನ್ ನಾಯ್ಡು 49ಕ್ಕೆ4, ಅಮೋಘ ಶ್ರೀಕಾಂತ್ 38ಕ್ಕೆ4, ಆದರ್ಶ್ ಪ್ರಕಾಶ್ 26ಕ್ಕೆ2) ಎರಡನೇ ಇನಿಂಗ್ಸ್: ಹೆರಾನ್ಸ್ ಸಿಸಿ: 16.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 73 (ಸುಭಾಶ್ ಅಡಿಗಾ 37, ಜಯೇಶ್ ಬಾಬು 30ಕ್ಕೆ4, ಡೊಕಾ ಅಮೋಘ 10ಕ್ಕೆ2), ಜವಾಹರ್ ಸ್ಪೋರ್ಟ್ಸ್ ಕ್ಲಬ್: 55.1 ಓವರ್‌ಗಳಲ್ಲಿ 197 (ರಘುವೀರ್ 60, ಜಯೇಶ್ ಬಾಬು 25, ಚೈತನ್ಯ 65, ಆದರ್ಶ ಪ್ರಕಾಶ್ 51ಕ್ಕೆ2, ನಿತಿನ್ ನಾಯ್ಡು 68ಕ್ಕೆ8) ಹೆರಾನ್ಸ್ ಕ್ರಿಕೆಟ್ ಕ್ಲಬ್‌ಗೆ 3 ವಿಕೆಟ್‌ಗಳ ಜಯ, ಐದು ಅಂಕ ಮತ್ತು ಜವಾಹರ್‌ಗೆ 1 ಅಂಕ.

**ಚಿಂತಾಮಣಿ ಕ್ರೀಡಾ ಸಂಸ್ಥೆ, ಚಿಂತಾಮಣಿ:** 38.1 ಓವರ್‌ಗಳಲ್ಲಿ 156 (ಆದಿತ್ಯ ಕೆ ಉಡುಪ 23, ಸಹರ್ಷ ರೆಡ್ಡಿ 21, ರಾಜಶೇಕರ್ ಹರಿಕಾಂತ್ 25, ಎನ್. ರೋಹನ್ 32ಕ್ಕೆ2, ಅಬ್ರಾರ್ ಖಾಜಿ 24ಕ್ಕೆ4, ಗೊರ್ಲಿ ದುರ್ಗಾಪ್ರಸಾದ್ 18ಕ್ಕೆ2) ವಿಲ್ಸನ್ ಗಾರ್ಡನ್ ಸಿಸಿ: 36.3 ಓವರ್‌ಗಳಲ್ಲಿ 131 (ರಘುವೀರ್ ರಾಜಪುರೋಹಿತ್ 38, ರಿಷಭ್ ನವರತನ್ 21, ನೇಥನ್ ಡಿ ಮೆಲ್ಲೊ 71ಕ್ಕೆ8, ಆಶಿಶ್ ನಾಯಕ 14ಕ್ಕೆ2) ಎರಡನೇ ಇನಿಂಗ್ಸ್: 35.3 ಓವರ್‌ಗಳಲ್ಲಿ 112 (ರಿಷಿನ್ ಅರಿಂಜಯ್ 20, ರಾಜಶೇಖರ್ ಹರಿಕಾಂತ್ 50, ಮೀರ್ ಕೌನೇನ್ ಅಬ್ಬಾಸ್ 25, ಅಬ್ರಾರ್ ಖಾಜಿ 44ಕ್ಕೆ7), ವಿಲ್ಸನ್ ಗಾರ್ಡನ್: 17.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 93 (ಎಂ.ಕೆ. ಯಶವಂತ್ 39, ರಘುವೀರ್ ರಾಜಪುರೋಹಿತ್ ಔಟಾಗದೆ 26) ವಿಲ್ಸನ್ ಗಾರ್ಡನ್ ತಂಡಕ್ಕೆ 8 ವಿಕೆಟ್‌ಗಳ ಜಯ ಹಾಗೂ ಐದು ಅಂಕ. ಚಿಂತಾಮಣಿಗೆ 1 ಅಂಕ.

**ದ ಬೆಂಗಳೂರು ಕ್ರಿಕೆಟರ್ಸ್:** 81.1 ಓವರ್‌ಗಳಲ್ಲಿ 292 (ಆರ್. ಅಕ್ಷಯರ್ 116, ಕೆ.ಬಿ. ಶ್ರೇಯಸ್ 36, ಎಸ್. ಚೇತನ್ 71, ಮಂಜುನಾಥ್ 26, ಶ್ರೇಯಸ್ ಕುಮಾರ್ 15ಕ್ಕೆ2, ಪ್ರಾಣೇಶ್ ದೇಸಾಯಿ 88ಕ್ಕೆ4), ಮಾಡರ್ನ್ ಸಿಸಿ: 68.1 ಓವರ್‌ಗಳಲ್ಲಿ 280 (ಎಂ.ಆರ್. ಜಯಂತ್ 26, ಪ್ರೇಮನಾಥ್ ಜೆ ಗೋಡೆ 31, ಕಾರ್ತಿಕ್ ರಾಮಣ್ಣ 36, ಎಸ್.ಎ. ಸಚಿನ್ 75, ಪ್ರಣವ್ ಅಶ್ವಥ್ 64, ಮಂಜುನಾಥ್ 48ಕ್ಕೆ3, ಮನೋಜ್ ಕುಮಾರ್ 45ಕ್ಕೆ2, ಪವನ್ ಕುಮಾರ್ 31ಕ್ಕೆ2, ಅಕ್ಷಯ್ 28ಕ್ಕೆ3) ಪಂದ್ಯ ಡ್ರಾ.


ಪರ್ವೇಜ್ ಅಹ್ಮದ್

## ಟೆನ್‌ಪಿನ್: ಪರ್ವೇಜ್ ಅಹ್ಮದ್‌ಗೆ ಮುನ್ನಡೆ

**ಬೆಂಗಳೂರು:** ಪರ್ವೇಜ್ ಅಹ್ಮದ್ ಅವರು ಇಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಟೆನ್‌ಪಿನ್ ಬೌಲಿಂಗ್ ಲೀಗ್‌ನ ಪುರುಷರ ವಿಭಾಗದಲ್ಲಿ ಮೊದಲ ಸುತ್ತಿನ ಅಂತ್ಯಕ್ಕೆ ಮುನ್ನಡೆ ಸಾಧಿಸಿದ್ದಾರೆ.

ಇಲ್ಲಿನ ಚರ್ಚ್‌ಸ್ಟ್ರೀಟ್‌ನಲ್ಲಿರುವ ಅಮೀಬಾದಲ್ಲಿ ನಡೆಯುತ್ತಿರುವ ನಾಲ್ಕು ವಾರಗಳ ಲೀಗ್‌ನಲ್ಲಿ ಪರ್ವೇಜ್ ಅಹ್ಮದ್ ಮೊದಲ ಸುತ್ತಿನ ಅಂತ್ಯಕ್ಕೆ ಒಟ್ಟು 1224 ಪಾಯಿಂಟ್ಸ್ ಗಳಿಸಿದರು.

ಸಾಹಿಲ್ ಪಂಜಾಬಿ (1093 ಪಾಯಿಂಟ್ಸ್) ಮತ್ತು ಷಣ್ಮುಗಾನಂದ (1092 ಪಾಯಿಂಟ್ಸ್) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಎರಡನೇ ಸುತ್ತಿನ ಪಂದ್ಯಗಳು ಜೂನ್ 24, 25 ಮತ್ತು 26ರಂದು ನಡೆಯಲಿದೆ. ಲೀಗ್‌ನಲ್ಲಿ 40ಕ್ಕೂ ಅಧಿಕ ಪುರುಷರು ಮತ್ತು 8 ಮಹಿಳೆಯರು ಸ್ಪರ್ಧಿಸುತ್ತಿದ್ದಾರೆ. ಒಟ್ಟು ₹1.80 ಲಕ್ಷ ಬಹುಮಾನ ಇದೆ ಎಂದು ಪ್ರಕಟಣೆ ತಿಳಿಸಿದೆ.

## ತೈಪೆ ಓಪನ್ ಟೂರ್ನಿ: ಪುರುಷರ ಡಬಲ್ಸ್‌ನಲ್ಲಿ ಭಾರತಕ್ಕೆ ನಿರಾಸೆ


ಪರುಪಳ್ಳಿ ಕಶ್ಯಪ್

**ತೈಪೆ (ಪಿಟಿಐ):** ಕೃಷ್ಣಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಗೌಡ್ ಜೋಡಿಯು ಮಂಗಳವಾರ ಇಲ್ಲಿ ಆರಂಭವಾದ ತೈಪೆ ಓಪನ್ ಬಿಡಬ್ಲ್ಯುಎಫ್ ವರ್ಲ್ಡ್ ಸೂಪರ್ 300 ಟೂರ್ನಿಯ ಪುರುಷರ ಡಬಲ್ಸ್‌ನ ಮೊದಲ ಸುತ್ತಿನಲ್ಲೇ ಅಮೆರಿಕದ ವಿನ್ಸನ್ ಚಿಯು ಮತ್ತು ಜೋಶುವಾ ಯುವಾನ್ ಜೋಡಿಗೆ ಶರಣಾಯಿತು.

ಇಂಡೊನೇಷ್ಯಾ ಓಪನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರ ಅನುಪಸ್ಥಿತಿಯಲ್ಲಿ ಎಂಟನೇ ಶ್ರೇಯಾಂಕದ ಈ ಜೋಡಿ ಡಬಲ್ಸ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಬೇಕಿತ್ತು. ಈ ಜೋಡಿ 54 ನಿಮಿಷ ಹೋರಾಟ ನಡೆಸಿ 18–21, 22–20, 16–21ರಲ್ಲಿ ಸೋಲೊಪ್ಪಿಕೊಂಡಿತು. ಮೊದಲ ಗೇಮ್ ಸೋತರೂ, ಎರಡನೇ ಗೇಮ್‌ನಲ್ಲಿ ಭಾರತದ ಜೋಡಿ ಪುಟಿದೆದ್ದು ಸಮಬಲ ಸಾಧಿಸಿತು. ಆದರೆ, ಮೂರನೇ ಗೇಮ್‌ನಲ್ಲಿ ಅಮೆರಿಕದ ಜೋಡಿ ಮೈಲುಗೈ ಸಾಧಿಸಿತು.

ಮಹಿಳೆಯರ ಡಬಲ್ಸ್‌ನಲ್ಲಿ ಪಾಂಡಾ ಸಹೋದರಿಯರಾದ ರುತುಪರ್ಣ ಮತ್ತು ಶ್ವೇತಪರ್ಣ ಜೋಡಿಯು ಅತಿಥೇಯ ದೇಶದ ಚೆಂಗ್ ಯು ಪೈ ಮತ್ತು ಸನ್ ವೆನ್ ಪೈ ವಿರುದ್ಧ 7–21, 30–28, 12–21ರಿಂದ ಪರಾಭವಗೊಂಡಿತು.

ಪುರುಷರ ಸಿಂಗಲ್ಸ್‌ನಲ್ಲಿ ಕೊಡೈ ನರವೊಕಾ ಕೂಡ ಹಿಂದೆ ಸರಿದಿದ್ದು, ಅವರ ಸ್ಥಾನಕ್ಕೆ ಪರುಪಳ್ಳಿ ಕಶ್ಯಪ್ ಆಯ್ಕೆಯಾಗಿದ್ದಾರೆ. ಅವರು ಜರ್ಮನಿಯ ಸ್ಯಾಮ್ಯುಯೆಲ್ ಹ್ಸಿಯಾವೊ ವಿರುದ್ಧ ಬುಧವಾರ ಸೆಣಸಲಿದ್ದಾರೆ.

ಇಂಡೊನೇಷ್ಯಾ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪರಾಭವಗೊಂಡಿದ್ದ ಮೂರನೇ ಶ್ರೇಯಾಂಕದ ಎಚ್.ಎಸ್. ಪ್ರಣಯ್ ಅವರು, ಅತಿಥೇಯ ದೇಶದ ಲಿನ್ ಯು ಸಿಯೆನ್ ಅವರ ಸವಾಲನ್ನು ಬುಧವಾರ ಎದುರಿಸಲಿದ್ದಾರೆ.